# ಅವ್ವಣೆವ್ವ ಕಾವ್ಯ

## ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಅಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಭೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ತತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಶಿಷ್ಟ ಸಾಹಿತ್ಯಕ್ಕೆ ಜನಪದ ಸಾಹಿತ್ಯ ಮೂಲದ್ರಯವ್ಯವೆಂಬುದು ಈಗಾಗಲೇ ಸಿದ್ಧವಾಗಿರುವ ಸಂಗತಿ. ಜನಪದ ಸಾಹಿತ್ಯದ ಬಹುಮುಖ್ಯವಾದ ಸೃಜನಶೀಲವಾದ ಭಾವನಾಪ್ರಧಾನವಾದ ಭಾಗವೆಂದರೆ ಅದರ ಸೋಂಕು ಮುರಿಯದ, ತಾಜಾತನದಲ್ಲಿ ಅದ್ದಿದ ವೈವಿಧ್ಯಮಯವಾದ ಜನಪದ ಕಾವ್ಯ. ಜನಪದ ಸಾಹಿತ್ಯದಲ್ಲಿ ಜನಪದರ ವಿಶಾಲ ಅನುಭವ, ಕಲ್ಪನಾಶೀಲತೆ, ಬುದ್ಧಿ ಕೌಶಲಗಳು ಹಾಗೂ ಭಾಷಾ ಪರಿಣತಿಗಳು ಸಂಗಮಗೊಂಡು ಅನೂನ ಕಥಾಸ್ರೋತ್ರವಾಗಿ ಹರಿಯುತ್ತವೆ. ಜನಪದ ಜೀವನದ ನೂರಾರು ಮಗ್ಗುಲುಗಳನ್ನು ತೀಕ್ಷಣವಾದ, ವ್ಯಂಗ್ಯವಾದ, ಸಹಜವಾದ, ಹಾಸ್ಯಮಯವಾದ, ಬೌದ್ಧಿಕವಾದ ಒಳನೋಟಗಳಿಂದ ಬಿಡಿಸುತ್ತ ಮನುಷ್ಯನ ಅದ್ಭುತ ಶಕ್ತಿಯ ವಿಸ್ತಾರ ವೈವಿಧ್ಯಗಳನ್ನು ದಾಖಲಿಸುತ್ತವೆ. ಆದರೆ, ಜನಪದ ಕಾವ್ಯ ಭಾವಮಯವಾದ ಸೂಕ್ಷ್ಮ ಸಂವೇದನಾಶೀಲವಾದ ವಿಶೇಷವಾಗಿ ನೋವು ಮತ್ತು ಪ್ರೀತಿಗಳ ಹಾಗೂ ಭಕ್ತಿ ಮತ್ತು ಪಾತಿವ್ರತ್ಯಗಳ ವಿವಿಧ ವರ್ಣಗಳ ಅರ್ಥಸಂಪನ್ನತೆಯನ್ನು, ಧ್ವನಿಸಂಪನ್ನತೆಯನ್ನು ಲಯಸಂಪನ್ನತೆಯನ್ನು, ಜೀವನಮೌಲ್ಯ ಸಂಪನ್ನತೆಯನ್ನು ಮಧುರ ಸಂಗೀತದ ಬಂಧದಲ್ಲಿ ಸ್ವಚ್ಛಂದವಾಗಿ ಕಟ್ಟಿ ನಮ್ಮ ಮನಸ್ಸು ಮತ್ತು ಭಾವಗಳನ್ನು ಆರ್ದ್ರಗೊಳಿಸುತ್ತವೆ, ಆನಂದಗೊಳಿಸುತ್ತವೆ ಮತ್ತು ಚಿಂತನೆಗೊಡ್ಡುತ್ತ ಆತ್ಮಾವಲೋಕನಕ್ಕೆ ಎಡೆಮಾಡಿಕೊಡುತ್ತವೆ. ಜಾನಪದದ ಸೃಜನಶೀಲ ವ್ಯಕ್ತಿಪ್ರಜ್ಞೆ ಮತ್ತು ಸಾಮುದಾಯಿಕ ಸಂವೇದನೆಗಳು ಇಲ್ಲಿ ಪರಂಪರೆಯ ಹಾಗೂ ವಾಸ್ತವ ಬದುಕಿನ ಸಾಂದ್ರ ಪ್ರಜ್ಞೆಯೊಡನೆ ಏಕೀಭವಿಸುತ್ತವೆ. ಜನಪದ ಮಹಾಕಾವ್ಯಗಳು, ಖಂಡಕಾವ್ಯಗಳು ಇಂತಹ ಪ್ರಸಿದ್ಧ ಹಾಗೂ ಜನಪ್ರಿಯ ಕಥಾನಕಗಳ ಮೂಲಕ ಜಾನಪದದ ಅನನ್ಯ ಸಿರಿಯನ್ನು ವಿಶಿಷ್ಟ ರೀತಿಯಲ್ಲಿ ನಮ್ಮ ಮುಂದೆ ತೆರೆಯುತ್ತವೆ. ಈಗಾಗಲೇ ಪ್ರಕಟವಾಗಿರುವ ಜನಪದ ಕಾವ್ಯಗಳು ಖಂಡಕಾವ್ಯಗಳು ಈ ದೃಷ್ಟಿಯಿಂದ ಗಮನಾರ್ಹ ಕೊಡುಗೆಗಳಾಗಿವೆ.

ಮೇಲಿನ ಹಿನ್ನೆಲೆಯಲ್ಲಿ "ಅವ್ವಣೆವ್ವ ಕಾವ್ಯ" ಇದೀಗ ಪ್ರಕಟವಾಗುತ್ತಿದೆ. ದಟ್ಟ ಜಾನಪದ ಪ್ರಜ್ಞೆಯ ಕೌಟುಂಬಿಕ ಹಿನ್ನೆಲೆಯುಳ್ಳ ಡಾ. ತಾರೀಹಳ್ಳಿ ಹನುಮಂತಪ್ಪ ಅವರು ಈ ಅವ್ವಣೆವ್ವ ಕಾವ್ಯದ ಮೂಲಕ ನಮ್ಮ ಜನಪದ ಖಂಡಕಾವ್ಯಗಳ ಸಂಖ್ಯೆಯನ್ನು ಮಾತ್ರವಲ್ಲ ವಿಶಿಷ್ಟತೆಯನ್ನು ಹೆಚ್ಚಿಸಿದ್ದಾರೆ. ಈ ಕಾವ್ಯದಲ್ಲಿ ಏಳು ಜನ ಗಂಡು ಮಕ್ಕಳನ್ನು ಹಡೆದರೂ ಹೆಣ್ಣು ಹಡೆಯಲಿಲಲ್ಲವೆಂಬ ಆಕೆಯ ದುಃಖ ಮತ್ತು ಆತಂಕಗಳು ನೆರಮನೆಯ ಹೆಣ್ಣು ಮಕ್ಕಳನ್ನು ಆದರಿಸುವ, ಪುರಸ್ಕರಿಸುವ ನೆಪದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಮಕ್ಕಳಿಲ್ಲದವರನ್ನು ಬಂಜೆ ಎಂದು ಕರೆಯುವ ಸಂಪ್ರದಾಯವಿದೆ. ಆದರೆ, ಹಣ್ಣನ್ನು ಹಡೆಯದವರು ಬಂಜೆ ಎಂಬ ಒಂದು ವಿಶಿಷ್ಟ ಆರೋಪ ಈಕೆಯ ಮೇಲೆ ಬರುತ್ತದೆ. ಇದರಿಂದಾಗಿ ಈ ಕಥಾನಕಕ್ಕೆ ಹೊಸ ದೃಷ್ಟಿಕೋನದ ತಿರುವೊಂದು ಪ್ರಾಪ್ತವಾಗುತ್ತದೆ. ಆಕೆಯ ತೀವ್ರವಾದ ಹೆಣ್ಣುಮಕ್ಕಳ ಹಂಬಲ, ಅದಕ್ಕಾಗಿ ಆಕೆಯ ಮನದಾಳದ ಪೂಜೆ, ಆರಾಧನೆಗಳು, ಪಾಪ ಪರಿಮಾರ್ಜನೆಗಾಗಿ ಮಾಡುವ ದೇಹ ದಂಡನೆಯ ರೂಪದ ದೈವಜ್ಞಾನಗಳ ಕಾರಣದಿಂದ ಆಕೆ ಕನಸಿನ ಫಲರೂಪದಲ್ಲಿ ಹೆಣ್ಣನ್ನು ಪಡೆಯುತ್ತಾಳೆ. ಈ ಕಥೆ ಚಿತ್ರ ವಿಚಿತ್ರ ರೂಪಗಳನ್ನು ಪಡೆಯುತ್ತ ಪುರಾಣಲೋಕ ಮತ್ತು ಇತಿಹಾಸ ಲೋಕಗಳ ಮೂಲಕ ಸಂಚರಿಸುತ್ತ ಮಹಾಭಾರತದ ಕಥೆಯ ಬಲೆಯೊಳಗೆ ನುಸುಳುತ್ತ ಮಾನುಷ ಲೋಕದಿಂದ ಅತಿಮಾನುಷ ಲೋಕದ ಕಡೆಗೆ ಕತೆ ಜಿಗಿಯುತ್ತಾ ಹೋಗುತ್ತದೆ. ವಂಶಾವಳಿಯ ಕಥೆಗಳು ಮಹಾಭಾರತದ ಕಥನಶೀಲತೆ, ಅರ್ಜುನ, ದ್ರೌಪದಿ, ಭೀಮ, ಶಕುನಿ ಮುಂತಾದ ಪಾತ್ರಗಳು ಅತ್ಯಂತ ಸರಳವಾಗಿ ಈ ಕಥಾ ಹಂದರದಲ್ಲಿ ಸೇರ್ಪಡೆಗೊಳ್ಳುತ್ತಾ ಕಥೆಯ ದಾರಿಯನ್ನು ನಿರ್ಮಾಣ ಮಾಡುತ್ತಾ ಹೋಗುತ್ತವೆ. ಕೊನೆಗೆ ಅವ್ವಣೆವ್ವ ಭೀಮನನ್ನು ಮದುವೆಯಾಗಿ ಧರ್ಮರಾಯನ ಮನೆಯನ್ನು ಸೇರುವಲ್ಲಿ ಕಥೆ ಪರ್ಯವಸಾನವಾಗುತ್ತದೆ. ವಾಸ್ತವ ಭೂಮಿಕೆಯಲ್ಲಿ ಹುಟ್ಟಿದ ಹೆಣ್ಣು ಮಗುವನ್ನು ಪಡೆಯುವ ಬಯಕೆ ಮೊಳೆಯುತ್ತಾ, ಬೆಳೆಯುತ್ತಾ ಎಲ್ಲೆಲ್ಲಿಯೋ ಸುತ್ತುತ್ತಾ ಜನಾಂಗದ ಸಾವು ಬದುಕಿನ ಕಥೆಯಾಗಿ ಪಾಂಡವರ ವಂಶದ ಮುಂದುವರಿಕೆಯಾಗಿ ಮುಕ್ತಾಯವಾಗುತ್ತದೆ. ನಮ್ಮ ಜನಪದರ ಕಲ್ಪನೆಯಲ್ಲಿ ಆಕಾಶ, ಭೂಮಿ ಮತ್ತು ಪಾತಾಳಗಳು ಸಹಜವಾಗಿಯೇ ಒಂದಾಗುತ್ತವೆ. ಅವರ ಬಾವ, ಭಾವನೆಗಳು ಯಾವ ಸ್ತರದಲ್ಲಿ ಅಂದರೆ ಆ ಸ್ತರದಲ್ಲಿ ಅತ್ಯಂತ ಸಹಜವಾಗಿ ಹಾಸುಹೊಕ್ಕಾಗುತ್ತಾ ಕುತೂಹಲಭರಿತವಾಗಿ ಸಾಗುತ್ತಾ ಕೇಳುಗರ ಮನಸ್ಸನ್ನು ಭಕ್ತಿ, ಸಾಹಸ, ಕತೂಹಲ, ಕಲ್ಪನೆಗಳ ಲಾಳಿಗಳಲ್ಲಿ ಮಗ್ಗವಾಡಿಸುತ್ತಾ ಸಾಗುತ್ತಾ ಒಂದು ಶಿಥಿಲ ಗುರಿಯನ್ನು ಮುಟ್ಟಿಬಿಡುತ್ತದೆ. ಇವುಗಳ ನಡು ನಡುವೆ ನಮ್ಮ ಹಳ್ಳಿಗರ, ಇಲ್ಲಿ ವಿಶೇಷವಾಗಿ ನಾಯಕರ ಮತ್ತು ರೆಡ್ಡಿ ಜನಾಂಗದವರ ಜೀವನದ ವಿಶೇಷತೆಗಳು, ನಂಬುಗೆ, ನಿಷ್ಠೆಗಳು ಆಶಯ ಮತ್ತು ಕಲ್ಪನೆಗಳು ಬೆಳೆಯುತ್ತಾ ಹೋಗುತ್ತವೆ. ಹೀಗಾಗಿ ಈ ಕಥೆ ಜನಪದದಲ್ಲಿ ಹುಟ್ಟಿ ಮಹಾಭಾರತದಲ್ಲಿ ಬೆಳೆದು ಜನಾಂಗದ ಸಂಪ್ರದಾಯಗಳ ಒಳಗೆ ನುಸುಳಿ ಸ್ವಾರಸ್ಯಕರವಾಗಿ ಸಾಗುತ್ತದೆ. ಈ ಕಾವ್ಯದ ಸೂಕ್ಷ್ಮ ಮತ್ತು ಬಹುಶಿಸ್ತೀಯ ಅಧ್ಯಯನದ ಮೂಲಕವಾಗಿ ಜನಪದರ ವಿಶಿಷ್ಟ

ಶಕ್ತಿ ಮತ್ತು ಮೂಲಗಳನ್ನು ಅರಿತುಕೊಳ್ಳಲು ಇದು ಸಹಾಯಕವಾಗಿದೆ. ಹಲವು ಕಥೆಯ ಎಳೆಗಳು ಅಲ್ಲಲ್ಲಿ ಗಂಟುಹಾಕಿಕೊಂಡು ಕಥನದ ದಾರಿಯನ್ನು ಕ್ಲಿಷ್ಟಗೊಳಿಸಿದರೂ ಕೊನೆಗೊಮ್ಮೆ ಸುಖಾಂತ್ಯವನ್ನು ಕಾಣುವಲ್ಲಿ ಸಫಲವಾಗುತ್ತದೆ. ಜನಪದ ಕಥನ ಕವನಗಳು ಸಾಮಾನ್ಯವಾಗಿ ದುಃಖಾಂತ್ಯವನ್ನೇ ಕಾಣುವುದು ರೂಢಿ. ಆದರೆ, ಈ ಕಥೆ ಹಲವು ದುಃಖದ ಹಾದಿಗಳಲ್ಲಿ ಹಾದುಬಂದು ಸುಖಾಂತ್ಯವನ್ನು ಕಾಣುವುದು ಕುತೂಹಲಕಾರಿಯಾಗಿದೆ. ಹೀಗಾಗಿ ಜನಪದ ಕಥನ ಗೀತೆಗಳ ಸರಣಿಗೆ ಇದೊಂದು ಹೊಸ ರೀತಿಯ ಸೇರ್ಪಡೆಯಾಗಿದೆ. ಈ ಕಥನ ಕಾವ್ಯದ ಭಾಷೆ, ಲಯ, ಸಾಂಪ್ರದಾಯಕ ವಾತಾವರಣ, ಕಥನ ಕಾಲದ ಬದುಕಿನ ವಿಶಿಷ್ಟಾಂಶಗಳು ಹಳ್ಳಿಗರಿಗೇ ಸಹಜವಾದ ಚಿಂತನಕ್ರಮಗಳು ಮತ್ತು ಕಥನ ತಂತ್ರ ಇವುಗಳ ಬಗ್ಗೆ ಸಂಶೋಧನಾ ಶೀಲವಾದ ಪ್ರಸ್ತಾವನೆಯೊಂದನ್ನು ಸಂಪಾದಕರು ಬರೆದಿದ್ದರೆ ಈ ಕೃತಿಯ ಮೌಲ್ಯ ಮತ್ತಷ್ಟು ಹೆಚ್ಚುತ್ತಿತ್ತು. ಇಷ್ಟಾದರೂ ಹೊಸ ಜಾಡಿನ ಕಾವ್ಯವೊಂದನ್ನು ಪರಿಶ್ರಮದಿಂದ ಸಂಗ್ರಹಿಸಿಕೊಟ್ಟಿರುವ ಸಂಪಾದಕರ ಜಾನಪದ ಪ್ರೀತಿ ಅಭಿನಂದನೀಯ.

**ಡಾ. ಎಚ್. ಜೆ. ಲಕ್ಕಪ್ಪಗೌಡ**
ಕುಲಪತಿಗಳು

# ಕೃತಜ್ಞತೆ

ಕಾವ್ಯದ ಸಂಪಾದನೆ ಮತ್ತು ಸಂಗ್ರಹಕ್ಕೆ ಸ್ಫೂರ್ತಿ ನೀಡಿ ಪ್ರೇರೇಪಿಸಿದ ಹೆಸರಾಂತ ಜಾನಪದ ವಿದ್ವಾಂಸರೂ ಮಾನ್ಯ ಕುಲಪತಿಗಳೂ ಆದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೆ, ಪುಸ್ತಕ ಪ್ರಕಟಣೆಗೆ ಆಡಳಿತಾತ್ಮಕ ಅನುಮೋದನೆ ನೀಡುವಲ್ಲಿ ನೆರವಾದ ಮಾನ್ಯ ಕುಲಸಚಿವರಾದ ಡಾ. ಕೆ. ವಿ. ನಾರಾಯಣ ಅವರಿಗೆ,

ಈ ಕಾವ್ಯವನ್ನು ಅಚ್ಚುಕಟ್ಟಾಗಿ ಮೂರು ದಿನಗಳವರೆಗೆ ಹಾಡಿ ಅನೇಕ ವಿಷಯಗಳನ್ನು ನನ್ನ ಗಮನಕ್ಕೆ ತಂದು ಅದು ಗ್ರಂಥ ರೂಪದಲ್ಲಿ ಬರಲು ಕಾರಣರಾದ ದೊಡ್ಡನಿಂಗವ್ವ, ಪರಸವ್ವ, ಸಣ್ಣ ಹುಲುಗವ್ವ, ಕಮಲವ್ವ, ಹನುಮವ್ವ, ದೊಡ್ಡ ಹಲುಗಮ್ಮ, ಹನುಮಂತವ್ವ ಮತ್ತು ಈ ಕಾವ್ಯವನ್ನು ಹಾಡುವಾಗ ಇದ್ದ, ಈಗ ಕಾಲವಾದ ದಿ. ಲಕ್ಷ್ಮೀ ಅವರಿಗೆ,

ಈ ಕಾವ್ಯದ ಸಂಗ್ರಹಣೆಯಿಂದ ಪ್ರಸ್ತಾವನೆ ಸಿದ್ಧಪಡಿಸುವವರೆಗೆ ಅನೇಕ ವಿಚಾರಗಳನ್ನು ನನ್ನ ಗಮನಕ್ಕೆ ತಂದ ಡಾ. ಮಂಜುನಾಥ ಬೇವಿನಕಟ್ಟೆ ಅವರಿಗೆ, ಕಾವ್ಯ ಸಂಪಾದನೆಯಲ್ಲಿ ನನ್ನೊಂದಿಗೆ ಸಹಕರಿಸಿದ ಮಿತ್ರರಾದ ಡಾ. ಗೋವಿಂದ ಅವರಿಗೆ,

ಈ ಪ್ರಕಟಣೆಯನ್ನು ಅಚ್ಚುಕಟ್ಟಾಗಿ ಹೊರತರಲು ಕಾಳಜಿವಹಿಸಿದ ಪ್ರಸಾರಾಂಗದ ನಿರ್ದೇಶಕರಾದ ಡಾ. ಹಿ. ಚಿ. ಬೋರಲಿಂಗಯ್ಯ ಅವರಿಗೆ, ಮುದ್ರಣ ವಿನ್ಯಾಸದಲ್ಲಿ ನೆರವಾದ ಪ್ರಸಾರಾಂಗದ ಸಹಾಯಕ ನಿದೇರ್ಶಕರಾದ ಶ್ರೀ ಸುಜ್ಞಾನಮೂರ್ತಿ ಅವರಿಗೆ, ಸುಂದರವಾಗಿ ಅಕ್ಷರ ಸಂಯೋಜಿಸಿದ ವಿದ್ಯಾರಣ್ಯ ಗಣಕ ಕೇಂದ್ರದ ಶ್ರೀನಿವಾಸ ಕೆ. ಕಲಾಲ್ ಅವರಿಗೆ ಹಾಗೂ ಮುಖಪುಟ ವಿನ್ಯಾಸ ಮಾಡಿದ ಕೆ. ಕೆ. ಮುಕಾಳಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಮಿತ್ರ ವಿಜಯೇಂದ್ರ ಎಸ್. ಕೆ. ಅವರಿಗೆ ಕಾವ್ಯ ಸಂಪಾದನೆ ಸಂದರ್ಭದಲ್ಲಿ ಎಲ್ಲ ರೀತಿಯಲ್ಲೂ ಸಹಕರಿಸಿದ ನನ್ನ ಬಂಧುಗಳಿಗೆ, ಕನ್ನಡ ವಿಶ್ವವಿದ್ಯಾಲಯದ ಎಲ್ಲ ಸಹೋದ್ಯೋಗಿ ಮಿತ್ರರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಡಾ. ತಾರಿಹಳ್ಳಿ ಹನುಮಂತಪ್ಪ**

# ೧. ಪ್ರಾರ್ಥನೆ

ಓದು ಓದುಂಬೋದೈತಾ
ಇವಾ ಮೂರೆ ಓದು ಬಲ್ಲೋರು ದೈತೋ ಸೊ॥

ಅಡು ಅಡೆಂಬದೈತೋ
ಇವ ಮೂರೆ ಆಡು ಬಲ್ಲೋರು ದೈತೋ ಸೊ॥

ಬನ್ನಿಯ ಎಲಿಯಾಗ ತಪಸಾವ ಮಾಡಂತಾ
ಸನ್ಯಾಸಿ ಬಲಗೊಂಡಾನೆ ಸೋ॥

ಹಾಲದ ಎಲಿಯಾಗ ತಪಸಾವ ಮಾಡಂತಾ
ಋಷಿಗಳಾ ಬಲಗೊಂಡಾನೆ ಸೊ॥

ಯಾಕಪ್ಪಾ ಗಣನಾಥನೆ
ಧರ್ಮರಿಗೆ ಯಾಕ ದೈವಾಗುವಲ್ಲೆ ಸೊ॥

ಸಾಕಂಬಾ ದೊರೆರಮುರಿಗೆ
ಬೇಕೆಂಬಾ ಕಲಬುರಿಗಿ ಯಾಕ ದೈವಾಗುವಲ್ಲೆ ಸೊ॥

ಆರು ಮಂಡಲ ಸೀರೆ
ಕೊಂತೆವ್ವಾ ವಾರದಿಂದೆ ನೈಸ್ಯಾಳೆ ಸೊ॥

ಹತ್ತು ಮಂಡಲ ಸೀರೆ
ಕೊಂತೆವ್ವಾ ಉಪದಿಂದ ನೈಸ್ಯಾಳೆ ಸೊ॥

ಬನ್ನಿಯಾ ಎಲಿಯಾಗೆ
ತಪಸಾವ ಮಾಡಂತಾ ಸನ್ಯಾಸಿ ಬಲಗೊಂಡಾನೆ ಸೊ॥

ಯಾಕಪ್ಪಾ ಗಣನಾಥನೆ
ಧರ್ಮರಿಗೆ ಯಾಕ ದೈವಾಗುವಲ್ಲೆ ಸೊ॥

ಸಾಕಂಬಾ ದೊರಮುರಿಗೆ
ಬೇಕೆಂಬಾ ಕಲಬುರಗಿ ಯಾಕ ದೈವಾಗುವಲ್ಲೆ ಸೊ॥

ಯಾತು ಯಾತಕೆ ಮಗಳೆ
ಕಾಟಿಯ ಕಮಗಂಡೆ ಸೋತಿಯ ಬಲಗೈಯಾ ತಂದನಾನಾ ಸೊ॥

ಸೋತುಕಾ ಬ್ಯಾಲೆ ಇಲ್ಲಿ ಕಂಡೆ
ಕಾಲೆಗಂಗಾನ ಬಲಗಂಡೆ ತಂದನಾನಾ ಸೊ||

ಎಲ್ಲಿ ಎಲ್ಲಿಗೆ ಮೊದಲ ಬಲ್ಲಿದ ನಮಗಿಣಿ
ಎಳ್ಳು ರಾಜ್ಯವಾ ಬೆಳೆಯಲ್ಲ ತಂದನಾನಾ ಸೊ||

ಎಳ್ಳು ರಾಜ್ಯವಾ ಬೆಳೆಯಿಲ್ಲ ಭೂಮ್ಯಾಮ್ಮಾನ
ಬಲ್ಲಿದರ ಮಲಕಾಮಗಂಡೆ ತಂದನಾನಾ ಸೊ||

ಬಾಯಿ ಒಳಗಿರುವ ಬಾನನ್ನ ಸರಸ್ವತಿ
ಬಾನನ್ನ ಭಾಗ್ಯಕ್ಕೆ ತಂದನಾನಾ ಸೊ||

ಬಾರೆ ನನ್ನ ತಾಯಿ ವಸನಕ್ಕೆ ಸರಸ್ವತಿ
ಬಾರದಾ ನುಡಿ ಬರದೇಳೆ ತಂದನಾನಾ ಸೊ||

ಒಲ್ಲೇನೆ ತನಿಯಾಕೆ ಬಂದಾಳೆ ಸರಸ್ವತಿ
ನಿಲ್ಲೆ ತಾಯಿ ವಸನಕ್ಕೆ ತಂದನಾನಾ ಸೊ||

ನಿಲ್ಲೆ ತಾಯಿ ವಸನಕ್ಕೆ ಸರಸ್ವತಿ
ಬಾರದಾ ನುಡಿ ಬರದೇಳೆ ತಂದನಾನಾ ಸೊ||

ಸಜ್ಜೆಯ ಹೊಲದಾಗಾದರೆ ಬಜೆಟ್ಟಿ ದನ ಹೊಯ್ಯಾ
ಸಜ್ಜೇನೆ ಉಂಡಾರೆ ನಾನಾಗಡಲೆ ತಂದನಾನಾ ಸೊ||

ಸಜ್ಜೇನೆ ಉಂಡಾರೆ ನನಗಡಲೆ ತಂದೀನಿ
ತಿದ್ದಯ್ಯ ಮುಖ ಮತಿಗಳಾ ತಂದನಾನಾ ಸೊ||

ಜ್ವಾಳ ಹೊಸದಾಗಿರುವ ಜೊಳ್ಳತೆನೆ ಹೊಯ್ಯಾ
ಜಾಳೇನೆ ಉಂಡರೆ ನಾನಾಗಡಲೆ ತಂದನಾನಾ ಸೊ||

ಜ್ವಾಳೇನೆ ಉಂಡಾರೆ ನನಗಡಲೆ ತಂದೀನಿ
ಚೆಲ್ಲಯ್ಯ ಮುಖ ಮತಿಗಳ ತಂದ ನಾನಾ ಸೊ||

ಒಂಟಿ ಮ್ಯಾಲೆ ಇರುವಾ ಒಂಟಿ ಜನಮುನಿನಗೆ
ಎಂಟೆ ಸೇರಿನ ಅಭಿಷೇಕ ತಂದ ನಾನಾ ಸೊ||

ಎಂಟೆ ಸೇರಿನ ಅಭಿಷೇಕ  ಮಾಡಿಸಬೇಕೆಂಬ
ಪಂಥ ಬಿದ್ದವು ಕೊಡು ಮತಿಗಳ ತಂದನಾನಾ ಸೊ||

ಅನೆ ಮ್ಯಾಲೆ ಇರುವ ಆನೆ ಜನಮುನಿನಗೆ
ಆರು ಸೇರಿನ ಅಭಿಷೇಕ ತಂದ ನಾನಾ ಸೊ॥

ಆರೇನ ಸೇರಿನ ಅಭಿಷೇಕ ಮಾಡಿಸಬೇಕೆಂಬಾ
ಜೋಡ ಬಿದ್ದಾವ ಕೊಡು ಮತಿಯೆ ತಂದನಾನಾ ಸೊ॥

ಅಂದೊಮ್ಮೆ ನೋಡಿದರೆ ಅಂಗೈಕೆ ಬಂದೈಸುರಿ
ತಿಂಗಳಿಗೊಮ್ಮೆ ಹೊಸ ಮಗನೆ ತಂದನಾನಾ ಸೊ॥

ತಿಂಗಳಿಗೊಮ್ಮೆ ಹೊಸಮಗನೆ
ಸೂರ್ಯ ಚಂದ್ರನ ಬಲಗಂಡೆ ತಂದ ನಾನಾ ಸೊ॥

ಗದ್ದೆಯಗೆ ನೀರೇತಿದ್ದಿದಂಗಲೆಯಾಗಿ
ರುದ್ರನಾ ಕರವೀರಾ ತಂದನಾನಾ ಸೊ॥

ಗದ್ದೆಯಗೆ ನೀರೇತಿದ್ದಿದಂಗಲೆಯಾಗಿ
ರುದ್ರನಾ ಕರವೀರಾ ತಂದನಾನಾ ಸೊ।

## ೩. ಅವ್ವಣೆವ್ವ ಕಾವ್ಯ (೧)

ಮಲ್ಲಮ್ಮನ ಹೊಟ್ಟೆಲಿ ಏಳು ಮಂದಿ ಮಕ್ಕಳೆ
ಹೆಣ್ಣಿನಾ ಸಂತಾನ ಮೊದಲಿಲ್ಲಾ ಕೋಲು ಕೋಲನ್ನ ಕೋಲೆ ॥ಮು॥
ಹೆಣ್ಣಿನ ಸಂತಾನ ಮೊದಲಿಲ್ಲಾ ಕೋಲು ಕೋಲನ್ನ ಕೋಲೆ ॥ಹಿ॥

ಮಲ್ಲಮ್ಮನ ಹೊಟ್ಟೆಲಿ ಏಳು ಮಂದಿ ಮಕ್ಕಳೆ
ಹೆಣ್ಣಿನಾ ಸಂತಾನ ಮೊದಲಿಲ್ಲಾ ಕೋಲು ಕೋಲನ್ನ ಕೋಲೆ ॥ಮು॥
ಹೆಣ್ಣಿನ ಸಂತಾನ ಮೊದಲಿಲ್ಲಾ ಕೋಲು ಕೋಲನ್ನ ಕೋಲೆ ॥ಹಿ॥

ಮಲ್ಲಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ॥ಮು॥
ಮಲ್ಲಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ॥ಹಿ॥

ಮಲ್ಲಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ॥ಮು॥
ಮಲ್ಲಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ॥ಹಿ॥

ಮಕ್ಕಳಿದ್ದ ಮನಿಗೆ ಬೆಂಕಿಗೆ ಹೋದಾರೆ
ಗೊಡ್ಡಿ ಬರುತ್ತಾಳೆಂದೆ ಅಂಬುತಾರೆ ಕೋಲು ಕೋಲನ್ನ ಕೋಲೆ ॥ಮು॥
ಗೊಡ್ಡಿ ಬರುತ್ತಾಳೆಂದೆ ಅಂಬುತಾರೆ ಕೋಲು ಕೋಲನ್ನ ಕೋಲೆ ॥ಹಿ॥

ಮಲ್ಲಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ನನ್ನೇನೆ ಹೊಟ್ಟೇಲಿ ಹೆಣ್ಣು ಮಗಳು ಇದ್ದರೆ,
ಗೌರಿ ಮಗಳಾನ ಮಾಡುತಿದ್ದೆ ಕೋಲು ಕೋಲನ್ನ ಕೋಲೆ ||ಮು||
ಗೌರಿ ಮಗಳಾನ ಮಾಡುತಿದ್ದೆ ಕೋಲು ಕೋಲನ್ನ ಕೋಲೆ ||ಹಿ||

ಬಣ್ಣಾದ ಸೀರೆ ಉಡುಸುತಿದ್ದೆ ಕೋಲು ಕೋಲನ್ನ ಕೋಲೆ ||ಮು||
ಬಣ್ಣಾದ ಸೀರೆ ಉಡುಸುತಿದ್ದೆ ಕೋಲು ಕೋಲನ್ನ ಕೋಲೆ ||ಹಿ||

ಸರಗಾಳಾ ಮುಟ್ಟ ಕಟ್ಟುತಿದ್ದೆ ಕೋಲು ಕೋಲನ್ನ ಕೋಲೆ ||ಮು||
ಸರಗಾಳಾ ಮುಟ್ಟ ಕಟ್ಟುತಿದ್ದೆ ಕೋಲು ಕೋಲನ್ನ ಕೋಲೆ ||ಹಿ||

ಮುಂದೆ ಬಿಟ್ಟು ಹಿಂದೆ ನೋಡುತಿದ್ದೆ ಕೋಲು ಕೋಲನ್ನ ಕೋಲೆ ||ಮು||
ಮುಂದೆ ಬಿಟ್ಟು ಹಿಂದೆ ನೋಡುತಿದ್ದೆ ಕೋಲು ಕೋಲನ್ನ ಕೋಲೆ ||ಹಿ||

ಶಿವರಾಯ ನೋಗಿ ಕೇಳಬೇಕೆ ಕೋಲು ಕೋಲನ್ನ ಕೋಲೆ ||ಮ||
ಶಿವರಾಯ ನೋಗಿ ಕೇಳಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಹೊಲಕ್ಕೊದಾ ಭರಮರೆಡ್ಡಿ ಬಂದಾನವ್ವ ಕೋಲು ಕೋಲನ್ನ ಕೋಲೆ ||ಮು||
ಹೊಲಕ್ಕೊದಾ ಭರಮರೆಡ್ಡಿ ಬಂದಾನವ್ವ ಕೋಲು ಕೋಲನ್ನ ಕೋಲೆ ||ಹಿ||

ಕಾಲಿಗೆ ನೀರಾ ಕೊಟ್ಟಳವ್ವಾ ಕೋಲು ಕೋಲನ್ನ ಕೋಲೆ ||ಮು||
ಕಾಲಿಗೆ ನೀರಾ ಕೊಟ್ಟಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೈ ಕಾಲು ಮಾರಿ ತೊಳದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಕೈ ಕಾಲು ಮಾರಿ ತೊಳದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗಂಡಾಗೆ ಊಟ ನೀಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಗಂಡಾಗೆ ಊಟ ನೀಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉಂಡನೆ ಉಟಾನೆ ಅಂಗೈ ತೊಳದಾನೆ
ಕುರ್ಚೆಯ ಮ್ಯಾಲೆ ಕುಂತಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಕುರ್ಚೆಯ ಮ್ಯಾಲೆ ಕುಂತಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗಂಧದ  ಇಳೇವೆ ಮೆಲುದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಗಂಧದ ಇಳೇವೆ ಮೆಲುದಾನವ್ವಾ ಕೋಲು ಕೋಲನ್ನ ಕೋಲೆ ||ಮು||

ಮಲಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಮಲಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ನನ್ನೇನೆ ಹೊಟ್ಟೇಲಿ ಏಳು ಮಂದಿ ಗಣ ಮಕ್ಕಳು
ಹೆಣ್ಣಿನ ಸಂತಾನ ಮೊದಲಿಲ್ಲ  ಕೋಲು ಕೋಲನ್ನ ಕೋಲೆ ||ಮು||
ಹೆಣ್ಣಿನ ಸಂತಾನ ಮೊದಲಿಲ್ಲ  ಕೋಲು ಕೋಲನ್ನ ಕೋಲೆ ||ಹಿ||

ನನ್ನೇನೆ  ಹೊಟ್ಟೇಲಿ ಏಳು ಮಂದಿ ಗಣ ಮಕ್ಕಳು
ಹೆಣ್ಣಿನ ಸಂತಾನ ಮೊದಲಿಲ್ಲ ಕೋಲು ಕೋಲನ್ನ ಕೋಲೆ ||ಮು||
ಹೆಣ್ಣಿನ ಸಂತಾನ ಮೊದಲಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಶಿವರಾಯ ನೋಗಿ ಬೇಡತೀನಿ ಕೋಲು ಕೋಲನ್ನ ಕೋಲೆ ||ಮು||
ಶಿವರಾಯ ನೋಗಿ ಬೇಡತೀನಿ ಕೋಲು ಕೋಲನ್ನ ಕೋಲೆ ||ಹಿ||

ಭರಮರೆಡ್ಡಿ ನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಭರಮರೆಡ್ಡಿ ನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಹತ್ತಿಯ ಹೂವಿನಂಗೆ ಕೆನ್ನೆಗೆ ನೆರೆಬಂದು
ಇನ್ನೇನೆ ಬಗಸಿ ಫಲಗಳಾ ಕೋಲು ಕೋಲನ್ನ ಕೋಲೆ ||ಮು||
ಇನ್ನೇನೆ ಬಗಸಿ ಫಲಗಳಾ ಕೋಲು ಕೋಲನ್ನ ಕೋಲೆ ||ಹಿ||

ಸೊಸ್ತೀರಾ ಕಂಡಾರೆ ನಗರೇನೆ ಕೋಲು ಕೋಲನ್ನ ಕೋಲೆ ||ಮು||
ಸೊಸ್ತೀರಾ ಕಂಡಾರೆ ನಗರೇನೆ ಕೋಲು ಕೋಲನ್ನ ಕೋಲೆ ||ಹಿ||

ಕಂಡ ಕಂಡವರು ನಗರೇನೆ ಕೋಲು ಕೋಲನ್ನ ಕೋಲೆ ||ಮು||
ಕಂಡ ಕಂಡವರು ನಗರೇನೆ ಕೋಲು ಕೋಲನ್ನ ಕೋಲೆ ||ಹಿ||

ಹತ್ತಿಯ ಹೂವಿನಂಗೆ ನೆತ್ತೀಗೆ ನೆರೆಬಂದು
ಮತ್ತೇನೆ ಬಗಸಿ ಫಲಗಳಾ ಕೋಲು ಕೋಲನ್ನ ಕೋಲೆ ||ಮು||
ಮತ್ತೇನೆ ಬಗಸಿ ಫಲಗಳಾ ಕೋಲು ಕೋಲನ್ನ ಕೋಲೆ ||ಹಿ||

ಸೊಸ್ತೀರಾ ಕಂಡಾರೆ ನಗರೇನೆ ಕೋಲು ಕೋಲನ್ನ ಕೋಲೆ ||ಮು||
ಸೊಸ್ತೀರಾ ಕಂಡಾರೆ ನಗರೇನೆ ಕೋಲು ಕೋಲನ್ನ ಕೋಲೆ ||ಹಿ||

ಸೊಸ್ತೀರಾ ಕಂಡಾರೆ ನಗರೇನೆ ಕೋಲು ಕೋಲನ್ನ ಕೋಲೆ ||ಮು||
ಸೊಸ್ತೀರಾ ಕಂಡಾರೆ ನಗರೇನೆ ಕೋಲು ಕೋಲನ್ನ ಕೋಲೆ ||ಹಿ||

ಬಜಾರಕೆ ಮಲ್ಲಮ್ಮ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಮು||
ಬಜಾರಕೆ ಮಲ್ಲಮ್ಮ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುನ್ನೂರು ಸೂಜಿ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮುನ್ನೂರು ಸೂಜಿ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮುನ್ನೂರು ಡಬ್ಬಣ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮುನ್ನೂರು ಡಬ್ಬಣ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಈ ಬತ್ತಿ ಉಂಡೆ ಕೊಂಡಾಳವ್ವಾ ಕೋಲು ಕೋಲನ್ನಾ ಕೋಲೆ ||ಮು||
ಈ ಬತ್ತಿ ಉಂಡೆ ಕೊಂಡಾಳವ್ವಾ ಕೋಲು ಕೋಲನ್ನಾ ಕೋಲೆ ||ಹಿ||

ನಿಂಬಿಯ ಹಣ್ಣು ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ನಿಂಬಿಯ ಹಣ್ಣು ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉತ್ತುತ್ತಿ ಹಣ್ಣು ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಉತ್ತುತ್ತಿ ಹಣ್ಣು ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗೊನೆ ಮುರಿದಾ ಬಾಳೆಹಣ್ಣು ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಗೊನೆ ಮುರಿದಾ ಬಾಳೆಹಣ್ಣು ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಚಂದಿರಾ ಬುಕ್ಕಿಟ್ಟು ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಚಂದಿರಾ ಬುಕ್ಕಿಟ್ಟು ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸುಡುವೇನೆ ಲೋಬಾನ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಸುಡುವೇನೆ ಲೋಬಾನ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉದ್ದಿನಕಡ್ಡಿ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಉದ್ದಿನಕಡ್ಡಿ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹೂವಿನಾ ಸರ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಹೂವಿನಾ ಸರ ಕೊಂಡಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕರಿಯ ಸಿಪ್ಪಿನ ಕಾಯಿ ತಗಂಡಾಳೆ ಕೋಲು ಕೋಲನ್ನ ಕೋಲೆ ||ಮು||
ಕರಿಯ ಸಿಪ್ಪಿನ ಕಾಯಿ ತಗಂಡಾಳೆ ಕೋಲು ಕೋಲನ್ನ ಕೋಲೆ ||ಹಿ||

ತನ್ನೇನೆ ಅರಮನಿಗೆ ಬಂದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ತನ್ನೇನೆ ಅರಮನಿಗೆ ಬಂದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಜಳಕವಾ ಮಾಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಜಳಕವಾ ಮಾಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉಡುಲಾಗೆ ಮಲ್ಲಮ್ಮ ಕಟ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಉಡುಲಾಗೆ ಮಲ್ಲಮ್ಮ ಕಟ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕರಿಯಾನೆ ಕಂಬಳಿ ಬಗಲಾಗೆ ಕೋಲು ಕೋಲನ್ನ ಕೋಲೆ ||ಮು||
ಕರಿಯಾನೆ ಕಂಬಳಿ ಬಗಲಾಗೆ ಕೋಲು ಕೋಲನ್ನ ಕೋಲೆ ||ಹಿ||

ಒಂದು ತಂಬಿಗೆ ನೀರು ಇಡದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಒಂದು ತಂಬಿಗೆ ನೀರು ಇಡದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಡವೀಯಾ ದಾರಿ ಇಡದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಅಡವೀಯಾ ದಾರಿ ಇಡದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಆರ್ಯಾಣದಾಕೆ ಹೋಗ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಆರ್ಯಾಣದಾಕೆ ಹೋಗ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕರಿಯೇನಾ ಕಂಬಳಿ ಮುರಿದು ಗದ್ದಿಗೆ ಮಾಡಿ
ಮುನ್ನೂರು ಸೂಜಿ ಜಡದಾಳೆ ಕೋಲು ಕೋಲನ್ನ ಕೋಲೆ ||ಮು||
ಮುನ್ನೂರು ಸೂಜಿ ಜಡದಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುನ್ನೂರು ಡಬ್ಬಣ ಬಡದಾಳೆ ಕೋಲು ಕೋಲನ್ನ ಕೋಲೆ ||ಮು||
ಮುನ್ನೂರು ಡಬ್ಬಣ ಬಡದಾಳೆ ಕೋಲು ಕೋಲನ್ನ ಕೋಲೆ ||ಹಿ||

ನಿಂಬಿಯ ಹಣ್ಣು ಇಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ನಿಂಬಿಯ ಹಣ್ಣು ಇಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉತ್ತುತ್ತಿ ಹಣ್ಣು ಇಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಉತ್ತುತ್ತಿ ಹಣ್ಣು ಇಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗೊನೆ ಮುರಿದಾ ಬಾಳೆಹಣ್ಣು ಇಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಗೊನೆ ಮುರಿದಾ ಬಾಳೆಹಣ್ಣು ಇಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಚಂದ್ರ ಬುಕ್ಕಿಟ್ಟು ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಚಂದ್ರ ಬುಕ್ಕಿಟ್ಟು ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸುಡುವಾ ಲೋಬಾನ ಸುಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಸುಡುವಾ ಲೋಬಾನ ಸುಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಡಿಕೀಯಾ ಎಲೆಯಾ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಅಡಿಕೀಯಾ ಎಲೆಯಾ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕರಿಸಿಪ್ಪಿನಾ ಕಾಯಿ ಒಡದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಕರಿಸಿಪ್ಪಿನಾ ಕಾಯಿ ಒಡದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನೇಮಿಸಿ ಕೈಯ ಮುಗಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ನೇಮಿಸಿ ಕೈಯ ಮುಗಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉದ್ದಿನ ಕಡ್ಡಿ ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಉದ್ದಿನ ಕಡ್ಡಿ ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಒಂಟಿಗಾಲಲಿ ತಪಸಾ ನಿಂತಾಳವ್ವಾ ಕೋಲು ಕೋಲನ್ನಾ ಕೋಲೆ ||ಮು||
ಒಂಟಿಗಾಲಲಿ ತಪಸಾ ನಿಂತಾಳವ್ವಾ ಕೋಲು ಕೋಲನ್ನಾ ಕೋಲೆ ||ಹಿ||

ಮುಚ್ಚಿವೀದಾ ಕಣ್ಣ ತಗಿವಲ್ಲಾ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿವೀದಾ ಕಣ್ಣ ತಗಿವಲ್ಲಾ ಕೋಲು ಕೋಲನ್ನ ಕೋಲೆ ||ಹಿ||

ಕೈಲಾಸ ಮ್ಯಾಲೆ ಶಿವರಾಯ ಕೋಲು ಕೋಲನ್ನ ಕೋಲೆ ||ಮು||
ಕೈಲಾಸ ಮ್ಯಾಲೆ ಶಿವರಾಯ ಕೋಲು ಕೋಲನ್ನ ಕೋಲೆ ||ಹಿ||

ನಂದೀಯಾ ಬರುತ್ತೈತೆ ಶಿವರಾಯ ಕೋಲು ಕೋಲನ್ನ ಕೋಲೆ ||ಮು||
ನಂದೀಯಾ ಬರುತ್ತೈತೆ ಶಿವರಾಯ ಕೋಲು ಕೋಲನ್ನ ಕೋಲೆ ||ಹಿ||

ನಂದೀಯಾ ಏರ್ಯಾನ ಶಿವರಾಯ ಕೋಲು ಕೋಲನ್ನ ಕೋಲೆ ||ಮು||
ನಂದೀಯಾ ಏರ್ಯಾನ ಶಿವರಾಯ ಕೋಲು ಕೋಲನ್ನ ಕೋಲೆ ||ಹಿ||

ಒಂಟಿಗಾಲಲಿ ತಪಸಾ ನಿಂತಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಒಂಟಿಗಾಲಲಿ ತಪಸಾ ನಿಂತಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಪಾರ್ವತಿ ಏನೊಂದು ನುಡಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಪಾರ್ವತಿ ಏನೊಂದು ನುಡಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಂದಿಯನ್ನಾ ಇಳಿಸು ಶಿವರಾಯ ಕೋಲು ಕೋಲನ್ನ ಕೋಲೆ ||ಮು||
ನಂದಿಯನ್ನಾ ಇಳಿಸು ಶಿವರಾಯ ಕೋಲು ಕೋಲನ್ನ ಕೋಲೆ ||ಹಿ||

ಅದು ಏನು ಸುದ್ಧಿ ನೋಡಿಬಾರಾ ಕೋಲು ಕೋಲನ್ನ ಕೋಲೆ ||ಮು||
ಅದು ಏನು ಸುದ್ಧಿ ನೋಡಿಬಾರಾ ಕೋಲು ಕೋಲನ್ನ ಕೋಲೆ ||ಹಿ||

ನಂದೀಯಾ ಇಳಿವ್ಯಾನೆ ಶಿವರಾಯ ಕೋಲು ಕೋಲನ್ನ ಕೋಲೆ ||ಮು||
ನಂದೀಯಾ ಇಳಿವ್ಯಾನೆ ಶಿವರಾಯ ಕೋಲು ಕೋಲನ್ನ ಕೋಲೆ ||ಹಿ||

ಮರಕೇನಾ ಬಿಗದಾನ ಶಿವರಾಯ ಕೋಲು ಕೋಲನ್ನ ಕೋಲೆ ||ಮು||
ಮರಕೇನಾ ಬಿಗದಾನ ಶಿವರಾಯ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮನ ತಾಕ ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮನ ತಾಕ ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮುಚ್ಚಿವಿದಾ ಕಣ್ಣ ತಗಿವಲ್ಲಾ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿವಿದಾ ಕಣ್ಣ ತಗಿವಲ್ಲಾ ಕೋಲು ಕೋಲನ್ನ ಕೋಲೆ ||ಹಿ||

ಒಂಟಿಕಾಲಲಿ ತಪಸಾ ನಿಂತಿಯಲ್ಲಾ ಕೋಲು ಕೋಲನ್ನಾ ಕೋಲೆ ||ಮು||
ಒಂಟಿಕಾಲಲಿ ತಪಸಾ ನಿಂತಿಯಲ್ಲಾ ಕೋಲು ಕೋಲನ್ನಾ ಕೋಲೆ ||ಹಿ||

ಅದು ಏನಾ ಸುದ್ಧಿ ಹೇಳ ಮಗಳೆ ಕೋಲು ಕೋಲನ್ನ ಕೋಲೆ ||ಮು||
ಅದು ಏನಾ ಸುದ್ಧಿ ಹೇಳ ಮಗಳೆ ಕೋಲು ಕೋಲನ್ನ ಕೋಲೆ ||ಹಿ||

ನನ್ನೇನೆ ಹೊಟ್ಟೇಲಿ ಏಳು ಮಂದಿ ಗಣ ಮಕ್ಕಳು
ಹೆಣ್ಣೀನ ಸಂತಾನ ಮೊದಲಿಲ್ಲ ಕೋಲು ಕೋಲನ್ನ ಕೋಲೆ ||ಮು||
ಹೆಣ್ಣೀನ ಸಂತಾನ ಮೊದಲಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಹೆಣ್ಣೀನ ಸಂತಾನ ಮೊದಲಿಲ್ಲ ಕೋಲು ಕೋಲನ್ನ ಕೋಲೆ ||ಮು||
ಹೆಣ್ಣೀನ ಸಂತಾನ ಮೊದಲಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಹೆಣ್ಣು ಮಗಳಾ ನನಗೆ ಕೊಡಬೇಕೆ ಕೋಲು ಕೋಲನ್ನ ಕೋಲೆ ||ಮು||
ಹೆಣ್ಣು ಮಗಳಾ ನನಗೆ ಕೊಡಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಬಂಜೆತನ ನನ್ನ ಬಿಡಿಸಬೇಕೆ ಕೋಲು ಕೋಲನ್ನ ಕೋಲೆ ||ಮು||
ಬಂಜೆತನ ನನ್ನ ಬಿಡಿಸಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಮಕ್ಕಳ ಫಲಗಳ ಬೇಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಮಕ್ಕಳ ಫಲಗಳ ಬೇಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಕೊಟ್ಟಾರೆ ಕೊಟ್ಯಾನೆ ಕೊಡುವುದು ದೊಡ್ಡದಲ್ಲ
ಆಸೆ ಕಟ್ಟಿಗೆ ಮಳ ಮುಂಡೆ ಕೋಲು ಕೋಲನ್ನ ಕೋಲೆ ||ಮು||
ಆಸೆ ಕಟ್ಟಿಗೆ ಮಳ ಮುಂಡೆ ಕೋಲು ಕೋಲನ್ನ ಕೋಲೆ ||ಹಿ||

ಈಗಲೇ ಹುಟ್ಟಲಿ ಬೇಗನೆ ಸಾಯಲಿ
ಬಂಜೆಯ ಸೊಲ್ಲಾ ಬಿಡಿಸಯ್ಯಾ ಕೋಲು ಕೋಲನ್ನ ಕೋಲೆ ||ಮು||
ಬಂಜೆಯ ಸೊಲ್ಲಾ ಬಿಡಿಸಯ್ಯಾ ಕೋಲು ಕೋಲನ್ನ ಕೋಲೆ ||ಹಿ||

ಈಗಲೇ ಹುಟ್ಟಲಿ ಬೇಗನೆ ಸಾಯಲಿ
ಬಂಜೆಯ ಸೊಲ್ಲಾ ಬಿಡಿಸಯ್ಯಾ ಕೋಲು ಕೋಲನ್ನ ಕೋಲೆ ||ಮು||
ಬಂಜೆಯ ಸೊಲ್ಲಾ ಬಿಡಿಸಯ್ಯಾ ಕೋಲು ಕೋಲನ್ನ ಕೋಲೆ ||ಹಿ||

ಸಂಜೇಲಿ ಹುಟ್ಟಲಿ ಮುಂಜಾನೆ ಸಾಯಲಿ
ಗೊಡ್ಡೆಂಬ ಸೊಲ್ಲಾ ಬಿಡಿಸಯ್ಯಾ ಕೋಲು ಕೋಲನ್ನ ಕೋಲೆ ||ಮು||
ಗೊಡ್ಡೆಂಬ ಸೊಲ್ಲಾ ಬಿಡಿಸಯ್ಯಾ ಕೋಲು ಕೋಲನ್ನ ಕೋಲೆ ||ಹಿ||

ಸಂಜೇಲಿ ಹುಟ್ಟಲಿ ಮುಂಜಾನೆ ಸಾಯಲಿ
ಗೊಡ್ಡೆಂಬ ಸೊಲ್ಲಾ ಬಿಡಿಸಯ್ಯಾ ಕೋಲು ಕೋಲನ್ನ ಕೋಲೆ ||ಮು||
ಗೊಡ್ಡೆಂಬ ಸೊಲ್ಲಾ ಬಿಡಿಸಯ್ಯಾ ಕೋಲು ಕೋಲನ್ನ ಕೋಲೆ ||ಹಿ||

ಜೋಳಿಗೆಯಾಗಳ ತಾನೊಂದು ಶಿವರಾಯ
ಇಟ್ಟಾನ ಮಲ್ಲಮ್ಮನ ನೊಸಲಿಗೆ ಕೋಲು ಕೋಲನ್ನ ಕೋಲೆ ||ಮು||
ಇಟ್ಟಾನ ಮಲ್ಲಮ್ಮನ ನೊಸಲಿಗೆ ಕೋಲು ಕೋಲನ್ನ ಕೋಲೆ ||ಹಿ||

ಕೊಟ್ಟೆನಿ ಹೋಗೆ ಫಲಗಳಾ ಕೋಲು ಕೋಲನ್ನ ಕೋಲೆ ||ಮು||
ಕೊಟ್ಟೆನಿ ಹೋಗೆ ಫಲಗಳಾ ಕೋಲು ಕೋಲನ್ನ ಕೋಲೆ ||ಹಿ||

ಹಿಂದಕಾ ನೀನು ತಿರುಗಮ್ಮಾ ಕೋಲು ಕೋಲನ್ನ ಕೋಲೆ ||ಮು||
ಹಿಂದಕಾ ನೀನು ತಿರುಗಮ್ಮಾ ಕೋಲು ಕೋಲನ್ನ ಕೋಲೆ ||ಹಿ||

ಅಲ್ಲಿ ಶಿವರಾಯ ಮಾಯವಾದ ಕೋಲು ಕೋಲನ್ನ ಕೋಲೆ ||ಮು||
ಅಲ್ಲಿ ಶಿವರಾಯ ಮಾಯವಾದ ಕೋಲು ಕೋಲನ್ನ ಕೋಲೆ ||ಹಿ||

ತನ್ನ ಅರಮನಿಗೆ ಬಂದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ತನ್ನ ಅರಮನಿಗೆ ಬಂದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಡುಮನ್ಯಾಕ ಹೋಗಿ ನಿಂತಳವ್ವಾ ಕೋಲು ಕೋಲನ್ನ ಕೋಲೆ ||ಮು||
ನಡು ಮನ್ಯಾಕ ಹೋಗಿ ನಿಂತಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಭರಮರೆಡ್ಡಿ ಮುಂದೆ ಹೇಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಭರಮರೆಡ್ಡಿ ಮುಂದೆ ಹೇಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಕ್ಕಳ ಸಂತಾನ ಕೇಳಿ ಬಂದೆ ಕೋಲು ಕೋಲನ್ನ ಕೋಲೆ ||ಮು||
ಮಕ್ಕಳ ಸಂತಾನ ಕೇಳಿ ಬಂದೆ ಕೋಲು ಕೋಲನ್ನ ಕೋಲೆ ||ಹಿ||

ಹೆಣ್ಣ ಮಗಳ ನನಗೆ ಕೊಡುತಾನೆ  ಕೋಲು ಕೋಲನ್ನ ಕೋಲೆ ||ಮು||
ಹೆಣ್ಣ ಮಗಳ ನನಗೆ ಕೊಡುತಾನೆ ಕೋಲು ಕೋಲನ್ನ ಕೋಲೆ ||ಹಿ||

ಹೆಣ್ಣ ಮಗಳ ನನಗೆ ಕೊಡುತಾನೆ  ಕೋಲು ಕೋಲನ್ನ ಕೋಲೆ ||ಮು||
ಹೆಣ್ಣ ಮಗಳ ನನಗೆ ಕೊಡುತಾನೆ  ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಏನೊಂದಾ ನುಡಿದಾಳವ್ವಾ ಕೋಲು ಕೋಲನ್ನ ಕೋಲೆ||ಮು||
ಮಲ್ಲಮ್ಮ ಏನೊಂದಾ ನುಡಿದಾಳವ್ವಾ  ಕೋಲು ಕೋಲನ್ನ ಕೋಲೆ ||ಹಿ||

ಒಂದು ದಿನ ಅಂಬೋದು ಒಂದು ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಮು||
ಒಂದು ದಿನ ಅಂಬೋದು ಒಂದು ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಹಿ||

ಎರಡು ದಿನ ಅಂಬೋದು ಎರಡೆ ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಮು||
ಎರಡು  ದಿನ ಅಂಬೋದು ಎರಡೆ ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಹಿ||

ಮೂರು ದಿನ ಅಂಬೋದು ಮೂರೆ ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಮು||
ಮೂರು ದಿನ ಅಂಬೋದು ಮೂರೆ ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಹಿ||

ಐದು ದಿನ ಅಂಬೋದು ಐದೆ ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಮು||
ಐದು ದಿನ ಅಂಬೋದು ಐದೆ  ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಹಿ||

ಒಂದೇನೆ ತಿಂಗಳಿಗೆ ಒಂದೇನೆ ಬಗಿಸ್ಯಾಳೆ
ಒಂದೇ ಎಲೆ ಅರದಾ ಎಳೆ ಹುಣಸಿ ಕೋಲು ಕೋಲನ್ನ ಕೋಲೆ ||ಮು||
ಒಂದೇ ಎಲೆ ಅರದಾ ಎಳೆ ಹುಣಸಿ ಕೋಲು ಕೋಲನ್ನ ಕೋಲೆ ||ಹಿ||

ಒಂದೆ ಎಲೆ ಅರದಾ ಎಲೆ ಹುಣಸಿ ಕೈಮಾರೆಡ್ಡಿ
ಒಂದೆ ಎಲೆ ಕಟ್ಟಿ ತರೀಸ್ಯಾನ ಕೋಲು ಕೋಲನ್ನ ಕೋಲೆ ||ಮು||
ಒಂದೆ ಎಲೆ ಕಟ್ಟಿ ತರೀಸ್ಯಾನ ಕೋಲು ಕೋಲನ್ನ ಕೋಲೆ ||ಹಿ||

ಎರಡೇನೆ ತಿಂಗಳಿಗೆ ಎರಡೇನೆ ಬಗಿಸ್ಯಾಳೆ
ಎರಡು ಎಲೆ ಅರದಾ ಹುಣಸಿ ಕೋಲು ಕೋಲನ್ನ ಕೋಲೆ ||ಮು||
ಎರಡು ಎಲೆ ಅರದಾ ಎಳೆ ಹುಣಸಿ ಕೋಲು ಕೋಲನ್ನ ಕೋಲೆ ||ಹಿ||

ಎರಡು ಎಲೆ ಅರದಾ ಎಳೆ ಹುಣಸಿ ಮಾರೆಡ್ಡಿ
ಎರಡು ಹೊರೆ ಕಟ್ಟ ತರೀಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಎರಡು ಹೊರೆ ಕಟ್ಟ ತರೀಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಎರಡು ಹೊರೆ ಕೊಟ್ಟಾ ತರೀಸ್ಯಾನೆ ಕೈಯಲಿ ಕೊಟ್ಟಾ
ನಾರಿ ನಿನ್ನ ಬಯಕೆ ತೀರ್ಯಾವ್ಯಾನೆ ಕೋಲು ಕೋಲನ್ನ ಕೋಲೆ ||ಮು||
ನಾರಿ ನಿನ್ನ ಬಯಕೆ ತೀರ್ಯಾವ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಮೂರನೇ ತಿಂಗಳಿಗೆ ಮುರೇನಾ ಬಗಿಸ್ಯಾಳ
ಮೂಡುವಲದಾಗ ಮಗಿ ಮಾವಿನ ಹಣ್ಣೆ ಕೋಲು ಕೋಲನ್ನ ಕೋಲೆ ||ಮು||
ಮೂಡುವಲದಾಗ ಮಗಿ ಮಾವಿನ ಹಣ್ಣೆ ಕೋಲು ಕೋಲನ್ನ ಕೋಲೆ ||ಹಿ||

ಮೂಡುವಲದಾಗ ಮಗಿ ಮಾವಿನ ಹಣ್ಣು
ಮೂರುವರಾ ಕೊಟ್ಟ ತರಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಮೂರುವರಾ ಕೊಟ್ಟ ತರಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||

## ೩. ಅವ್ವಣೆವ್ವ ಕಾವ್ಯ (೧)

ಮೂರುವರಾ ಕೊಟ್ಟಾ ತರಿಸ್ಯಾನೆ ಕೈಯಲ್ಲಿ ಕೊಟ್ಟು
ನಾರಿ ನಿನ್ನ ಬಯಕೆ ತೀರ್ಯಾವ್ಯಾನೆ ಕೋಲು ಕೋಲನ್ನ ಕೋಲೆ ||ಮು||
ನಾರಿ ನಿನ್ನ ಬಯಕೆ ತೀರ್ಯಾವ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ನಾಕೇನೆ ತಿಂಗಳಿಗೆ  ನಾಕೊಂದ ಬಗಿಸ್ಯಾಳೆ
ಕಾಕೀ ಮಾವ ಹಣ್ಣಾ ಕೈಯಾ ತುಂಬಾ ಕೋಲು ಕೋಲನ್ನ ಕೋಲೆ ||ಮು||
ಕಾಕೀ ಮಾವ ಹಣ್ಣಾ ಕೈಯಾ ತುಂಬಾ ಕೋಲು ಕೋಲನ್ನ ಕೋಲೆ ||ಹಿ||

ಕಾಕೀಯ ಹಣ್ಣಾ ಕೈ ತುಂಬಾ ಮಾರೆಡ್ಡಿ
ನಾಕುವರಾ ಕೊಟ್ಟು ತರಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ನಾಕುವರಾ ಕೊಟ್ಟು ತರಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||

ನಾಕುವರಾ ಕೊಟ್ಟು ತರಿಸ್ಯಾನೆ ಕೊಟ್ಟು
ನಾರಿ ನಿನ್ನ ಬಯಕೆ ತೀರ್ಯಾವೇನೆ ಕೋಲು ಕೋಲನ್ನ ಕೋಲೆ ||ಮು||
ನಾರಿ ನಿನ್ನ ಬಯಕೆ ತೀರ್ಯಾವೇನೆ ಕೋಲು ಕೋಲನ್ನ ಕೋಲೆ ||ಹಿ||

ಐದೇನೆ ತಿಂಗಳಿಗೆ ಐದೇನೆ ಬಗಿಸ್ಯಾಳೆ
ಕೊಯಿದೇನೆ ಮಲ್ಲಿಗೆ ನನದಂಡೆ ಕೋಲು ಕೋಲನ್ನ ಕೋಲೆ ||ಮು||
ಕೊಯಿದೇನೆ ಮಲ್ಲಿಗೆ ನನದಂಡೆ ಕೋಲು ಕೋಲನ್ನ ಕೋಲೆ ||ಹಿ||

ಕೊಯಿದೇನೆ ಮಲ್ಲಿಗೆ ನನದಂಡೆ ಮಾರೆಡ್ಡಿ
ಐದುವರಾ ಕೊಟ್ಟು ತರೀಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಐದುವರಾ ಕೊಟ್ಟು ತರೀಸ್ಯಾನೆ ಕೋಲು ಕೋಲನ್ನ ಕೋಲೆ ||ಮು||

ಐದುವರಾ ಕೊಟ್ಟು ತರೀಸ್ಯಾನೆ ಕೈ ಕೊಟ್ಟು
ನಾರಿ ನಿನ್ನ ಬಯಕೆ ತೀರ್ಯಾವ್ಯಾನೆ ಕೋಲು ಕೋಲನ್ನ ಕೋಲೆ ||ಮು||
ನಾರಿ ನಿನ್ನ ಬಯಕೆ ತೀರ್ಯಾವ್ಯಾನೆ ಕೋಲು ಕೋಲನ್ನ ಕೋಲೆ ||ಮು||

ಆರೇನೆ ತಿಂಗಳಿಗೆ ಆರೇನೆ ಬಗಿಸ್ಯಾಳೆ
ಆರೀದಾ ಅನ್ನ ಕೆನೆ ಮೊಸರೆ ಕೋಲು ಕೋಲನ್ನ ಕೋಲೆ ||ಮು||
ಆರೀದಾ ಅನ್ನ ಕೆನೆ ಮೊಸರೆ ಕೋಲು ಕೋಲನ್ನ ಕೋಲೆ ||ಹಿ||

ಆರೀದಾ ಅನ್ನಕೆನೆ ಮೊಸರೆ ಮಾರೆಡ್ಡಿ
ಆರುವರಾ ಕೊಟ್ಟು ತರೀಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಆರುವರಾ ಕೊಟ್ಟು ತರೀಸ್ಯಾನ  ಕೋಲು ಕೋಲನ್ನ ಕೋಲೆ ||ಹಿ||

ಆರುವರಾ ಕೊಟ್ಟು ತರೀಸಿ ಕೈಯಲ್ಲಿ ಕೊಟ್ಟು
ನಾರಿ ನಿನ್ನ ಬಯಕೆ ತೀರ್ಯಾವೇನೆ ಕೋಲು ಕೋಲನ್ನ ಕೋಲೆ ||ಮು||
ನಾರಿ ನಿನ್ನ ಬಯಕೆ ತೀರ್ಯಾವೇನೆ ಕೋಲು ಕೋಲನ್ನ ಕೋಲೆ ||ಹಿ||

ಏಳೇನೆ ತಿಂಗಳಿಗೆ ಏಳೇನೆ ಬಗಿಸ್ಯಾಳೆ
ಏರೀನಾ ಹಿಂದೆ ಬಿಳಿಜಾಳ ಕೋಲು ಕೋಲನ್ನ ಕೋಲೆ ||ಮು||
ಏರೀನಾ ಹಿಂದೆ ಬಿಳಿಜಾಳ ಕೋಲು ಕೋಲನ್ನ ಕೋಲೆ ||ಹಿ||

ಏರೀನಾ ಹಿಂದೆ ಬಿಳಿಜಾಳ ಮಾರಡ್ಡಿ
ಏಳುವರಾ ಕೊಟ್ಟು ತರೀಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಏಳುವರಾ ಕೊಟ್ಟು ತರೀಸ್ಯಾನೆ ಕೋಲು ಕೋಲನ್ನ ಕೋಲೆ ||ಮು||

ಏಳುವರಾ ಕೊಟ್ಟು ತರೀಸ್ಯಾನೆ ಕೈಕೊಟ್ಟು
ನಾರೀ ನಿನ್ನ ಬಯಕೆ ತೀರ್ಯಾವೇನೆ ಕೋಲು ಕೋಲನ್ನ ಕೋಲೆ ||ಮು||
ನಾರೀ ನಿನ್ನ ಬಯಕೆ ತೀರ್ಯಾವೇನೆ ಕೋಲು ಕೋಲನ್ನ ಕೋಲೆ ||ಹಿ||

ಎಂಟೇನೆ ತಿಂಗಳಿಗೆ ಎಂಟೊಂದಾ ಬಗಿಸ್ಯಾಳೆ
ಎಂಟೇನೆ ಯಾಲಕ್ಕಿ ಕೊಡ ತುಪ್ಪಾ ಮಾರೆಡ್ಡಿ
ಎಂಟುವರಾ ಕೊಟ್ಟು ತರೀಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಎಂಟುವರಾ ಕೊಟ್ಟು ತರೀಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಎಂಟುವರಾ ಕೊಟ್ಟು ತರಿಸಿ ಕೈಯಲ್ಲಿಕೊಟ್ಟು
ನಾರಿ ನಿನ್ನ ಬಯಕೆ ತೀರ್ಯಾವೇನೆ ಕೋಲು ಕೋಲನ್ನ ಕೋಲೆ ||ಮು||
ನಾರಿ ನಿನ್ನ ಬಯಕೆ ತೀರ್ಯಾವೇನೆ ಕೋಲು ಕೋಲನ್ನ ಕೋಲೆ ||ಮು||

ಒಂಬತ್ತು ತಿಂಗಳಿಗೆ ತುಂಬ್ಯಾವೆ ನವಮಾಸ
ಸಂದೀನೇ ಸಂದಲ್ಲಾ ನವಬ್ಯಾನೆ  ಕೋಲು ಕೋಲನ್ನ ಕೋಲೆ ||ಮು||
ಸಂದೀನೇ ಸಂದಲ್ಲಾ ನವಬ್ಯಾನೆ  ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಇತ್ತಬಾರೊ ಪರದಾನಿ ಮತ್ತೊಂದು ಹೇಳ್ಯಾನೆ
ಸೂಲಗಿತ್ತಿ ಸಂಗವ್ವನ ಮನಿಗೋಗು ಕೋಲು ಕೋಲನ್ನ ಕೋಲೆ ||ಮು||
ಸೂಲಗಿತ್ತಿ ಸಂಗವ್ವನ ಮನಿಗೋಗು ಕೋಲು ಕೋಲನ್ನ ಕೋಲೆ ||ಹಿ||

ಹತ್ತಿ ಹತ್ತಿದ ಬ್ಯಾನಿ ಕತ್ತಿಲಿ ಕಡದಂಗ
ನಿತ್ತರಸಲಾರೆ ನಿಲ್ಲಲಾರೆ ಕೋಲು ಕೋಲನ್ನ ಕೋಲೆ||ಮು||
ನಿತ್ತರಸಲಾರೆ ನಿಲ್ಲಲಾರೆ ಕೋಲು ಕೋಲನ್ನ ಕೋಲೆ||ಹಿ||

ನಿತ್ತರಸಲಾರೆ ನಿಲ್ಲಲಾರೆ ಬದಿಯಲ್ಲಿ
ಅಕ್ಕವಾ ಇಲ್ಲಲ್ಲೆ ಮರುಗಾಕೆ  ಕೋಲು ಕೋಲನ್ನ ಕೋಲೆ||ಮು||
ಅಕ್ಕವಾ ಇಲ್ಲಲ್ಲೆ ಮೌಗಾಕೆ ಕೋಲು ಕೋಲನ್ನ ಕೋಲೆ||ಹಿ||

ಜಾವ ಜಾವಕ ಬ್ಯಾನೆ ತಾಳಬಾರಿಸದಂಗೆ
ತಾಳಲಾರೆ ತಡೀಲಾರೆ ಕೋಲು ಕೋಲನ್ನ ಕೋಲೆ||ಮು||
ತಾಳಲಾರೆ ತಡೀಲಾರೆ ಕೋಲು ಕೋಲನ್ನ ಕೋಲೆ||ಹಿ||

ತಾಳಲಾರೇನೆ ತಡೀಲಾರೆ ಬದಿಯಲ್ಲಿ
ತಾಯವ್ವ ಇಲ್ಲಲ್ಲೆ ಮರಗಾಕೆ ಕೋಲು ಕೋಲನ್ನ ಕೋಲೆ||ಮು||
ತಾಯವ್ವಾ ಇಲ್ಲಲ್ಲೆ ಮರಗಾಕೆ  ಕೋಲು ಕೋಲನ್ನ ಕೋಲೆ||ಹಿ||

ಬಟ್ಟಲ ಕುದುರೆ ಹತ್ತೆನವ್ವಾ ಕೋಲು ಕೋಲನ್ನ ಕೋಲೆ ||ಮು||
ಬಟ್ಟಲ ಕುದುರೆ ಹತ್ತೆನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಡ್ಡ ಅಡ್ಡಾ ಕುದುರೆ ತಿರಿವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಅಡ್ಡ ಅಡ್ಡಾ ಕುದುರೆ ತಿರಿವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಡ್ಡ ಅಡ್ಡಾ ಕುದುರೆ ತಿರಿವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಅಡ್ಡ ಅಡ್ಡಾ ಕುದುರೆ ತಿರಿವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಟ್ಯಾಗ ಇರುವಾಕೆ ಇಟ್ಟಾಗಿ ಸಗಣಿ ಇಡುವಾಕಿ
ಸಂಗವ್ವನ ಅರಮನೆ ಯಾವಲ್ಲೆವ್ವಾ ಕೋಲು ಕೋಲನ್ನ ಕೋಲೆ ||ಮು||
ಸಂಗವ್ವನ ಅರಮನೆ ಯಾವಲ್ಲೆವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹುಟ್ಟಿದಾ ಆ ಶಿವನ ಇಟ್ಯಾಡಿ ಇಡಿವ್ಯಾಕಿ
ಕಪ್ಪಿನ ಕಿವಿಯಾಕಿ ಎಲತಂಗಿ ಕೋಲು ಕೋಲನ್ನ ಕೋಲೆ ||ಮು||
ಕಪ್ಪಿನ ಕಿವಿಯಾಕಿ ಎಲತಂಗಿ ಕೋಲು ಕೋಲನ್ನ ಕೋಲೆ ||ಹಿ||

ಕಪ್ಪಿಗೆ ವಜ್ಜರ ಬಿಗಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕಪ್ಪಿಗೆ ವಜ್ಜರ ಬಿಗಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಸೂಲಗಿತ್ತಿ ಸಂಗವ್ವನಾ ಮನೆದೂರ ಕೋಲು ಕೋಲನ್ನ ಕೋಲೆ ||ಮು||
ಸೂಲಗಿತ್ತಿ ಸಂಗವ್ವನಾ ಮನೆದೂರ ಕೋಲು ಕೋಲನ್ನ ಕೋಲೆ ||ಹಿ||

ಆಕೀಯಾ ಆಸಂದಿ ಓಡಾಡಿ ಇಡಿವ್ಯಾಕಿ
ವಾಲಿಯಾಕೆ ಏಲತಂಗಿ ಕೋಲು ಕೋಲನ್ನ ಕೋಲೆ ||ಮು||
ವಾಲಿಯಾಕೆ ಏಲತಂಗಿ ಕೋಲು ಕೋಲನ್ನ ಕೋಲೆ ||ಹಿ||

ವಾಲಿಯ ಬಂಗಾರ ಬಿಗಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ವಾಲಿಯ ಬಂಗಾರ ಬಿಗಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಸೂಲಗಿತ್ತಿ ಸಂಗವ್ವನಾ ಮನೆದೂರ ಕೋಲು ಕೋಲನ್ನ ಕೋಲೆ ||ಮು||
ಸೂಲಗಿತ್ತಿ ಸಂಗವ್ವನಾ ಮನೆದೂರ ಕೋಲು ಕೋಲನ್ನ ಕೋಲೆ ||ಹಿ||

ಬಾಳಿಯ ಬಲಕೋಗ ನಿಂಬಿಯಾ ಎಡಕೋಗಾ
ನಾಗರ ಸಂಪಿಗಿ ನಡಕೋಗ ಕೋಲು ಕೋಲನ್ನ ಕೋಲೆ ||ಮು||
ನಾಗರ ಸಂಪಿಗಿ ನಡಕೋಗ ಕೋಲು ಕೋಲನ್ನ ಕೋಲೆ ||ಹಿ||

ಬಾಳಿಯ ಬಲಕೋಗ ನಿಂಬಿಯಾ ಎಡಕೋಗಾ
ನಾಗರ ಸಂಪಿಗಿ ನಡಕೋಗ ಕೋಲು ಕೋಲನ್ನ ಕೋಲೆ ||ಮು||
ನಾಗರ ಸಂಪಿಗಿ ನಡಕೋಗ ಕೋಲು ಕೋಲನ್ನ ಕೋಲೆ ||ಹಿ||

ಅನೆಯಾಡುತಾವೆ ಗಾಣ ತಿರುಗುತಾವ
ಸಾಗೆಂಬ ನವಲ ಸರವೈದೆ ಕೋಲು ಕೋಲನ್ನ ಕೋಲೆ ||ಮು||
ಸಾಗೆಂಬ ನವಲ ಸರವೈದೆ ಕೋಲು ಕೋಲನ್ನ ಕೋಲೆ ||ಹಿ||

ಸೂಲಗಿತ್ತಿ ಸಂಗವ್ವನ ಆರಮನೆ ಕೋಲು ಕೋಲನ್ನ ಕೋಲೆ ||ಮು||
ಸೂಲಗಿತ್ತಿ ಸಂಗವ್ವನ ಆರಮನೆ ಕೋಲು ಕೋಲನ್ನ ಕೋಲೆ ||ಮು||

ಕುದುರೆ ಬಿಟ್ಟಾನೆ ಪರದಾನಿ ಕೋಲು ಕೋಲನ್ನ ಕೋಲೆ ||ಮು||
ಕುದುರೆ ಬಿಟ್ಟಾನೆ ಪರದಾನಿ ಕೋಲು ಕೋಲನ್ನ ಕೋಲೆ ||ಹಿ||

ಸಂಗವ್ವನಾ ಅರಮನಿಗೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಸಂಗವ್ವನಾ ಅರಮನಿಗೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಮು||

ಕುದುರೆ ಇಳಿದಾನೆ ಪರದಾನಿ ಕೋಲು ಕೋಲನ್ನ ಕೋಲೆ ||ಮು||
ಕುದುರೆ ಇಳಿದಾನೆ ಪರದಾನಿ ಕೋಲು ಕೋಲನ್ನ ಕೋಲೆ ||ಹಿ||

ಎಂದು ಬಾರದ ಪರದಾನಿ ಬಂದೆಲ್ಲ ಬಾಳದಿನಕಾ
ಕಂದರಗಳ್ಳಾ ಮನಿಗಳ್ಳೆ ಕೋಲು ಕೋಲನ್ನ ಕೋಲೆ ||ಮು||
ಕಂದರಗಳ್ಳಾ ಮನಿಗಳ್ಳೆ ಕೋಲು ಕೋಲನ್ನ ಕೋಲೆ ||ಹಿ||

ಕುಂದರಕ ಬಂದಿಲ್ಲ ಮಿಂದರಕ ಬಂದಿಲ್ಲ
ರೆಡ್ಡೇರ ಮನಿಯಾಗ ಬಾಣಸ್ತಾನ  ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರ ಮನಿಯಾಗ ಬಾಣಸ್ತಾನ  ಕೋಲು ಕೋಲನ್ನ ಕೋಲೆ ||ಹಿ||

ಬರತೀನಿ ಹೋಗು ಪರದಾನಿ ಕೋಲು ಕೋಲನ್ನ ಕೋಲೆ ||ಮು||
ಬರತೀನಿ ಹೋಗು ಪರದಾನಿ ಕೋಲು ಕೋಲನ್ನ ಕೋಲೆ ||ಹಿ||

ಬರತೀನಿ ಹೋಗು ಪರದಾನಿ ಕೋಲು ಕೋಲನ್ನ ಕೋಲೆ ||ಮು||
ಬರತೀನಿ ಹೋಗು ಪರದಾನಿ ಕೋಲು ಕೋಲನ್ನ ಕೋಲೆ ||ಹಿ||

ಜಳಕ ಮಾಡ್ಯಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಮು||
ಜಳಕ ಮಾಡ್ಯಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಹಿ||

ಜಳಕ ಮಾಡ್ಯಾಳೆ ಸಂಗವ್ವ  ಕೋಲು ಕೋಲನ್ನ ಕೋಲೆ ||ಮು||
ಜಳಕ ಮಾಡ್ಯಾಳೆ ಸಂಗವ್ವ  ಕೋಲು ಕೋಲನ್ನ ಕೋಲೆ ||ಹಿ||

ಜರಿ ಸೀರೆ ಉಟ್ಟು ಗಂಧದ ಬೊಟ್ಟ ನಿಟ್ಟು
ಗಂಧಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಮು||
ಗಂಧಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಹಿ||

ಗಂಧಗನ್ನಡಿ ಮುಖನೋಡಿ ಸಂಗವ್ವ
ಸಂದಿಲವೆಂದ ಬಿಡತಾಳೆ ಕೋಲು ಕೋಲನ್ನ ಕೋಲೆ ||ಮು||
ಸಂದಿಲವೆಂದ ಬಿಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಸಾದಿನ ಸೀರೆ ಉಟ್ಟೆ ಸಾದಿನ ಬೊಟ್ಟು ಇಟ್ಟು
ಸಾದಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಮು||
ಸಾದಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಹಿ||

ಸಾದೇನೆಗನ್ನಡಿ ಮುಖ ನೋಡಿ ಸಂಗವ್ವ
ಸಂದ ಇಲ್ಲೆಂದು ಬಿಡತಾಳೆ ಕೋಲು ಕೋಲನ್ನ ಕೋಲೆ ||ಮು||
ಸಂದ ಇಲ್ಲೆಂದು ಬಿಡತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಸೀರೆ ಉಟ್ಟು ಮುತ್ತಿನ ಬೊಟ್ಟ ನಿಟ್ಟು
ಜತ್ತಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಮು||
ಜತ್ತಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಮು||

ಒಪ್ಪೀನೆ ಎಂದೆ ಉಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಒಪ್ಪೀನೆ ಎಂದೆ ಉಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಒಪ್ಪೀನೆ ಎಂದೆ ಉಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಒಪ್ಪೀನೆ ಎಂದೆ ಉಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಕಣ್ಣಿಗೆ ಕಾಡಿಗೆ ಹಚ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಕಣ್ಣಿಗೆ ಕಾಡಿಗೆ ಹಚ್ಯಾಳೆ ಕೋಲು ಕೋಲನ್ನ ಕೋಲೆ || ಹಿ||

ಗಂಧದ ಇಳೇವೇ ಮೆಲದಾಳೆ ಕೋಲು ಕೋಲನ್ನ ಕೋಲೆ ||ಮು||
ಗಂಧದ ಇಳೇವೇ ಮೆಲದಾಳೆ ಕೋಲು ಕೋಲನ್ನ ಕೋಲೆ ||ಹಿ||

ಸಂಗವ್ವ ಮನಿಗೆ ಬೀಗಾ ಹಾಕ್ಯಳವ್ವಾ ಕೋಲು ಕೋಲನ್ನ ಕೋಲ ||ಮು||
ಸಂಗವ್ವ ಮನಿಗೆ ಬೀಗಾ ಹಾಕ್ಯಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರ ಅರಮನಿಗೆ ಬಂದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರ ಅರಮನಿಗೆ ಬಂದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕಾಲಿಗೆ ನೀರು ಕೊಟ್ಟಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಕಾಲಿಗೆ ನೀರು ಕೊಟ್ಟಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೈಕಾಲು ಮಾರಿ ತೊಳೆದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಕೈಕಾಲು ಮಾರಿ ತೊಳೆದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರಾ ಮನಿಯಾಕಾ ಹೋದಳವ್ವಾ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರಾ ಮನಿಯಾಕಾ ಹೋದಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಏನೊಂದೆ ನುಡಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಏನೊಂದೆ ನುಡಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಾಯತೀನಿ ಬಾರೆ ಸಂಗವಮ್ಮ ಕೋಲು ಕೋಲನ್ನ ಕೋಲೆ ||ಮು||
ಸಾಯತೀನಿ ಬಾರೆ ಸಂಗವಮ್ಮ ಕೋಲು ಕೋಲನ್ನ ಕೋಲೆ ||ಹಿ||

ಸಾಯತೀನಿ ಬಾರೆ ಸಂಗಮ್ಮ ಕೋಲು ಕೋಲನ್ನ ಕೋಲೆ ||ಮು||
ಸಾಯತೀನಿ ಬಾರೆ ಸಂಗಮ್ಮ ಕೋಲು ಕೋಲನ್ನ ಕೋಲೆ ||ಹಿ||

ಕೊಟ್ಟಂತಹ ಶಿವರಾಯ ನೆನಸವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊಟ್ಟಂತಹ ಶಿವರಾಯ ನೆನಸವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೊಟ್ಟಂತಹ ಶಿವರಾಯ ನೆನಸವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊಟ್ಟಂತಹ ಶಿವರಾಯ ನೆನಸವ್ವಾ ಕೋಲು ಕೋಲನ್ನ ಕೋಲೆ ||ಹಿ||

ಬಂಗಾರದ ಜಂತೆಗೆ ಬೆಳ್ಳಿ ಹಗ್ಗನಾ ಹಾಕಿ
ಮಲ್ಲಮ್ಮನ ಕೈ ಒಳಗೆ ಕೊಟ್ಟಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮನ ಕೈ ಒಳಗೆ ಕೊಟ್ಟಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮೂರೇನೆ ಜೋಲಿಗಳ ಒಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮೂರೇನೆ ಜೋಲಿಗಳ ಒಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮೂರೇನೆ ಜೋಲಿಗಳ ಒಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮೂರೇನೆ ಜೋಲಿಗಳ ಒಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಒಕ್ಕಳದ ಹೀಡಾಡಿ ಒಕ್ಕಳಕಾ ಕೈ ಇಟ್ಟು
ಒಕ್ಕಳದಾ ದಾರಿ ತಗದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಒಕ್ಕಳದಾ ದಾರಿ ತಗದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಒಕ್ಕಳದಾ ದಾರಿ ತಗದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಒಕ್ಕಳದಾ ದಾರಿ ತಗದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೊಟ್ಟಿದ್ದ ಶಿವರಾಯನ ನೆನಯವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊಟ್ಟಿದ್ದ ಶಿವರಾಯನ ನೆನಯವ್ವಾ ಕೋಲು ಕೋಲನ್ನ ಕೋಲೆ ||ಹಿ||

ಬಾಯಿಯಾಗಳ ಮಾತು ಬಾಯಾಗ ಇರಲಿಕ್ಕೆ
ಕಂದಮ್ಮ ಬಯಲಿಗೆ ಬಿದ್ರೈತೆವ್ವಾ ಕೋಲು ಕೋಲನ್ನ ಕೋಲೆ ||ಮು||
ಕಂದಮ್ಮ ಬಯಲಿಗೆ ಬಿದ್ರೈತೆವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹೆಣ್ಣು ಮಗಳ ತಾಯೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಮು||
ಹೆಣ್ಣು ಮಗಳ ತಾಯೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಹಿ||

ಹೆಣ್ಣು ಮಗಳ ತಾಯೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಮು||
ಹೆಣ್ಣು ಮಗಳ ತಾಯೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಹಿ||

ಬಣ್ಣದ ಕುಡುಗೋಲಿಗೆ ಉರಿಯ ಕೊಯಿದೆ ಕೋಲು ಕೋಲನ್ನ ಕೋಲೆ ||ಮು||
ಬಣ್ಣದ ಕುಡುಗೋಲಿಗೆ ಉರಿಯ ಕೊಯಿದೆ ಕೋಲು ಕೋಲನ್ನ ಕೋಲೆ ||ಹಿ||

ಬಂಗಾರದ ಸೂಜಿಲಿ ಚುಟುಕಿನಾಕಿ ಕೋಲು ಕೋಲನ್ನ ಕೋಲೆ ||ಮು||
ಬಂಗಾರದ ಸೂಜಿಲಿ ಚುಟುಕಿನಾಕಿ ಕೋಲು ಕೋಲನ್ನ ಕೋಲೆ ||ಹಿ||

ಕೂಸಿನಾ ಮೈಯ ತೊಳಿದಾರ ಕೋಲು ಕೋಲನ್ನ ಕೋಲೆ ||ಮು||
ಕೂಸಿನಾ ಮೈಯ ತೊಳಿದಾರ ಕೋಲು ಕೋಲನ್ನ ಕೋಲೆ ||ಹಿ||

ಮಂಚದ ಮ್ಯಾಲೆ ಹಾಕ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮಂಚದ ಮ್ಯಾಲೆ ಹಾಕ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕಂಚಿನ ಬಟ್ಟಲದಾಗ ಮಿಂಚೆನ್ನೆ ತಿಳಿದುಪ್ಪಾ
ಮಲ್ಲಿ ಮಲ್ಲಮ್ಮನ ತಲಿಗೆ ಹಚ್ಚಿ ಕೋಲು ಕೋಲನ್ನ ಕೋಲೆ ||ಮು||
ಮಲ್ಲಿ ಮಲ್ಲಮ್ಮನ ತಲಿಗೆ ಹಚ್ಚಿ ಕೋಲು ಕೋಲನ್ನ ಕೋಲೆ ||ಹಿ||

ಬೆಳ್ಳಿ ಬಟ್ಟಲದಾಗ ಒಳ್ಳೆಣ್ಣೆ ತಿಳಿದುಪ್ಪಾ
ಕೆಂಚಿ ಮಲ್ಲಮ್ಮಗಾ ತಲೆಗಚ್ಚಿ  ಕೋಲು ಕೋಲನ್ನ ಕೋಲೆ ||ಮು||
ಕೆಂಚಿ ಮಲ್ಲಮ್ಮಗಾ ತಲೆಗಚ್ಚಿ ಕೋಲು ಕೋಲನ್ನ ಕೋಲೆ ||ಹಿ||

ಆ ಉರಿಗಳ ನೀರು ಆರುತಾ ತೋರುತಾ
ಯಾಲಕಿನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಮು||
ಯಾಲಕಿನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಹಿ||

ದಾರಿ ಬಚ್ಚಲಕಾ ಇಡದಾರೆ ಕೋಲು ಕೋಲನ್ನ ಕೋಲೆ ||ಮು||
ದಾರಿ ಬಚ್ಚಲಕಾ ಇಡದಾರೆ ಕೋಲು ಕೋಲನ್ನ ಕೋಲೆ ||ಹಿ||

ಉಪ್ಪರಿಕ್ಯಾಗಳ ನೀರು ಉಕ್ಕುತಾ ತೋರುತಾ
ಕರ್ಪೂರನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಮು||
ಕರ್ಪೂರನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಹಿ||

ದಾರಿ ಬಚ್ಚಲಕಾ ಹಿಡಿದಾರೆ ಕೋಲು ಕೋಲನ್ನ ಕೋಲೆ ||ಮು||
ದಾರಿ ಬಚ್ಚಲಕಾ ಹಿಡಿದಾರೆ ಕೋಲು ಕೋಲನ್ನ ಕೋಲೆ ||ಹಿ||

ನೀರ ಅರದಾಳೆ ಸಂಗಮ್ಮ ಕೋಲು ಕೋಲನ್ನ ಕೋಲೆ ||ಮು||
ನೀರ ಅರದಾಳೆ ಸಂಗಮ್ಮ ಕೋಲು ಕೋಲನ್ನ ಕೋಲೆ ||ಹಿ||

ಬಚ್ಚಲದಾಕೆ ಕರಕಂದೆ ಹೋಗಿ ಕೋಲು ಕೋಲನ್ನ ಕೋಲೆ ||ಮು||
ಬಚ್ಚಲದಾಕೆ ಕರಕಂದೆ ಹೋಗಿ ಕೋಲು ಕೋಲನ್ನ ಕೋಲೆ ||ಹಿ||

ಬೇವಿನ ಸಂಗವ್ವ ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಬೇವಿನ ಸಂಗವ್ವ ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮಗೆ ನೀರು ಎರಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮಗೆ ನೀರು ಎರಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಪಟ್ಟದಂಚಿನ ಸೀರೆ ಉಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಪಟ್ಟದಂಚಿನ ಸೀರೆ ಉಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಕುಬುಸ ತೊಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಕುಬುಸ ತೊಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ತಲೆಗೇನೆ ಪಟ್ಟು ಬಿಗಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ತಲೆಗೇನೆ ಪಟ್ಟು ಬಿಗಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಡುವಿಗೆ ನಡುಕಟ್ಟು ಬಿಗಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ನಡುವಿಗೆ ನಡುಕಟ್ಟು ಬಿಗಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕುಡುಗೋಲು ಬೇವಿನ ತಪ್ಲ ಕೈ ಒಳಗೆ ಕೋಲು ಕೋಲನ್ನ ಕೋಲೆ ||ಮು||
ಕುಡುಗೋಲು ಬೇವಿನ ತಪ್ಲ ಕೈ ಒಳಗೆ ಕೋಲು ಕೋಲನ್ನ ಕೋಲೆ ||ಹಿ||

ಸೂರ್ಯದೇವಗೆ ಕೈಯ ಮುಗಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಸೂರ್ಯದೇವಗೆ ಕೈಯ ಮುಗಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸೂರ್ಯದೇವಗೆ ಕೈಯ ಮುಗಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಸೂರ್ಯದೇವಗೆ ಕೈಯ ಮುಗಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮಂಚದಾ ಮ್ಯಾಲೆ ಮನಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮಂಚದಾ ಮ್ಯಾಲೆ ಮನಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಇಲಕಿಯಾ ಸಂಗವ್ವಾ ಹಾಕ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಇಲಕಿಯಾ ಸಂಗವ್ವಾ ಹಾಲ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮಂಚದ ಅಡಿಯಲಿ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮಂಚದ ಅಡಿಯಲ್ಲಿ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಜಳಕಾ ಮಾಡ್ಯಾಳೆ ಸಂಗವ್ವಾ ಕೋಲು ಕೋಲನ್ನ ಕೋಲೆ ||ಮು||
ಜಳಕ ಮಾಡ್ಯಾಳೆ ಸಂಗವ್ವಾ ಕೋಲು ಕೋಲನ್ನ ಕೋಲೆ ||ಹಿ||

## ೩. ಅವ್ವಣೆವ್ವ ಕಾವ್ಯ (೩)

ಜಳಕಾ ಮಾಡ್ಯಾಳೆ ಸಂಗವ್ವಾ ಕೋಲು ಕೋಲನ್ನ ಕೋಲೆ ||ಮು||
ಜಳಕ ಮಾಡ್ಯಾಳೆ ಸಂಗವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹೂನಿನ ಸೀರೆ ಉಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಹೂನಿನ ಸೀರೆ ಉಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಗ್ಗೀಯಾ ಕುಬುಸ ತೊಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಮಗ್ಗೀಯಾ ಕುಬುಸ ತೊಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತು ರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಮು||
ಮುತ್ತು ರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಹಿ||

ಗಂಧದ ಇಳೇವ ಇಡದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಗಂಧದ ಇಳೇವ ಇಡದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹೋಗಿ ಬರುತೀನಿ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಮು||
ಹೋಗಿ ಬರುತಿನಿ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಹಿ||

ಹೋಗಿ ಬಾರವ್ವಾ ಸಂಗವ್ವಾ ಕೋಲು ಕೋಲನ್ನ ಕೋಲೆ ||ಮು||
ಹೋಗಿ ಬಾರವ್ವಾ ಸಂಗವ್ವಾ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರಾ ಮನೆಗೆ ಬಾಣತಿಗೆ ಬಂದು
ತನ್ನ ಪಟ್ಟಣಕ್ಕೆ ನಡದಾಳೆ ಕೋಲು ಕೋಲನ್ನ ಕೋಲೆ ||ಮು||
ತನ್ನ ಪಟ್ಟಣಕ್ಕೆ ನಡದಾಳೆ ಕೋಲು ಕೋಲನ್ನ ಕೋಲೆ ||ಹಿ||

ಊರೊಳ ಜನರ ಏನು ನುಡಿದೆ ಕೋಲು ಕೋಲನ್ನ ಕೋಲೆ ||ಮು||
ಊರೊಳ ಜನರ ಏನು ನುಡಿದೆ ಕೋಲು ಕೋಲನ್ನ ಕೋಲೆ ||ಹಿ||

ಯಾರೆ ಹಡದಾರೆ ಸಂಗವ್ವಾ ಕೋಲು ಕೋಲನ್ನ ಕೋಲೆ ||ಮು||
ಯಾರೆ ಹಡದಾರೆ ಸಂಗವ್ವಾ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರಾ ಮನಿಯಾಗೆ ಬಾಣಸ್ತಾನಾ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರಾ ಮನಿಯಾಗೆ ಬಾಣಸ್ತಾನಾ ಕೋಲು ಕೋಲನ್ನ ಕೋಲೆ ||ಹಿ||

ಹೆಣ್ಣ ಮಗಳ ಹಡದಾಳೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಮು||
ಹೆಣ್ಣ ಮಗಳ ಹಡದಾಳೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಹಿ||

ಮಂದಿಗೆ ಹೇಳಿಕೆಂತಾ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಮು||
ಮಂದಿಗೆ ಹೇಳಿಕೆಂತಾ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಒಂದು ದಿನ ಅಂಬೋದು ಒಂದೆ ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಮು||
ಒಂದು ದಿನ ಅಂಬೋದು ಒಂದೆ ತಿಂಗಳಾಗಿ ಕೋಲು ಕೋಲನ್ನ ಕೋಲೆ ||ಹಿ||

ಎರಡೆ ದಿನ ಅಂಬೋದು ಎರಡೆ ತಿಂಗಳೆ ಕೋಲು ಕೋಲನ್ನ ಕೋಲೆ ||ಮು||
ಎರಡೆ ದಿನ ಅಂಬೋದು ಎರಡೆ ತಿಂಗಳೆ ಕೋಲು ಕೋಲನ್ನ ಕೋಲೆ |ಹಿ||

ಎರಡೆ ದಿನ ಅಂಬೋದು ನಾಕೆ ತಿಂಗಳೆ ಕೋಲು ಕೋಲನ್ನ ಕೋಲೆ ||ಮು||
ಎರಡೆ ದಿನ ಅಂಬೋದು ನಾಕೆ ತಿಂಗಳೆ ಕೋಲು ಕೋಲನ್ನ ಕೋಲೆ ||ಹಿ||

ಐದೆ ತಿಂಗಳಾ ಅಗ್ಯಾವಮ್ಮ ಕೋಲು ಕೋಲನ್ನ ಕೋಲೆ ||ಮು||
ಐದೆ ತಿಂಗಳಾ ಅಗ್ಯಾವಮ್ಮ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಮಲಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಗಂಗಮ್ಮಗಾ ನಾನು ಹೋಗಬೇಕೆ ಕೋಲು ಕೋಲನ್ನ ಕೋಲೆ ||ಮು||
ಗಂಗಮ್ಮಗಾ ನಾನು ಹೋಗಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಗರಡಿ ಮನಿಯಾಗೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಗರಡಿ ಮನಿಯಾಗೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಗರಡಿ ಮನಿಯಾಗೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಗರಡಿ ಮನಿಯಾಗೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಮನಿಯ ಸಾರಿಸ್ಯಾಳೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಮು||
ಮನಿಯ ಸಾರಿಸ್ಯಾಳೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಹಿ||

ಜಳಕಾವ ಮಾಡ್ಯಾಳೆ ಮಲ್ಲಮ್ಮ  ಕೋಲು ಕೋಲನ್ನ ಕೋಲೆ ||ಮು||
ಜಳಕಾವ ಮಾಡ್ಯಾಳೆ ಮಲ್ಲಮ್ಮ  ಕೋಲು ಕೋಲನ್ನ ಕೋಲೆ ||ಹಿ||

ಹಿತ್ತಲ ಪುಟ್ಟೀಗಿ ತುಂಬ್ಯಾಳೆ  ಕೋಲು ಕೋಲನ್ನ ಕೋಲೆ ||ಮು||
ಹಿತ್ತಲ ಪುಟ್ಟೀಗಿ ತುಂಬ್ಯಾಳೆ  ಕೋಲು ಕೋಲನ್ನ ಕೋಲೆ ||ಹಿ||

ಹಿತ್ತಲ ಪುಟ್ಟೀಗಿ ತುಂಬ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಹಿತ್ತಲ ಪುಟ್ಟೀಗಿ ತುಂಬ್ಯಾಳೆ  ಕೋಲು ಕೋಲನ್ನ ಕೋಲೆ ||ಹಿ||

ಸಣ್ಣ ಕೊಡಪಾನ ತಗಂಡೆ ಕೋಲು ಕೋಲನ್ನ ಕೋಲೆ ||ಮು||
ಸಣ್ಣ ಕೊಡಪಾನ ತಗಂಡೆ ಕೋಲು ಕೋಲನ್ನ ಕೋಲೆ ||ಹಿ||

ಗಂಗಮ್ಮಗಾದರೆ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಮು||
ಗಂಗಮ್ಮಗಾದರೆ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಹೋಗೋದಾರಿ ನೋಡ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಹೋಗೋದಾರಿ ನೋಡ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಹೋಗೋದಾರಿ ನೋಡ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಹೋಗೋದಾರಿ ನೋಡ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಕುಪ್ಪಳಿಸಿ ಮನಿಗೆ ಎಗರ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕುಪ್ಪಳಿಸಿ ಮನಿಗೆ ಎಗರ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಕೈ ಬಡಿದೆ ಕೂಸು ಆಡುತ್ತೈತೆ ಕೋಲು ಕೋಲನ್ನ ಕೋಲೆ ||ಮು||
ಕೈ ಬಡಿದೆ ಕೂಸು ಆಡುತ್ತೈತೆ ಕೋಲು ಕೋಲನ್ನ ಕೋಲೆ ||ಹಿ||

ಗಜಭೀಮ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಗಜಭೀಮ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ದೊಡ್ಡೋಳು ಆದರೆ ಗುರ್ತುಸಿಗಾದಿಲ್ಲ
ಗಲ್ಲಕ ಸೆಳ್ಳುಗರ ಇಡಬೇಕೆ ಕೋಲು ಕೋಲನ್ನ ಕೋಲೆ ||ಮು||
ಗಲ್ಲಕ ಸೆಳ್ಳುಗರ ಇಡಬೇಕೆ ಕೋಲು ಕೋಲನ್ನ ಕೋಲೆ ||ಹಿ||
ಗಲ್ಲಕ ಸೆಳ್ಳುಗರ ಇಟ್ಟಾನವ್ವಾ ಕೋಲು ಕೋಲನ್ನ ||ಕೋಲೆ||

ಆ ಕೂಸು ನೋಡಿ ಅಳುತ್ತೈತೆ ಕೋಲು ಕೋಲನ್ನ ಕೋಲೆ ||ಮು||
ಆ ಕೂಸು ನೋಡಿ ಅಳುತ್ತೈತೆ ಕೋಲು ಕೋಲನ್ನ ಕೋಲೆ ||ಹಿ||

ಗಲ್ಲೆಲ್ಲ ರಾಮರಕುತಾ ಆಗ್ಯೆತವ್ವಾ ಕೋಲು ಕೋಲನ್ನ ಕೋಲೆ ||ಮು||
ಗಲ್ಲೆಲ್ಲ ರಾಮರಕುತಾ ಆಗ್ಯೆತವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗರಡಿಯ ಮನೆಯಾಕೆ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಗರಡಿಯ ಮನೆಯಾಕೆ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗಂಗಮ್ಮನ ಮಲ್ಲಮ್ಮ ಮಾಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಗಂಗಮ್ಮನ ಮಲ್ಲಮ್ಮ ಮಾಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಚಂದಿರ ಬುಕ್ಕಿಟ್ಟು ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಚಂದಿರ ಬುಕ್ಕಿಟ್ಟು ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗಂಗಮ್ಮಗಾ ದಂಡೆ ಹಾಕ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಗಂಗಮ್ಮಗಾ ದಂಡೆ ಹಾಕ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕುಬುಸದಾ ಕಣ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಕುಬುಸದಾ ಕಣ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉದ್ದಿನಾ ಕಡ್ಡಿ ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಉದ್ದಿನಾ ಕಡ್ಡಿ ಹಚ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗೊನೆ ಮುರಿದಾ ಬಾಳೆಹಣ್ಣು ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಗೊನೆ ಮುರಿದಾ ಬಾಳೆಹಣ್ಣು ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನೆನೆಯಕ್ಕಿ ನೆನಗಡಲೆ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ನೆನೆಯಕ್ಕಿ ನೆನಗಡಲೆ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಡಿಕೆ ಎಲೆಗಳಾ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಅಡಿಕೆ ಎಲೆಗಳಾ ಇಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸುಡುತೇನೆ ಲೋಬಾನ ಸುಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಸುಡುತೇನೆ ಲೋಬಾನ ಸುಟ್ವಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕರಿಯ ಸಿಪ್ಪಿನಾ ಕಾಯಿ ಒಡೆದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಕರಿಯ ಸಿಪ್ಪಿನಾ ಕಾಯಿ ಒಡೆದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನೇಮಿಸಿ ಕೈಯ ಮುಗಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ನೇಮಿಸಿ ಕೈಯ ಮುಗಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಿತ್ತಾಳೆ ಪುಟ್ಟೇಗಿ ತುಂಬ್ಯಾಳ್ಳವ್ವಾ  ಕೋಲು ಕೋಲನ್ನ ಕೋಲೆ ||ಮು||
ಹಿತ್ತಾಳೆ ಪುಟ್ಟೇಗಿ ತುಂಬ್ಯಾಳ್ಳವಾ  ಕೋಲು ಕೋಲನ್ನ ಕೋಲೆ ||ಹಿ||

ಕೊಡ ಹೊತ್ತುಕೊಂಡು ಬರುತಾಳೆ ಕೋಲು ಕೋಲನ್ನ ಕೋಲೆ ||ಮು||
ಕೊಡ ಹೊತ್ತುಕೊಂಡು ಬರುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಸಿಟ್ಟಕ್ಕಿ ಮಗಳ ಸೀರತೈತೆ ಕೋಲು ಕೋಲನ್ನ ಕೋಲೆ ||ಮು||
ಸಿಟ್ಟಕ್ಕಿ ಮಗಳ ಸೀರತೈತೆ ಕೋಲು ಕೋಲನ್ನ ಕೋಲೆ ||ಹಿ||

ನಡುಮನಿಗೆ ಕೊಡವಾ ಇಳಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ನಡುಮನಿಗೆ ಕೊಡವಾ ಇಳಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಗಳ ಎತ್ತಿಗಂಡೆ ನೋಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಮಗಳ ಎತ್ತಿಗಂಡೆ ನೋಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಗಲ್ಲೀನ ರಕುತಾ ಆಗ್ಯಾವಲ್ಲಾ ಕೋಲು ಕೋಲನ್ನ ಕೋಲೆ ||ಮು||
ಗಲ್ಲೀನ ರಕುತಾ ಆಗ್ಯಾವಲ್ಲಾ ಕೋಲು ಕೋಲನ್ನ ಕೋಲೆ ||ಹಿ||

ಊರಾಳ ಅಕ್ಕನೋರೆ ಕೇರ್ಯಾರ ತಂಗಿನೋರೆ,
ನನ್ನ ಮಗಳೀಗೆ ನೋಡಬರ್ರೆ ಕೋಲು ಕೋಲನ್ನ ಕೋಲೆ ||ಮು||
ನನ್ನ ಮಗಳೀಗೆ ನೋಡಬರ್ರೆ ಕೋಲು ಕೋಲನ್ನ ಕೋಲೆ ||ಹಿ||

ಊರಾಳ ಅಕ್ಕನೋರೆ ಕೇರ್ಯಾರ ತಂಗಿನೋರೆ,
ನನ್ನ ಮಗಳೀಗೆ ನೋಡಬರ್ರೆ ಕೋಲು ಕೋಲನ್ನ ಕೋಲೆ ||ಮು||
ನನ್ನ ಮಗಳೀಗೆ ನೋಡಬರ್ರೆ ಕೋಲು ಕೋಲನ್ನ ಕೋಲೆ ||ಹಿ||

ಗಲ್ಲಕ ರಾಮರಕುತಾ ಆಗ್ಯಾವವ್ವಾ ಕೋಲು ಕೋಲನ್ನ ಕೋಲೆ ||ಮು||
ಗಲ್ಲಕ ರಾಮರಕುತಾ ಆಗ್ಯಾವವ್ವಾ ಕೋಲು ಕೋಲನ್ನ ಕೋಲೆ ||ಹಿ||

ಆಸರಾಗ್ಯಾತಿ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಮು||
ಆಸರಾಗ್ಯಾತಿ ಮಲ್ಲಮ್ಮ  ಕೋಲು ಕೋಲನ್ನ ಕೋಲೆ ||ಹಿ||

ಬೆದರಿಕೊಂಡಾಳೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಮು||
ಬೆದರಿಕೊಂಡಾಳೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಹಿ||

ಆಸರಾ ತಗಿಯೇ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಮು||
ಆಸರಾ ತಗಿಯೇ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಹಿ||

ಆಸರಾ ತಗದಾಳೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಮು||
ಆಸರಾ ತಗದಾಳೆ ಮಲ್ಲಮ್ಮ ಕೋಲು ಕೋಲನ್ನ ಕೋಲೆ ||ಹಿ||

ತೊಟ್ಟಲದಾಕೆ ಹಾಕ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ತೊಟ್ಟಲದಾಕೆ ಹಾಕ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಒಂದು ದಿನ ಅಂಬೋದು ಒಂದೆ ವರುಷ ಕೋಲು ಕೋಲನ್ನ ಕೋಲೆ ||ಮು||
ಒಂದು ದಿನ ಅಂಬೋದು ಒಂದೆ ವರುಷ ಕೋಲು ಕೋಲನ್ನ ಕೋಲೆ ||ಹಿ||

ಎರಡು ದಿನ ಅಂಬೋದು ಮೂರು ವರುಷ ಕೋಲು ಕೋಲನ್ನ ಕೋಲೆ ||ಮು||
ಎರಡು ದಿನ ಅಂಬೋದು ಮೂರು ವರುಷ ಕೋಲು ಕೋಲನ್ನ ಕೋಲೆ ||ಹಿ||

ಮೂರೆ ದಿನ ಅಂಬೋದು ನಾಕೆ ವರುಷ ಕೋಲು ಕೋಲನ್ನ ಕೋಲೆ ||ಮು||
ಮೂರೆ ದಿನ ಅಂಬೋದು ನಾಕೆ ವರುಷ ಕೋಲು ಕೋಲನ್ನ ಕೋಲೆ ||ಹಿ||

ನಾಕು ವರುಷದ ಮಗಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಮು||
ನಾಕು ವರುಷದ ಮಗಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಹಿ||

ನಾರೀಗೆ ದಟ್ಟಿ ತರಬೇಕೆ ಕೋಲು ಕೋಲನ್ನ ಕೋಲೆ ||ಮು||
ನಾರೀಗೆ ದಟ್ಟಿ ತರಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಮಗಳಿಗೆ ದಟ್ಟಿ ಉಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮಗಳಿಗೆ ದಟ್ಟಿ ಉಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮಗಳ ಚಂದವಾ ನೋಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮಗಳ ಚಂದವಾ ನೋಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಒಂಬತ್ತು ವರುಷದಾಕಿ ಅವ್ವಣೆವ್ವಾ ಕೋಲು ಕೋಲನ್ನ ಕೋಲೆ ||ಮು||
ಒಂಬತ್ತು ವರುಷದಾಕಿ ಅವ್ವಣೆವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಣ್ಣ ಸಣ್ಣ ಬೊಟ್ಟು ಇಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಸಣ್ಣ ಸಣ್ಣ ಬೊಟ್ಟು ಇಟ್ಟಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಬಣ್ಣದಾ ಸೀರೆ ಉಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಬಣ್ಣದಾ ಸೀರೆ ಉಡಿಸ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಿಗೆ ಸರಕೊಟ್ಟು ಆಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಮಲ್ಲಿಗೆ ಸರಕೊಟ್ಟು ಆಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ವಾರೀಗಿ ಗೆಳತ್ಯಾರೆ ನೀರಿಗೋಗಿ ಕೋಲು ಕೋಲನ್ನ ಕೋಲೆ ||ಮು||
ವಾರೀಗಿ ಗೆಳತ್ಯಾರೆ ನೀರಿಗೋಗಿ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೆಂದು ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೆಂದು ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ನೀರಿಗೆ ನಾನು ಹೋಗುತೀನಿ ಕೋಲು ಕೋಲನ್ನ ಕೋಲೆ ||ಮು||
ನೀರಿಗೆ ನಾನು ಹೋಗುತೀನಿ ಕೋಲು ಕೋಲನ್ನ ಕೋಲೆ ||ಹಿ||

ಸಣ್ಣ ಬಿಂದಿಗೆ ಕೊಂಡೆ ಕೊಡೆ ಕೋಲು ಕೋಲನ್ನ ಕೋಲೆ ||ಮು||
ಸಣ್ಣ ಬಿಂದಿಗೆ ಕೊಂಡೆ ಕೊಡೆ ಕೋಲು ಕೋಲನ್ನ ಕೋಲೆ ||ಹಿ||

ನೀನ್ಯಾಕ ನೀರಿಗೆ ಹೋಗುತೆವ್ವಾ ಕೋಲು ಕೋಲನ್ನ ಕೋಲೆ ||ಮು||
ನೀನ್ಯಾಕ ನೀರಿಗೆ ಹೋಗುತೆವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗೆಣತೇರಾ ಕೂಡ ಹೋಗುತೀನಿ ಕೋಲು ಕೋಲನ್ನ ಕೋಲೆ ||ಮು||
ಗೆಣತೇರಾ ಕೂಡ ಹೋಗುತೀನಿ ಕೋಲು ಕೋಲನ್ನ ಕೋಲೆ ||ಹಿ||

ಗೆಣತೇರಾ ಕೂಡ ಹೋಗುತೀನಿ ಕೋಲು ಕೋಲನ್ನ ಕೋಲೆ ||ಮು||
ಗೆಣತೇರಾ ಕೂಡ ಹೋಗುತೀನಿ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ಗೆಳತಿರೆ ಗಗಂಮ್ಮ ಗೌರಮ್ಮ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ಗೆಳತಿರೆ ಗಗಂಮ್ಮ ಗೌರಮ್ಮ ಕೋಲು ಕೋಲನ್ನ ಕೋಲೆ ||ಹಿ||

ಬಂಗಾರದ ಕೊಳ್ಳ ಬರಲವ್ವಾ ಕೋಲು ಕೋಲನ್ನ ಕೋಲೆ ||ಮು||
ಬಂಗಾರದ ಕೊಳ್ಳ ಬರಲವ್ವಾ ಗೌರಮ್ಮ ಕೋಲು ಕೋಲನ್ನ ಕೋಲೆ ||ಹಿ||

ನೀರಿಗೆ ಆಕಿ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಮು||
ನೀರಿಗೆ ಆಕಿ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಹಿ||

ನಾಲರು ಕೂಡಿ ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ನಾಲರು ಕೂಡಿ ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೊಡಗಳ ಅವರು ತುಂಬ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊಡಗಳ ಅವರು ತುಂಬ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸುತ್ತಮುತ್ತ ಅವರು ನೋಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಸುತ್ತಮುತ್ತ ಅವರು ನೋಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮಂದಿಯಾರ್ಯಾರಾ ಸುಳಿವಿಲ್ಲ ಕೋಲು ಕೋಲನ್ನ ಕೋಲೆ ||ಮು||
ಮಂದಿಯಾರ್ಯಾರಾ ಸುಳಿವಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಸುದ್ದಿ ಇಳಿದಾಂಗ ಇಳಿದಾನೆ ಕೋಲು ಕೋಲನ್ನ ಕೋಲೆ ||ಮು||
ಸುದ್ದಿ ಇಳಿದಾಂಗ ಇಳಿದಾನೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಮ್ಮ ಕೊಡಗಳ ಎತ್ತು ಬಾರೋ ಕೋಲು ಕೋಲನ್ನ ಕೋಲೆ ||ಮು||
ನಮ್ಮ ಕೊಡಗಳ ಎತ್ತು ಬಾರೋ ಕೋಲು ಕೋಲನ್ನ ಕೋಲೆ ||ಹಿ||

ನಮ್ಮ ಕೊಡಗಳ ಎತ್ತು ಬಾರೋ ಕೋಲು ಕೋಲನ್ನ ಕೋಲೆ ||ಮು||
ನಮ್ಮ ಕೊಡಗಳ ಎತ್ತು ಬಾರೋ ಕೋಲು ಕೋಲನ್ನ ಕೋಲೆ ||ಹಿ||

ನಾಲಾರ ಕೊಡಗಳಾ ಎತ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ನಾಲಾರ ಕೊಡಗಳಾ ಎತ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸೀರೆಯ ಸೆರಗ ಹಿಡಿದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಸೀರೆಯ ಸೆರಗ ಹಿಡಿದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗಂಡರ ಹೆಸರ ಹೇಳಬೇಕೆ ಕೋಲು ಕೋಲನ್ನ ಕೋಲೆ ||ಮು||
ಗಂಡರ ಹೆಸರ ಹೇಳಬೇಕೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮ ಸೆರಗಳಾ ಬಿಟ್ಟು ಬಿಡಾ ಕೋಲು ಕೋಲನ್ನ ಕೋಲೆ ||ಮು||
ನಮ್ಮ ಸೆರಗಳಾ ಬಿಟ್ಟು ಬಿಡಾ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮಕ್ಕನ ಮಗಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಮು||
ನಿಮ್ಮಕ್ಕನ ಮಗಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ಸೆರಗ ಇಡಿಹೋಗೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ಸೆರಗ ಇಡಿಹೋಗೆ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮ ಗಂಡರ ಹೆಸರ ಹೇಳಬೇಕೆ ಕೋಲು ಕೋಲನ್ನ ಕೋಲೆ ||ಮು||
ನಿಮ್ಮ ಗಂಡರ ಹೆಸರ ಹೇಳಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಮಾವನ ಮಗನೆ ರಾಕಿರೆಡ್ಡಿ ಕೋಲು ಕೋಲನ್ನ ಕೋಲೆ ||ಮು||
ಮಾವನ ಮಗನೆ ರಾಕಿರೆಡ್ಡಿ ಕೋಲು ಕೋಲನ್ನ ಕೋಲೆ ||ಹಿ||

ಅಕ್ಕನ ಮಗಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಮು||
ಅಕ್ಕನ ಮಗಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಹಿ||

ನಾಲಾರ ಕಲಿತು ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಮು||
ನಾಲಾರ ಕಲಿತು ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮನಿಯಾಕ ಕೊಡ ಇಳಿಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಮನಿಯಾಕ ಕೊಡ ಇಳಿಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿ ಎನೊಂದಾ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿ ಎನೊಂದಾ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಹೆಣ್ಣಿಗೆ ನೀವು ಹೋಗಬೇಕೆ ಕೋಲು ಕೋಲನ್ನ ಕೋಲೆ ||ಮು||
ಹೆಣ್ಣಿಗೆ ನೀವು ಹೋಗಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಅಕ್ಕನ ಮಗಳು ಕೇಳಬೇಕೆ ಕೋಲು ಕೋಲನ್ನ ಕೋಲೆ ||ಮು||
ಅಕ್ಕನ ಮಗಳು ಕೇಳಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಅಕ್ಕನ ಮಗಳು ಕೇಳಬೇಕೆ ಕೋಲು ಕೋಲನ್ನ ಕೋಲೆ ||ಮು||
ಅಕ್ಕನ ಮಗಳು ಕೇಳಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಬಿಡದೆ ಮಂಚಕ ಮಲಿಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಬಿಡದೆ ಮಂಚಕ ಮಲಿಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಎಷ್ಟು ಎಬ್ಬಿಸಿದರೆ ಏಳುವಲ್ಲಾ ಕೋಲು ಕೋಲನ್ನ ಕೋಲೆ ||ಮು||
ಎಷ್ಟು ಎಬ್ಬಿಸಿದರೆ ಏಳುವಲ್ಲಾ ಕೋಲು ಕೋಲನ್ನ ಕೋಲೆ ||ಹಿ||

ನಮಗೆ ಹೆಣ್ಣು ಕೊಡುತಾಳೇನೋ ಕೋಲು ಕೋಲನ್ನ ಕೋಲೆ ||ಮು||
ನಮಗೆ ಹೆಣ್ಣು ಕೊಡುತಾಳೇನೋ ಕೋಲು ಕೋಲನ್ನ ಕೋಲೆ ||ಹಿ||

ಭಾಗ್ಯಕೆ ಹೆಣ್ಣು ಮಗಳು ಹಡದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಭಾಗ್ಯಕೆ ಹೆಣ್ಣು ಮಗಳು ಹಡದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಳೇ ಸಂಬಂಧಕ್ಕೆ ಹೆಣ್ಣು ಕೊಡುದಿಲ್ಲಾ ಕೋಲು ಕೋಲನ್ನ ಕೋಲೆ ||ಮು||
ಹಳೇ ಸಂಬಂಧಕ್ಕೆ ಹೆಣ್ಣು ಕೊಡುದಿಲ್ಲಾ ಕೋಲು ಕೋಲನ್ನ ಕೋಲೆ ||ಹಿ||

ನಮಗೆ ಕನ್ಯೆ ಕೊಡೋದಿಲ್ಲಾ ಕೋಲು ಕೋಲನ್ನ ಕೋಲೆ ||ಮು||
ನಮಗೆ ಕನ್ಯೆ ಕೊಡೋದಿಲ್ಲಾ ಕೋಲು ಕೋಲನ್ನ ಕೋಲೆ ||ಹಿ||

## ೩. ಅವ್ವಣೆವ್ವ ಕಾವ್ಯ (೪)

ರಾಕಿರೆಡ್ಡಿ ಏನೊಂದು ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿ ಏನೊಂದು ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಆಕಳ ಕೊಟ್ಟೇವಿ ಕರವ್ಯಾಕೆ ಕೊಡುದಿಲ್ಲ
ನಮಗೆ ಆಕಿಯಾಕ ಕೊಡುದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಮಗೆ ಆಕಿಯಾಕ ಕೊಡುದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಹೋಗಿ ಬರ್ರೆವ್ವ ಅವರ ಮನಿಗೆ ಕೋಲು ಕೋಲನ್ನ ಕೋಲೆ ||ಮು||
ಹೋಗಿ ಬರ್ರೆವ್ವ ಅವರ ಮನಿಗೆ ಕೋಲು ಕೋಲನ್ನ ಕೋಲೆ ||ಹಿ||

ಕೇಳಿಸಿ ಬರಬೇಕು ರಾಕಿರೆಡ್ಡಿ ಕೋಲು ಕೋಲನ್ನ ಕೋಲೆ ||ಮು||
ಕೇಳಿಸಿ ಬರಬೇಕು ರಾಕಿರೆಡ್ಡಿ ಕೋಲು ಕೋಲನ್ನ ಕೋಲೆ ||ಹಿ||

ಊದಿನ ಕಡ್ಡಿ ತಗಂದಾರೆ  ಕೋಲು ಕೋಲನ್ನ ಕೋಲೆ ||ಮು||
ಊದಿನ ಕಡ್ಡಿ ತಗಂದಾರೆ  ಕೋಲು ಕೋಲನ್ನ ಕೋಲೆ ||ಹಿ||

ಅಡಿಕೆಯ ಎಲೆಯ ತಗಂದಾರೆ  ಕೋಲು ಕೋಲನ್ನ ಕೋಲೆ ||ಮು||
ಅಡಿಕೆಯ ಎಲೆ ತಗಂದಾರೆ  ಕೋಲು ಕೋಲನ್ನ ಕೋಲೆ ||ಹಿ||

ಕರಿಯ ಸಿಪ್ಪಿನಾ ಕಾಯಿ ತಗಂದಾರೆ ಕೋಲು ಕೋಲನ್ನ ಕೋಲೆ ||ಮು||
ಕರಿಯ ಸಿಪ್ಪಿನಾ  ಕಾಯಿ ತಗಂದಾರೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣನ ಮನಿಗೆ ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣನ ಮನಿಗೆ ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಿಂಹಾಸನದ ಮ್ಯಾಲೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಸಿಂಹಾಸನದ ಮ್ಯಾಲೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರಾ ಮಾರಿ ನೋಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರಾ ಮಾರಿ ನೀಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಯಾಕೆ ಬಂದೀರಿ ರೆಡ್ಡೇರೇ ಕೋಲು ಕೋಲನ್ನ ಕೋಲೆ ||ಮು||
ಯಾಕೆ ಬಂದೀರಿ ರೆಡ್ಡೇರೇ ಕೋಲು ಕೋಲನ್ನ ಕೋಲೆ ||ಹಿ||

ಹೊತ್ತಿಗಿ ತಗಿಯಪ್ಪ ಧರ್ಮಣ್ಣ  ಕೋಲು ಕೋಲನ್ನ ಕೋಲೆ ||ಮು||
ಹೊತ್ತಿಗಿ ತಗಿಯಪ್ಪ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಹೊತ್ತಿಗೆ ದುಡ್ಡು ಇಟ್ವಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಹೊತ್ತಿಗೆ ದುಡ್ಡು ಇಟ್ವಾರವ್ವಾ ಕೋಲು ಕೋಲನ್ನ ಕೋಲೆ೦||ಹಿ||

ಅಡಿಕೆಯ ಎಲೆಯ ಇಟ್ವಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಅಡಿಕೆಯ ಎಲೆಯ ಇಟ್ವಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಊದಿನಕಡ್ಡಿ ಇಟ್ವಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಊದಿನಕಡ್ಡಿ ಇಟ್ವಾರವ್ವಾ ಕೋಲು ಕೋಲನ್ನ ಕೋಲೆ||ಹಿ|||

ಕರಿಸಿಪ್ಪಿನಾ ಕಾಯಿ ಹೊಡೆದಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಕರಿಸಿಪ್ಪಿನಾ ಕಾಯಿ ಹೊಡೆದಾರವ್ವಾ ಕೋಲು ಕೋಲನ್ನ ಕೋಲೆ||ಹಿ||

ಹೊತ್ತಿಗೆ ತಗೀತಾನೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಹೊತ್ತಿಗೆ ತಗೀತಾನೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಮುಸಿನಗು ಧರ್ಮಣ್ಣ ನಗುತಾನೆ ಕೋಲು ಕೋಲನ್ನ ಕೋಲೆ ||ಮು||ಮು
ಮುಸಿನಗು ಧರ್ಮಣ್ಣ ನಗುತಾನೆ  ಕೋಲು ಕೋಲನ್ನ ಕೋಲೆ ||ಹಿ||

ಬಂದದ್ದು ಹೇಳೋ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಮು||
ಬಂದದ್ದು ಹೇಳೋ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಹಿ||

ಆಸೆಕಟ್ಟಿಗೆ ಮಳೆ ಮುಂಡೆ ಕೋಲು ಕೋಲನ್ನ ಕೋಲೆ ||ಮು||
ಆಸೆಕಟ್ಟಿಗೆ ಮಳೆ ಮುಂಡೆ ಕೋಲು ಕೋಲನ್ನ ಕೋಲೆ ||ಹಿ||

ಹದಿನಾರು ದಿನದಾಗ ಲಗ್ಗಾನ ಕೋಲು ಕೋಲನ್ನ ಕೋಲೆ ||ಮು||
ಹದಿನಾರು ದಿನದಾಗ ಲಗ್ಗಾನ ಕೋಲು ಕೋಲನ್ನ ಕೋಲೆ ||ಹಿ||

ಬಂದದ್ದು ಹೇಳ್ಯಾನೆ ಧರ್ಮಣ್ಣ  ಕೋಲು ಕೋಲನ್ನ ಕೋಲೆ ||ಮು||
ಬಂದದ್ದು ಹೇಳ್ಯಾನೆ ಧರ್ಮಣ್ಣ  ಕೋಲು ಕೋಲನ್ನ ಕೋಲೆ ||ಹಿ||

ಬಂದದ್ದು ಹೇಳ್ಯಾನೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಬಂದದ್ದು ಹೇಳ್ಯಾನೆ ಧರ್ಮಣ್ಣ  ಕೋಲು ಕೋಲನ್ನ ಕೋಲೆ ||ಹಿ||

ತಾಳಿ ಹೊತ್ತು ಮೀರಿದರೆ ಆಗ್ಯಾತೋ ಕೋಲು ಕೋಲನ್ನ ಕೋಲೆ ||ಮು||
ತಾಳಿಹೊತ್ತು ಮೀರಿದರೆ ಆಗ್ಯಾತೋ ಕೋಲು ಕೋಲನ್ನ ಕೋಲೆ ||ಹಿ||

ಆಸೆ ಕಟ್ಟಿಗೆ ಮಳೆ ಮುಂಡೆ ಕೋಲು ಕೋಲನ್ನ ಕೋಲೆ ||ಮು||
ಆಸೆಕಟ್ಟಿಗೆ ಮಳೆ ಮುಂಡೆ ಕೋಲು ಕೋಲನ್ನ ಕೋಲೆ ||ಹಿ||

ತಮ್ಮ ಅರಮನಿಗೆ ಬಂದಾರೆ ಕೋಲು ಕೋಲನ್ನ ಕೋಲೆ ||ಮು||
ತಮ್ಮ ಅರಮನಿಗೆ ಬಂದಾರೆ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮನ ಅರಮನಿಗೆ ಹೋಗ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮನ ಅರಮನಿಗೆ ಹೋಗ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಪಡಸಾಲೆ ಮ್ಯಾಲೆ ಕುಂತಾರೆ ಕೋಲು ಕೋಲನ್ನ ಕೋಲೆ ||ಮು||
ಪದಸಾಲೆ ಮ್ಯಾಲೆ ಕುಂತಾರೆ ಕೋಲು ಕೋಲನ್ನ ಕೋಲೆ ||ಹಿ||

ಭರಮರೆಡ್ಡಿ ಮಾರಿ ನೋಡ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಭರಮರೆಡ್ಡಿ ಮಾರಿ ನೋಡ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ತುಪ್ಪಬಾನ ಉಣ್ಣಾಕೆ ಬಂದೀವಿ ಕೋಲು ಕೋಲನ್ನ ಕೋಲೆ ||ಮು||
ತುಪ್ಪಬಾನ ಉಣ್ಣಾಕೆ ಬಂದೀವಿ ಕೋಲು ಕೋಲನ್ನ ಕೋಲೆ ||ಹಿ||

ತುಪ್ಪಬಾನ ಉಣ್ಣಾಕೆ ಬಂದೀವಿ ಕೋಲು ಕೋಲನ್ನ ಕೋಲೆ ||ಮು||
ತುಪ್ಪಬಾನ ಉಣ್ಣಾಕೆ ಬಂದೀವಿ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಏನೊಂದು ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಏನೊಂದು ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ನಿಮಗೆ ಹೆಣ್ಣು ಕೊಡಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿಮಗೆ ಹೆಣ್ಣು ಕೊಡಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಭಾಗ್ಯಕ್ಕೆ ಹೆಣ್ಣು ಮಗಳ ಹಡದೀನಿ ಕೋಲು ಕೋಲನ್ನ ಕೋಲೆ ||ಮು||
ಭಾಗ್ಯಕ್ಕೆ ಹೆಣ್ಣು ಮಗಳ ಹಡದೀನಿ ಕೋಲು ಕೋಲನ್ನ ಕೋಲೆ ||ಹಿ||

ಸಾದರಕಿ ಬಾಳ್ಯವು ಆಗೋದಿಲ್ಲ ಕೋಲು ಕೋಲನ್ನ ಕೋಲೆ ||ಮು||
ಸಾದರಕಿ ಬಾಳ್ಯವು ಆಗೋದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಕೊಟ್ಟು ಕಣ್ಣೀಲಿ ನೋಡೊದಿಲ್ಲ ಕೋಲು ಕೋಲನ್ನ ಕೋಲೆ ||ಮು||
ಕೊಟ್ಟು ಕಣ್ಣೀಲಿ ನೋಡೊದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ನಿಮಗೆ ಮಗಳನ್ನು ಕೊಡೋದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿಮಗೆ ಮಗಳನ್ನು ಕೊಡೋದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಒಳಗಿದ್ದ ಭರಮರೆಡ್ಡಿ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಒಳಗಿದ್ದ ಭರಮರೆಡ್ಡಿ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಭರಮರೆಡ್ಡಿ ಏನೊಂದೆ ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಭರಮರೆಡ್ಡಿ ಏನೊಂದೆ ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಳಿಯರಿಗೆ ಕೊಡದೆ ಇನ್ಯಾರಿಗೆ  ಕೊಡಬೇಕೆ  ಕೋಲು ಕೋಲನ್ನ ಕೋಲೆ ||ಮು||
ಅಳಿಯರಿಗೆ ಕೊಡದೆ ಇನ್ಯಾರಿಗೆ  ಕೊಡಬೇಕೆ  ಕೋಲು ಕೋಲನ್ನ ಕೋಲೆ ||ಹಿ||

ಆಕಳು ಕೊಟ್ಟವರಿಗೆ ಕರಗಳ ಕೊಡಬೇಕು ಕೋಲು ಕೋಲನ್ನ ಕೋಲೆ ||ಮು||
ಆಕಳು ಕೊಟ್ಟವರಿಗೆ ಕರಗಳ ಕೊಡಬೇಕು  ಕೋಲು ಕೋಲನ್ನ ಕೋಲೆ ||ಹಿ||

ಕರುಗಳ ನಾವು ಕೊಡಬೇಕೆ  ಕೋಲು ಕೋಲನ್ನ ಕೋಲೆ ||ಮು||
ಕರುಗಳ ನಾವು ಕೊಡಬೇಕೆ  ಕೋಲು ಕೋಲನ್ನ ಕೋಲೆ ||ಹಿ||

ಕೊಡತಿನಿ ಹೋಗು ರೆಡ್ಡೆರೇ  ಕೋಲು ಕೋಲನ್ನ ಕೋಲೆ ||ಮು||
ಕೊಡತಿನಿ ಹೋಗು ರೆಡ್ಡೆರೇ ಕೋಲು ಕೋಲನ್ನ ಕೋಲೆ ||ಹಿ||

ಮಾತು ಕೊಟ್ಟಾನೆ ಭರಮರೆಡ್ಡಿ  ಕೋಲು ಕೋಲನ್ನ ಕೋಲೆ ||ಮು||
ಮಾತು ಕೊಟ್ಟಾನೆ ಭರಮರೆಡ್ಡಿ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಬೋರ್ಯಾಡಿ ಅಳುತಾಳೆ  ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಬೋರ್ಯಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಆಸರಾ ಇಳೇವು ತರುತೀವಿ ಕೋಲು ಕೋಲನ್ನ ಕೋಲೆ ||ಮು||
ಅಸರಾ ಇಳೇವು ತರುತೀವಿ  ಕೋಲು ಕೋಲನ್ನ ಕೋಲೆ ||ಹಿ||

ಆಸರಾ ಇಳೇವು ತರುತೀವಿ ಕೋಲು ಕೋಲನ್ನ ಕೋಲೆ ||ಮು||
ಅಸರಾ ಇಳೇವು ತರುತೀವಿ  ಕೋಲು ಕೋಲನ್ನ ಕೋಲೆ ||ಹಿ||

ಆಸರಾ ಇಳೇವೆ ನಡೆಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಅಸರಾ ಇಳೇವೆ ನಡೆಸ್ಯಾರವ್ವಾ ಕೋಲು ಕೋಲನ್ನ ಕೋಲೆ||ಹಿ||

ಹದಿನಾರು ದಿನದಾಗೆ ಲಗ್ನನೋಡೆ ಕೋಲು ಕೋಲನ್ನ ಕೋಲೆ ||ಮು||
ಹದಿನಾರು ದಿನದಾಗೆ ಲಗ್ನ ನೋಡೆ ಕೋಲು ಕೋಲನ್ನ ಕೋಲೆ ||ಹಿ||

ಭೀಮಗಾ ಸುದ್ದಿ ಮುಟ್ಯಾವವ್ವಾ ಕೋಲು ಕೋಲನ್ನ ಕೋಲೆ ||ಮು||
ಭೀಮಗಾ ಸುದ್ದಿ ಮುಟ್ಯಾವವ್ವಾ ಕೋಲು ಕೋಲನ್ನ ಕೋಲೆ||ಹಿ||

ಗರಡಿ ಮನಿಯಾಗೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಗರಡಿ ಮನಿಯಾಗೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಎದ್ದು ಬಂದಾನ ಗಜಭೀಮ  ಕೋಲು ಕೋಲನ್ನ ಕೋಲೆ ||ಮು||
ಎದ್ದು ಬಂದಾನ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಸಿಟ್ಟಿಗಿ ಬಂದಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಸಿಟ್ಟಿಗಿ ಬಂದಾನೆ ಗಜಭೀಮ  ಕೋಲು ಕೋಲನ್ನ ಕೋಲೆ ||ಹಿ||

ಹೆಗಲ ಮ್ಯಾಲ ಗಜ ಹೊತ್ತು  ಕೋಲು ಕೋಲನ್ನ ಕೋಲೆ ||ಮು||
ಹೆಗಲ ಮ್ಯಾಲ ಗಜ ಹೊತ್ತು ಕೋಲು ಕೋಲನ್ನ ಕೋಲೆ ||ಹಿ||

ಕೈಲಾಸಕಾ ಹೋಗ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಕೈಲಾಸಕಾ ಹೋಗ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗಜ ತಿರುಗಿಸ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಗಜ ತಿರುಗಿಸ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಯಾಕ ಬಂದೀಯಾ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಯಾಕ ಬಂದೀಯಾ ಗಜಭೀಮ  ಕೋಲು ಕೋಲನ್ನ ಕೋಲೆ ||ಹಿ||

ಕೊರಳಾ ಸರ್ಪ ಕೊಡಬೇಕೆ ಕೋಲು ಕೋಲನ್ನ ಕೋಲೆ ||ಮು||
ಕೊರಳಾ ಸರ್ಪ ಕೊಡಬೇಕೆ ಕೋಲು ಕೋಲನ್ನ ಕೋಲೆ ||ಹಿ||

ನಾನು ಕಣ್ಣು ಇಟ್ಟ ಹೆಣ್ಣು ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಮು||
ನಾನು ಕಣ್ಣು ಇಟ್ಟ ಹೆಣ್ಣು ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಹಿ||

ಕೊರಳಾ ಸರ್ಪ ಕೊಡಬೇಕೆ ಕೋಲು ಕೋಲನ್ನ ಕೋಲೆ ||ಮು||
ಕೊರಳಾ ಸರ್ಪ ಕೊಡಬೇಕೆ  ಕೋಲು ಕೋಲನ್ನ ಕೋಲೆ ||ಹಿ||

ಶಿವರಾಯ ಏನೊಂದಾ ನುಡಿದಾನೊ ಕೋಲು ಕೋಲನ್ನ ಕೋಲೆ ||ಮು||
ಶಿವರಾಯಏನೊಂದಾ ನುಡದಾನೊ ಕೋಲು ಕೋಲನ್ನ ಕೋಲೆ ||ಹಿ||

ಕಟ್ಟಿರೊ ತಾಳಿ ಹರಿಸಬ್ಯಾಡ ಕೋಲು ಕೋಲನ್ನ ಕೋಲೆ ||ಮು||
ಕಟ್ಟಿರೊ ತಾಳಿ ಹರಿಸಬ್ಯಾಡ ಕೋಲು ಕೋಲನ್ನ ಕೋಲೆ ||ಹಿ||

ಮೂಗಿನ್ಯಾಗಳ ಮೂಗುತಿ ತಗಿಸಬೇಡ ಕೋಲು ಕೋಲನ್ನ ಕೋಲೆ ||ಮು||
ಮೂಗಿನ್ಯಾಗಳ ಮೂಗುತಿ ತಗಿಸಬೇಡ  ಕೋಲು ಕೋಲನ್ನ ಕೋಲೆ ||ಹಿ||

ಕೈಯಾಗಳ ಬಳೆಯ ವಡಿಸಬ್ಯಾಡ ಕೋಲು ಕೋಲನ್ನ ಕೋಲೆ ||ಮು||
ಕೈಯಾಗಳ ಬಲೆಯ ವಡಿಸಬ್ಯಾಡ  ಕೋಲು ಕೋಲನ್ನ ಕೋಲೆ ||ಹಿ||

ತಲಿಯಾ ಮ್ಯಾಗಳ ದಂಡೆ ತಗಸಬ್ಯಾಡ ಕೋಲು ಕೋಲನ್ನ ಕೋಲೆ ||ಮು||
ತಲಿಯಾ ಮ್ಯಾಗಳ ದಂಡೆ ತಗಸಬ್ಯಾಡ ಕೋಲು ಕೋಲನ್ನ ಕೋಲೆ ||ಹಿ||

ಉಡಿಯಾಗಳ ಉಡಿಯಕ್ಕಿ ತಗಿಸಬ್ಯಾಡ ಕೋಲು ಕೋಲನ್ನ ಕೋಲೆ ||ಮು||
ಉಡಿಯಾಗಳ ಉಡಿಯಕ್ಕಿ ತಗಿಸಬ್ಯಾಡ  ಕೋಲು ಕೋಲನ್ನ ಕೋಲೆ ||ಹಿ||

ಕೈಯಾಗಳ ಕಂಕಣ ಹರಿಸಬ್ಯಾಡ  ಕೋಲು ಕೋಲನ್ನ ಕೋಲೆ ||ಮು||
ಕೈಯಾಗಳ ಕಂಕಣ ಹರಿಸಬ್ಯಾಡ ಕೋಲು ಕೋಲನ್ನ ಕೋಲೆ ||ಹಿ||

ಬಣ್ಣದ ಐರಾಣಿ ವಡಿಸಬ್ಯಾಡ  ಕೋಲು ಕೋಲನ್ನ ಕೋಲೆ ||ಮು||
ಬಣ್ಣದ ಐರಾಣಿ ವಡಿಸಬ್ಯಾಡ  ಕೋಲು ಕೋಲನ್ನ ಕೋಲೆ ||ಹಿ||

ಬಣ್ಣದ ಐರಾಣಿ ವಡಿಸಬ್ಯಾಡ  ಕೋಲು ಕೋಲನ್ನ ಕೋಲೆ ||ಮು||
ಬಣ್ಣದ ಐರಾಣಿ ವಡಿಸಬ್ಯಾಡ ಕೋಲು ಕೋಲನ್ನ ಕೋಲೆ ||ಹಿ||

ಅಂದಾದ ಆಲುಗಂಬ ತಗಿಸಬ್ಯಾಡ  ಕೋಲು ಕೋಲನ್ನ ಕೋಲೆ ||ಮು||
ಅಂದಾದ ಆಲುಗಂಬ ತಗಿಸಬ್ಯಾಡ ಕೋಲು ಕೋಲನ್ನ ಕೋಲೆ ||ಹಿ||

ಅಂದಾದ ಆಲುಗಂಬ ತಗಿಸಬ್ಯಾಡ ಕೋಲು ಕೋಲನ್ನ ಕೋಲೆ ||ಮು||
ಅಂದಾದ ಆಲುಗಂಬ ತಗಿಸಬ್ಯಾಡ  ಕೋಲು ಕೋಲನ್ನ ಕೋಲೆ ||ಹಿ||

ಸಿಟ್ಟಿಗಿ ಬಂದಾನ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಸಿಟ್ಟಿಗಿ ಬಂದಾನ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಕೈಲಾಸ ಗದಗದ ನಡುಗಿತವ್ವಾ ಕೋಲು ಕೋಲನ್ನ ಕೋಲೆ ||ಮು||
ಕೈಲಾಸ ಗದಗದ ನಡುಗಿತವ್ವಾ ಕೋಲು ಕೋಲನ್ನ ಕೋಲೆ ||ಹಿ||

ಶಿವರಾಯ ಗದಗಟ್ಟಿ ನಡುಗ್ಯಾನವ್ವಾ  ಕೋಲು ಕೋಲನ್ನ ಕೋಲೆ ||ಮು||
ಶಿವರಾಯ ಗದಹಟ್ಟಿ ನಡುಗ್ಯಾನವ್ವಾ ಸ್ ಕೋಲು ಕೋಲನ್ನ ಕೋಲೆ ||ಹಿ||

ಕೊಡುತೀನಿ ಬಾರೋ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಕೊಡುತೀನಿ ಬಾರೋ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಕೊರಳಲ್ಲಿನ ಹಾವ ಕೊಟ್ಟನವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊರಳಲ್ಲಿನ ಹಾವ ಕೊಟ್ಟನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಾವಿಗೆ ಹಾಲು ಕುಡಿಸ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಹಾವಿಗೆ ಹಾಲು ಕುಡಿಸ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಭೀಮ ಹೇಳಿದಂಗೆ ಕೇಳಬೇಕೆ ಕೋಲು ಕೋಲನ್ನ ಕೋಲೆ ||ಮು||
ಭೀಮ ಹೇಳಿದಂಗೆ ಕೇಳಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಭೀಮ ಹೇಳಿದಂಗೆ ಕೇಳಬೇಕೆ ಕೋಲು ಕೋಲನ್ನ ಕೋಲೆ ||ಮು||
ಭೀಮ ಹೇಳಿದಂಗೆ ಕೇಳಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಎಬ್ಬೊಟ್ಟು ಇಟ್ಟು ಹೇಳತಾನೆ ಕೋಲು ಕೋಲನ್ನ ಕೋಲೆ ||ಮು||
ಎಬ್ಬೊಟ್ಟು ಇಟ್ಟು ಹೇಳತಾನೆ ಕೋಲು ಕೋಲನ್ನ ಕೋಲೆ ||ಹಿ||

ಭೀಮನಿಗೆ ಹಾವು ಕೊಟ್ಟನವ್ವಾ ಕೋಲು ಕೋಲನ್ನ ಕೋಲೆ ||ಮು||
ಭೀಮನಿಗೆ ಹಾವು ಕೊಟ್ಟನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಾವಿಗೆ ಬುದ್ಧಿ ಹೇಳ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಹಾವಿಗೆ ಬುದ್ಧಿ ಹೇಳ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಭೀಮನ ಹೆಗಲಮ್ಯಾಲೆ ಹಾವುನೋಡೆ ಕೋಲು ಕೋಲನ್ನ ಕೋಲೆ ||ಮು||
ಭೀಮನ ಹೆಗಲಮ್ಯಾಲೆ ಹಾವುನೋಡೆ ಕೋಲು ಕೋಲನ್ನ ಕೋಲೆ ||ಹಿ||

ಆಕಾಶ ಬಿಟ್ಟು ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಆಕಾಶ ಬಿಟ್ಟು ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗರಡಿ ಮನಿಯಾಕ ಹೋಗ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಗರಡಿ ಮನಿಯಾಕ  ಹೋಗ್ಯಾನವ್ವಾಕೋಲು ಕೋಲನ್ನ ಕೋಲೆ ||ಹಿ||

ಹಾವಿಗೆ ಹಾಲು ಕುಡಿಸ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಹಾವಿಗೆ ಹಾಲು ಕುಡಿಸ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಾವಿಗೆ ಬುದ್ಧಿ ಹೇಳತಾನೆ ಕೋಲು ಕೋಲನ್ನ ಕೋಲೆ ||ಮು||
ಹಾವಿಗೆ ಬುದ್ಧಿ ಹೇಳತಾನೆ  ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಬೊಟ್ಟು ಕಚ್ಚ ಬ್ಯಾಡೋ  ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಬೊಟ್ಟು ಕಚ್ಚ ಬ್ಯಾಡೋ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿ ಬೊಟ್ಟು ಕಚ್ಚಬೇಕೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿ ಬೊಟ್ಟು ಕಚ್ಚಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಬಾದಾಳದಾಗೆ ಬಿಟ್ಟನವ್ವಾ ಕೋಲು ಕೋಲನ್ನ ಕೋಲೆ ||ಮು||
ಬಾದಾಳದಾಗೆ ಬಿಟ್ಟನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಬಾಗಿಲ ಪಕ್ಕದಲಿ ಕುಂತನವ್ವಾ ಕೋಲು ಕೋಲನ್ನ ಕೋಲೆ ||ಮು||
ಬಾಗಿಲ ಪಕ್ಕದಲಿ ಕುಂತನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮನಿಯ ಮಾರುಗಳ ಬಳಿದಾರವ್ವಾ  ಕೋಲು ಕೋಲನ್ನ ಕೋಲೆ ||ಮು||
ಮನಿಯ ಮಾರುಗಳ ಬಳಿದಾರವ್ವಾ  ಕೋಲು ಕೋಲನ್ನ ಕೋಲೆ ||ಹಿ||

ಬಜಾರಸಾಲು ಬಳಿಸ್ಯಾರವ್ವಾ  ಕೋಲು ಕೋಲನ್ನ ಕೋಲೆ ||ಮು||
ಬಜಾರಸಾಲು ಬಳಿಸ್ಯಾರವ್ವಾ  ಕೋಲು ಕೋಲನ್ನ ಕೋಲೆ||ಹಿ||

ಅಕ್ಕಿ ಬ್ಯಾಳಿಗಳ ಜೋಡಿಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಅಕ್ಕಿ ಬ್ಯಾಳಿಗಳ ಜೋಡಿಸ್ಯಾರವ್ವಾ  ಕೋಲು ಕೋಲನ್ನ ಕೋಲೆ ||ಹಿ||

ಬಟ್ಟೆ ಬರಿಗಳ ಕೊಂಡರವ್ವಾ ಕೋಲು ಕೋಲನ್ನ ಕೋಲೆ ||ಮು||
ಬಟ್ಟೆ ಬರಿಗಳ ಕೊಂಡರವ್ವಾ  ಕೋಲು ಕೋಲನ್ನ ಕೋಲೆ ||ಹಿ||

ಮನಿಯಾಗ ಹಿರಿಯರನಾ ಮಾಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಮನಿಯಾಗ ಹಿರಿಯರನಾ ಮಾಡ್ಯಾರವ್ವಾ  ಕೋಲು ಕೋಲನ್ನ ಕೋಲೆ ||ಹಿ||

ಹಂದರಾಲಗಂಬಾ ಹಾಕ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಹಂದರಾಲಗಂಬಾ ಹಾಕ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಬಣ್ಣದ ಐರ್ಯಾಣಿ ತುಂಬ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಬಣ್ಣದ ಐರ್ಯಾಣಿ ತುಂಬ್ಯಾರೆ  ಕೋಲು ಕೋಲನ್ನ ಕೋಲೆ ||ಹಿ||

ಅಂಗಳಕೆ ನೀರೆ ಇಡುದಾರೆ ಕೋಲು ಕೋಲನ್ನ ಕೋಲೆ ||ಮು||
ಅಂಗಳಕೆ ನೀರೆ ಇಡುದಾರೆ ಕೋಲು ಕೋಲನ್ನ ಕೋಲೆ ||ಹಿ||

ಸುರಿಗೀಯ ಅವರೆ ಸುತ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಸುರಗೀಯ ಅವರೆ ಸುತ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಒನಕೆ ಮ್ಯಾಲೆ ರಾಕಿರೆಡ್ಡಿ ಕುಂತಾನೆ ಕೋಲು ಕೋಲನ್ನ ಕೋಲೆ ||ಮು||
ಒನಕೆ ಮ್ಯಾಲೆ ರಾಕಿರೆಡ್ಡಿ ಕುಂತಾನೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಒನಕಿ ಮ್ಯಾಲೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಒನಕಿ ಮ್ಯಾಲೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿಗೆನ್ನೆ ಹಾಕ್ಯಾರೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿಗೆನ್ನೆ ಹಾಕ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವಗೆನ್ನೆ ಹಾಕ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವಗೆನ್ನೆ ಹಾಕ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿಗೆ ಅರಿಶಿಣ ಹಚ್ಯಾರೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿಗೆ ಅರಿಶಿಣ ಹಚ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿಗೆ ನೀರು ಎರದಾರೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿಗೆ ನೀರು ಎರದಾರೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವಗೆ ನೀರು ಹಾಕ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವಗೆ ನೀರು ಹಾಕ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿ ಮದುಮಗ ಆಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿ ಮದುಮಗ ಆಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಮದಲಗಿತ್ತಿ ಆಗ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಮದಲಗಿತ್ತಿ ಆಗ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿಗೆ ಹೊಸಬಟ್ಟೆ ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿಗೆ ಹೊಸಬಟ್ಟೆ ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವಗೆ ಸೀರೆ ಕುಬಸ ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವಗೆ ಸೀರೆ ಕುಬಸ ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿಗೆ ಕಂಕಣ ಕಟ್ಯಾರೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿಗೆ ಕಂಕಣ ಕಟ್ಟಾರೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವಗೆ ಕಂಕಣ ಕಟ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವಗೆ ಕಂಕಣ ಕಟ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿಗೆ ಈಬುತ್ತಿ ಹಚ್ಯಾರೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿಗೆ ಈಬುತ್ತಿ ಹಚ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

# ೩. ಅವ್ವಣೆವ್ವ ಕಾವ್ಯ (೫)

ಅವ್ವಣೆವ್ವಗೆ ಈಬುತ್ತಿ ಹಚ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವಗೆ ಈಬುತ್ತಿ  ಹಚ್ಯಾರೆ  ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿಗೆ ಕುಂಕುಮ ಹಚ್ಯಾರೆ  ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿಗೆ ಕುಂಕುಮ ಹಚ್ಯಾರೆ  ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವಗೆ ಕುಂಕುಮ ಹಚ್ಯಾರೆ  ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವಗೆ ಕುಂಕುಮ ಹಚ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಹೂವಿನ ಸರ ಹಾಕ್ಯಾರೆ  ಕೋಲು ಕೋಲನ್ನ ಕೋಲೆ ||ಮು||
ಹೂವಿನ ಸರ ಹಾಕ್ಯಾರೆ  ಕೋಲು ಕೋಲನ್ನ ಕೋಲೆ ||ಹಿ||

ತಲೆಮ್ಯಾಲೆ ದಂಡೆ ಹಾಕ್ಯಾರೆ ಕೋಲು ಕೋಲನ್ನ ಕೋಲೆ ||ಮು||
ತಲೆಮ್ಯಾಲೆ ದಂಡೆ ಹಾಕ್ಯಾರೆ  ಕೋಲು ಕೋಲನ್ನ ಕೋಲೆ ||ಹಿ||

ಅಡಿಕೆಯಾ ಎಲೆಯ ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಮು||
ಅಡಿಕೆಯಾ ಎಲೆಯ ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವಗೆ ಓಕುಳಿನೀರು ಎತ್ತ್ಯಾರೆ  ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವಗೆ  ಓಕುಳಿನೀರು ಎತ್ತ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಸಾಸಿ ಅಕ್ಕಿ ಅವರೆ ಇಟ್ಟಾರೆ ಕೋಲು ಕೋಲನ್ನ ಕೋಲೆ ||ಮು||
ಸಾಸಿ ಅಕ್ಕಿ ಅವರೆ ಇಟ್ಟಾರೆ  ಕೋಲು ಕೋಲನ್ನ ಕೋಲೆ ||ಹಿ||

ಕಳಸ ಅವರಿಽ.....ನ್ನಾ ಬೆಳಗ್ಯಾರೆ  ಕೋಲು ಕೋಲನ್ನ ಕೋಲೆ ||ಮು||
ಕಳಸ ಅವರಿಽ.....ನ್ನಾ ಬೆಳೆಗ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಸುರಗಿಽ.....ಯಾದರೆ ಎತ್ತ್ಯಾರೆ  ಕೋಲು ಕೋಲನ್ನ ಕೋಲೆ ||ಮು||
ಸುರಗಿಽ.....ಯಾದರೆ ಎತ್ತ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಸುರಗಿಽ.....ಯಾದರೆ ಎತ್ತ್ಯಾರೆ  ಕೋಲು ಕೋಲನ್ನ ಕೋಲೆ ||ಮು||
ಸುರಗಿಽ..... ಯಾದರೆ ಎತ್ತ್ಯಾರೆ  ಕೋಲು ಕೋಲನ್ನ ಕೋಲೆ ||ಹಿ||

ಸೂರ್ಯದೇವಗಾ ಕೈಯ ಮುಗಿದಾರೆ ಕೋಲು ಕೋಲನ್ನ ಕೋಲೆ ||ಮು||
ಸೂರ್ಯದೇವಗಾ ಕೈಯ ಮುಗಿದಾರೆ ಕೋಲು ಕೋಲನ್ನ ಕೋಲೆ ||ಹಿ||

ದೇವರ ಮನಿಯಾಕೆ ಹೋಗುತಾರೆ ಕೋಲು ಕೋಲನ್ನ ಕೋಲೆ ||ಮು||
ದೇವರ ಮನಿಯಾಕೆ ಹೋಗುತಾರೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿ ಮುಂದೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿ ಮುಂದೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಹಿಂದೆ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಹಿಂದೆ ಹೋಗುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಬಲಗಾಲ ವಸ್ತಿಲ್ಯಾಕ ಇಟ್ಟಾನೆ ಕೋಲು ಕೋಲನ್ನ ಕೋಲೆ ||ಮು||
ಬರಗಾಲ ವಸ್ತಿಲ್ಯಾಕ ಇಟ್ಟಾನೆ ಕೋಲು ಕೋಲನ್ನ ಕೋಲೆ ||ಹಿ||

ಸರ್ಪ ರಾಕಿರೆಡ್ಡಿ ಬೊಟ್ಟು ಕಚೈತೆ ಕೋಲು ಕೋಲನ್ನ ಕೋಲೆ ||ಮು||
ಸರ್ಪ ರಾಕಿರೆಡ್ಡಿ ಬೊಟ್ಟು ಕಚೈತೆ ಕೋಲು ಕೋಲನ್ನ ಕೋಲೆ ||ಹಿ||

ಸರ್ಪ ಬಾದಾಳದಾಗೆ ಹೋಗ್ಯೆತೆ ಕೋಲು ಕೋಲನ್ನ ಕೋಲೆ ||ಮು||
ಸರ್ಪ ಬಾದಾಳದಾಗೆ ಹೋಗ್ಯೆತೆ  ಕೋಲು ಕೋಲನ್ನ ಕೋಲೆ ||ಹಿ||

ಸರ್ಪ ಭೀಮನ ಮುಂದೆ ಹೇಳುತ್ಯೆತೆ ಕೋಲು ಕೋಲನ್ನ ಕೋಲೆ ||ಮು||
ಸರ್ಪ ಭೀಮನ ಮುಂದೆ ಹೇಳುತ್ಯೆತೆ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿ ಬೊಟ್ಟು ಕಚ್ಚೇನಿ  ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿ ಬೊಟ್ಟು ಕಚ್ಚೇನಿ  ಕೋಲು ಕೋಲನ್ನ ಕೋಲೆ ||ಹಿ||

ಅಪ್ಪಣೆ ಕೊಡು ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಅಪ್ಪಣೆ ಕೊಡು ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಕೈಲಾಸಕಾ ಹಾವ ಹೋಗ್ಯೆತೆ ಕೋಲು ಕೋಲನ್ನ ಕೋಲೆ ||ಮು||
ಕೈಲಾಸಕಾ ಹಾವ ಹೋಗ್ಯೆತೆ ಕೋಲು ಕೋಲನ್ನ ಕೋಲೆ ||ಹಿ||

ಶಿವರಾಯನ ಕೊರಳಿಗೆ ಸುತ್ಯೆತೆ ಕೋಲು ಕೋಲನ್ನ ಕೋಲೆ ||ಮು||
ಶಿವರಾಯನ ಕೊರಳಿಗೆ ಸುತ್ಯೆತೆ  ಕೋಲು ಕೋಲನ್ನ ಕೋಲೆ ||ಹಿ||

ರಾಮರಾಮನೆಂದು ಬಿದ್ದಾನೆ ಕೋಲು ಕೋಲನ್ನ ಕೋಲೆ ||ಮು||
ರಾಮರಾಮನೆಂದು ಬಿದ್ದಾನೆ  ಕೋಲು ಕೋಲನ್ನ ಕೋಲೆ ||ಹಿ||

ಜಲ್ಮ ಬಿಟ್ಟಾನೆ ರಾಕಿರೆಡ್ಡಿ ಕೋಲು ಕೋಲನ್ನ ಕೋಲೆ ||ಮು||
ಜಲ್ಮ ಬಿಟ್ಟಾನೆ ರಾಕಿರೆಡ್ಡಿ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಬೋರ್ಯಾಡಿ ಅಳುತಾಳೆ  ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಬೋರ್ಯಾಡಿ ಅಳುತಾಳೆ  ಕೋಲು ಕೋಲನ್ನ ಕೋಲೆ ||ಹಿ||

ಅನ್ನ ತಿಂಅಬಲಿಲ್ಲ ಕಾಯಿ ಜೀಕಲಿಲ್ಲ ಕೋಲು ಕೋಲನ್ನ ಕೋಲೆ ||ಮು||
ಅನ್ನ ತಿಂಬಲಿಲ್ಲ ಕಾಯ ಜೀಕಲಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ನನ್ನ ಋಣ ನಿನಗೆ ಅರಿಯಲಿಲ್ಲ ಕೋಲು ಕೋಲನ್ನ ಕೋಲೆ ||ಮು||
ನನ್ನ ಋಣ ನಿನಗೆ ಅರಿಯಲಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಬೋರ್ಯಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಬೋರ್ಯಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಸಿದಿಗಿಯಾ ಅವರಿನ್ನಾ ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಸಿದಿಗಿಯಾ ಅವರಿನ್ನಾ ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿನಾ ಅದರ ಮ್ಯಾಲೆ ಇಟ್ಟರವ್ವಾ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿನಾ ಅದರ ಮ್ಯಾಲೆ ಇಟ್ಟರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹೂವಿನ ಸರ ಹಾಕ್ಯರವ್ವಾ ಕೋಲು ಕೋಲನ್ನ ಕೋಲೆ ||ಮು||
ಹೂವಿನ ಸರ ಹಾಕ್ಯರವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಾಲಾರ ಅವರು ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಮು||
ನಾಲಾರ ಅವರು ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಬೋರ್ಯಾಡಿ ಅಳುತಾಳೆ  ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಬೋರ್ಯಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ನಡುಗಡ ಅವರಿನ್ನ ಮಾಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ನಡುಗಡ ಅವರಿನ್ನ ಮಾಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ತಲೆಮ್ಯಾಗಳ ದಂಡೆ ವಗದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ತಲೆಮ್ಯಾಗಳ ದಂಡೆ ವಗದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೈಯಾಗಳ ಕಂಕಣ ಹರಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಕೈಯಾಗಳ ಕಂಕಣ ಹರಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉಡಿಯಾಗಳ ಉಡಿಯಕ್ಕಿ ಸಲ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಉಡಿಯಾಗಳ ಉಡಿಯಕ್ಕಿ ಸಲ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮೂಗಿನ್ಯಾಗಳ ಮೂಗುತಿ ತಗದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಮೂಗಿನ್ಯಾಗಳ ಮೂಗುತಿ ತಗದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಬಣ್ಣದ ಐರಾಣಿ ಒಡದಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಬಣ್ಣದ ಐರಾಣಿ ಒಡದಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಬೋರ್ಯಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಬೋರ್ಯಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಸಿರಿಗಂಧದ ಚಕ್ಕೆ ತಂದರವ್ವಾ ಕೋಲು ಕೋಲನ್ನ ಕೋಲೆ ||ಮು||
ಸಿರಿಗಂಧದ ಚಕ್ಕೆ ತಂದರವ್ವಾ ಕೋಲು ಕೋಲನ್ನ ಕೋಲೆ ||ಹಿ||

ರಾಕಿರೆಡ್ಡಿನ ಅದರಾಗ ಇಟ್ಟರವ್ವಾ ಕೋಲು ಕೋಲನ್ನ ಕೋಲೆ ||ಮು||
ರಾಕಿರೆಡ್ಡಿನ ಅದರಾಗ ಇಟ್ಟರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಡಬ್ಬಿ ಚಿಮಣಿ ಎಣ್ಣೆ ಸುರಿವ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಡಬ್ಬಿ ಚಿಮಣಿ ಎಣ್ಣೆ ಸುರಿವ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕಿಚ್ಚು ಮಾಡ್ಯಾರೆ ರಾಕಿರೆಡ್ಡಿ ಕೋಲು ಕೋಲನ್ನ ಕೋಲೆ ||ಮು||
ಕಿಚ್ಚು ಮಾಡ್ಯಾರೆ ರಾಕಿರೆಡ್ಡಿ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಬೋರ್ಯಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಬೋರ್ಯಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಲ್ಲಮ್ಮ ಏನೊಂದ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಮಲ್ಲಮ್ಮ ಏನೊಂದ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಸಾದಿರಿಕಿ ಬಾಳ್ಯವೆ ಆಗೋದಿಲ್ಲ ಕೋಲು ಕೋಲನ್ನ ಕೋಲೆ ||ಮು||
ಸಾದಿರಿಕಿ ಬಾಳ್ಯವೆ ಆಗೋದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮಿಗಿ ನಾನೆ ಕೊಡದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿಮ್ಮಿಗಿ ನಾನೆ ಕೊಡದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ನನ್ನ ಮಗಳೇನೆ ರಂಡೆ ಆಗ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ನನ್ನ ಮಗಳೇನೆ ರಂಡೆ ಆಗ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕಿಚ್ಚುಮಾಡಿ ಮನಿಗೆ ಬಂದರವ್ವಾ ಕೋಲು ಕೋಲನ್ನ ಕೋಲೆ ||ಮು||
ಕಿಚ್ಚುಮಾಡಿ ಮನಿಗೆ ಬಂದರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವಗೆ ಏನೊಂದೆ ನುಡಿದಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವಗೆ ಏನೊಂದೆ ನುಡಿದಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಏಳುಮಂದಿ ಅಣ್ಣಾರೆ ಏನೇ ನುಡಿದೆ ಕೋಲು ಕೋಲನ್ನ ಕೋಲೆ ||ಮು||
ಏಳುಮಂದಿ ಅಣ್ಣಾರೆ ಏನೇ ನುಡಿದೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮ ತಂಗಿನಾದರೆ ತೂಗಬೇಕೆ ಕೋಲು ಕೋಲನ್ನ ಕೋಲೆ ||ಮು||
ನಮ್ಮ ತಂಗಿನಾದರೆ ತೂಗಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಎಲೆ ಅಡಿಕೆ ಹೂವ ತರಿಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಎಲೆ ಅಡಿಕೆ ಹೂವ ತರಿಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮಂಚದ ಮ್ಯಾಲೆ ಹಾಕ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಮಂಚದ ಮ್ಯಾಲೆ ಹಾಕ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವಗಾದರೆ ತೂಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವಗಾದರೆ ತೂಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಯಾಕ ಬಂದಾರೆ ಅಣ್ಣನವ್ರಾ ಕೋಲು ಕೋಲನ್ನ ಕೋಲೆ ||ಮು||
ಯಾಕ ಬಂದಾರೆ ಅಣ್ಣನವ್ರಾ ಕೋಲು ಕೋಲನ್ನ ಕೋಲೆ ||ಹಿ||

ಹೆಂಡರಿಗೆನಂತ ನುಡಿದಾರೆ ಕೋಲು ಕೋಲನ್ನ ಕೋಲೆ ||ಮು||
ಹೆಂಡರಿಗೆನಂತ ನುಡಿದಾರೆ ಕೋಲು ಕೋಲನ್ನ ಕೋಲೆ ||ಹಿ||

ದಿನವು ತಂಗೀನಾ ತೂಗಬೇಕೆ ಕೋಲು ಕೋಲನ್ನ ಕೋಲೆ ||ಮು||
ದಿನವು ತಂಗೀನಾ ತೂಗಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಒಂದು ದಿನ ತೂಗ್ಯಾರೆ ಎರಡು ದಿನ ತೂಗ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಒಂದು ದಿನ ತೂಗ್ಯಾರೆ ಎರಡು ದಿನ ತೂಗ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಮೂರು ದಿನದಾಗ ಏನು ನುಡಿದೆ ಕೋಲು ಕೋಲನ್ನ ಕೋಲೆ ||ಮು||
ಮೂರು ದಿನದಾಗ ಏನು ನುಡಿದೆ ಕೋಲು ಕೋಲನ್ನ ಕೋಲೆ ||ಹಿ||

ಮೂರು ದಿನದಾಗ ಏನು ನುಡಿದೆ ಕೋಲು ಕೋಲನ್ನ ಕೋಲೆ ||ಮು||
ಮೂರು ದಿನದಾಗ ಏನು ನುಡಿದೆ ಕೋಲು ಕೋಲನ್ನ ಕೋಲೆ ||ಹಿ||

ಬಟ್ಟನೆ ಮಾರಿಗೆ ಽ..... ನೆಟ್ಟನೆ ಮೂಗಿಗೆ ಽ.....
ರಂಡಿತನ ಅವ್ವಣೆವ್ವಗೆ ತರವಲ್ಲ ಕೋಲು ಕೋಲನ್ನ ಕೋಲೆ ||ಮು||
ರಂಡಿತನ ಅವ್ವಣೆವ್ವಗೆ ತರವಲ್ಲ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ್ನ…. ಕಿವ್ಯಾಕೆ ಬಿದ್ದಾವೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ್ನ…. ಕಿವ್ಯಾಕೆ ಬಿದ್ದಾವೆ ಕೋಲು ಕೋಲನ್ನ ಕೋಲೆ ||ಹಿ||

ಮಂಚ ಇಳಿದಾಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಮು||
ಮಂಚ ಇಳಿದಾಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಹಿ||

ಮಂಚ ಇಳಿದಾಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಮು||
ಮಂಚ ಇಳಿದಾಳೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಹಿ||

ಸಣ್ಣನೆ ಕಣಕಕ್ಕೆ ತಣ್ಣೀರ ಹದಮಾಡಿ
ಸಣ್ಣ ಯಾಲಕ್ಕಿ ಪುಡಿ ಮಾಡಿ ಸಾಗಿನವಲೆ ಸೊ ||

ಎಣ್ಣೆ ಹೋಳಿಗೆ ಬೇಗ ಅತಿಮಾಡಿ ಸಾಗಿನವಲೆ ಸೊ ||

ಕಾದ ಹೆಸರಿನಾಕೆ ಅಕ್ಕಿಯ ಸುರಿವ್ಯಾಳೆ ಸಕ್ಕರೆ ತುಪ್ಪ ತಾ ಹಾಕ್ಯಾಳೆ ಸಾಗಿನವಲೆ ಸೊ||

ತಂಗೆವ್ವಾ ಮಾಡಿ ತಾ ಇಳಿವ್ಯಾಳೆ ಸಾಗಿನವಲೆ ಸೊ ||

ಸುಡ ಎಸರಿನಾಕೆ ಶಾವಿಗೆ ಸುರಿವ್ಯಾಳೆ
ನೀಲ ಸಕ್ಕರೆ ತಾ ಇಳುವ್ಯಾಳೆ ಸಾಗಿನವಲೆ ಸೊ ||

ತಾಯವ್ವಾ ಮಾಡಿ ತಾ ಇಳುವ್ಯಾಳೆ ಸಾಗಿನವಲೆ ಸೊ ||

ದಾರ್ಯಾಗ ಇರುವಳೆ ದಾರ್ಯಾಗ
ತಾಯವ್ವ ಕಾಸಿ ತಾ ಇಳಿವ್ಯಾಳೆ ಸಾಗಿನವಲೆ ಸೊ ||

ಕುಂಬಳ ಕಾಯಿ ತುಂಬ ಸೋಸಿದಂಗ
ಇಂಗಿ ಎಣ್ಣೆ ತಾ ಇಟ್ಟು ಇಳಿಸ್ಯಾಳೆ ಸಾಗಿನವಲೆ ಸೊ ||

ತಂಗೆವ್ವಾ ಮಾಡಿತಾ ಇಳಿವ್ಯಾಳೆ ಸಾಗಿನವಲೆ ಸೊ ||

ಆಗಲಕಾಯಿ ಬೇಗಿನ ಬದನೆಕಾಯಿ
ತಾಯವ್ವಾ ಮಾಡಿ ತಾ ಇಳಿವ್ಯಾಳೆ ಸಾಗಿನವಲೆ ಸೊ ||

ಕಂಚಿಕಾರ ಎಮ್ಮೆ ಮಿಂಚಿಕಾರ ಎಮ್ಮೆ
ಎಮ್ಮೆ ಹಾಲು ಕರೆದು ತಾ ಕಾಸಿ ಇಳಿವ್ಯಾಳೆ ಸಾಗಿನವಲೆ ಸೊ ||

ತಂಗೆವ್ವಾ ಕಾಸಿ ತಾ ಇಳಿವ್ಯಾಳೆ ಸಾಗಿನವಲೆ ಸೊ ||

ತಂಗೆವ್ವಾ ಕಾಸಿ ತಾ ಇಳಿವ್ಯಾಳೆ ಸಾಗಿನವಲೆ ಸೊ ||

ತಾಯಿ ಮಂಚಕಾ ತಾ ಇಳಿವ್ಯಾಳೆ ಸಾಗಿನವಲೆ ಸೊ ||

ತಾಯಿ ಹೋಗಿ ತಾ ಎಬ್ಬಿಸ್ಯಾಳೆ ಸಾಗಿನವಲೆ ಸೊ ||

ಯಾರೆನಂದಾರೆ ಮಗಳೆ ಯಾರೆ ನಾಡ್ಯಾರೆ ಮಗಳೆ
ಹತ್ತಿದಾ ಮಂಚ ನೀ ನಿಳಿದವ್ವಾ ಸಾಗಿನವಲೆ ಸೊ ||

ಯಾರೇನೆ ಅಂದಿಲ್ಲ ಯಾರೇನೆ ಆಡಿಲ್ಲ
ಹತ್ತಿದಾ ಮಂಚ ನಾ ಇಳಿದೀನಿ ಸಾಗಿನವಲೆ ಸೊ ||

ತಂದೆ ಮಂಚಕಾ ತಾ ಹೋಗ್ಯಾಳೆ ಸಾಗಿನವಲೆ ಸೊ ||

ತಂದಿನಾ ಹೋಗಿ ಎಬ್ಬಿಸ್ಯಾಳೆ ಸಾಗಿನವಲೆ ಸೊ ||

ಯಾರೆನಂದಾರೆ ಮಗಳೆ ಯಾರೆ ನಾಡ್ಯಾರೆ ಮಗಳೆ
ನೀನೆಚ್ಚಿದಾ ಮಂಚ ನೀ ನಿಳಿದವ್ವಾ ಸಾಗಿನವಲೆ ಸೊ ||

ಯಾರೇನೆ ಅಂದಿಲ್ಲ ಯಾರೇನೆ ಆಡಿಲ್ಲ
ನಾ ಹತ್ತಿದಾ ಮಂಚ ನಾ ಇಳಿದೀನಿ ಸಾಗಿನವಲೆ ಸೊ ||

ತಾಯಿ ಮಕ್ಕಳಾ ತಾ ಒಳಗುಟ್ಟು ಸಾಗಿನವಲೆ ಸೊ ||

ತಾಯಿ ಮಕ್ಕಳಾ ತಾ ಒಳಗುಟ್ಟು ಸಾಗಿನವಲೆ ಸೊ ||

ಕಟ್ಟಿದ ಕರುವಾ ತಾ ಬಿಟ್ವಾಳೆ ಸಾಗಿನವಲೆ ಸೊ ||

ಕಟ್ಟಿದ ಕರುವಾ ತಾ ಬಿಟ್ವಾಳೆ ಸಾಗಿನವಲೆ ಸೊ ||

ಕರ ಹೋಗಿತೆಂದು ತಾ ಹೋಗುತಾಳೆ ಸಾಗಿನವಲೆ ಸೊ ||

ಕರ ಹೋಗಿತೆಂದು ತಾ ಹೋಗುತಾಳೆ ಸಾಗಿನವಲೆ ಸೊ ||

ಪಂಚೇನ ಪಾಂಡವರ ಬಾಳೆವನವಾ ಕೋಲು ಕೋಲನ್ನ ಕೋಲೆ ||ಮು||
ಪಂಚೇನ ಪಾಂಡವರ ಬಾಳೆವನವಾ ಕೋಲು ಕೋಲನ್ನ ಕೋಲೆ ||ಹಿ||

ಧರ್ಮರಾಯರ ಪಗಡೆ ನೋಡೆ ಕೋಲು ಕೋಲನ್ನ ಕೋಲೆ ||ಮು||
ಧರ್ಮರಾಯರ ಪಗಡೆ ನೋಡೆ ಕೋಲು ಕೋಲನ್ನ ಕೋಲೆ ||ಹಿ||

ಗಜಭೀಮ ನೋಡೆ ನೋಡುತಾನೆ ಕೋಲು ಕೋಲನ್ನ ಕೋಲೆ ||ಮು||
ಗಜಭೀಮ ನೋಡೆ ನೋಡುತಾನೆ ಕೋಲು ಕೋಲನ್ನ ಕೋಲೆ ||ಹಿ||

ಗಜಭೀಮ ನೋಡೆ ನೋಡುತಾನೆ ಕೋಲು ಕೋಲನ್ನ ಕೋಲೆ ||ಮು||
ಗಜಭೀಮ ನೋಡೆ ನೋಡುತಾನೆ ಕೋಲು ಕೋಲನ್ನ ಕೋಲೆ ||ಹಿ||

ಹೊಟ್ಟೆ ಹಸಿದಾವೋ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಹೊಟ್ಟೆ ಹಸಿದಾವೋ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಹೊಟ್ಟೆ ಹಸಿದಾವೋ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಹೊಟ್ಟೆ ಹಸಿದಾವೋ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಅಪ್ಪಣೆ ಕೊಡು ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಅಪ್ಪಣೆ ಕೊಡು ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಅಪ್ಪಣೆ ಕೊಡು ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಅಪ್ಪಣೆ ಕೊಡು ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಮುಸಿನಗು ಧರ್ಮಣ್ಣ ನಗುತಾನೆ ಕೋಲು ಕೋಲನ್ನ ಕೋಲೆ ||ಮು||
ಮುಸಿನಗು ಧರ್ಮಣ್ಣ ನಗುತಾನೆ ಕೋಲು ಕೋಲನ್ನ ಕೋಲೆ ||ಹಿ||

ಇದೊಂದೆ ಆಟ ಆಡೆ ಭೀಮ ಕೋಲು ಕೋಲನ್ನ ಕೋಲೆ ||ಮು||
ಇದೊಂದೆ ಆಟ ಆಡೆ ಭೀಮ ಕೋಲು ಕೋಲನ್ನ ಕೋಲೆ ||ಹಿ||

ಇದೊಂದೆ ಆಟ ಆಡೆ ಭೀಮ ಕೋಲು ಕೋಲನ್ನ ಕೋಲೆ ||ಮು||
ಇದೊಂದೆ ಆಟ ಆಡೆ ಭೀಮ ಕೋಲು ಕೋಲನ್ನ ಕೋಲೆ ||ಹಿ||

ಸಿಟ್ಟುಮಾಡಿ ಕವಡಿ ಒಗೆದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಸಿಟ್ಟುಮಾಡಿ ಕವಡಿ ಒಗೆದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಿಟ್ಟುಮಾಡಿ ಕವಡಿ ಒಗೆದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಸಿಟ್ಟುಮಾಡಿ ಕವಡಿ ಒಗೆದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಜಾಡಿಸಿ ಕವಡಿ ಒಗೆದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಜಾಡಿಸಿ ಕವಡಿ ಒಗೆದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ದಾರಿ ನೋಡುತಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ದಾರಿ ನೋಡುತಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಒಬ್ಬಾಳೆ ಹೋಗುತಾಳೆ ಅಟ್ಟಂಬ ಅಡವಿಗೆ ಕೋಲು ಕೋಲನ್ನ ಕೋಲೆ ||ಮು||
ಒಬ್ಬಾಳೆ ಹೋಗುತಾಳೆ ಅಟ್ಟಂಬ ಅಡವಿಗೆ ಕೋಲು ಕೋಲನ್ನ ಕೋಲೆ ||ಹಿ||

ಹೊಟ್ಟೆ ಹಸಿತಾವೊ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಹೊಟ್ಟೆ ಹಸಿತಾವೊ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಅಪ್ಪಣೆ ಕೊಡು ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಅಪ್ಪಣೆ ಕೊಡು ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಅಪ್ಪಣೆ ಕೊಟ್ಟಾನೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಅಪ್ಪಣೆ ಕೊಟ್ಟಾನೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆಮ್ಮನತಾಕ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮನತಾಕ ಬಂದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕಿವಿ ಕೇಳಿಸದಾಕೆ ಕೊಂತೆಮ್ಮ ಕೋಲು ಕೋಲನ್ನ ಕೋಲೆ ||ಮು||
ಕಿವಿ ಕೇಳಿಸದಾಕೆ ಕೊಂತೆಮ್ಮ ಕೋಲು ಕೋಲನ್ನ ಕೋಲೆ ||ಹಿ||

ಹೊಟ್ಟೆ ಬಡಕಂಡ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಹೊಟ್ಟೆ ಬಡಕಂಡ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಕೊಪ್ಪರಿಕೀ ಅನ್ನ ಇಡೋ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಕೊಪ್ಪರಿಕೀ ಅನ್ನ ಇಡೋ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಕೊಪ್ಪರಿಕಿ ಇಟ್ಟಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಕೊಪ್ಪರಿಕಿ ಇಟ್ಟಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಕೊಪ್ಪರಿಕಿ ಇಟ್ಟಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಕೊಪ್ಪರಿಕಿ ಇಟ್ಟಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಖಂಡಗದ ಅಕ್ಕಿ ಸುರುವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಖಂಡಗದ ಅಕ್ಕಿ ಸುರುವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಖಂಡಗದ ಅಕ್ಕಿ ಭೀಮ ತಿರುವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಖಂಡಗದ ಅಕ್ಕಿ ಭೀಮ ತಿರುವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೊಪ್ಪರಿಕಿ ಇಳಿಸು ಬಾ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಕೊಪ್ಪರಿಕಿ ಇಳಿಸು ಬಾ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

# ೩. ಅವ್ವಣೆವ್ವ ಕಾವ್ಯ (೬)

ಕೊಲ್ಲೇನೆ ಡೋಣಿಗೆ ಸುರುವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊಲ್ಲೇನೆ ಡೋಣಿಗೆ ಸುರುವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಾಲು ತುಪ್ಪ ನೀಡೆ ಹಡದವ್ವಾ ಕೋಲು ಕೋಲನ್ನ ಕೋಲೆ ||ಮು||
ಹಾಲು ತುಪ್ಪ ನೀಡೆ ಹಡದವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸತ್ತ್ಯುಳ್ಳ ಧರ್ಮರನ ನೆನೆಯೆ ಮಗನೆ ಕೋಲು ಕೋಲನ್ನ ಕೋಲೆ ||ಮು||
ಸತ್ತ್ಯುಳ್ಳ ಧರ್ಮರನ ನೆನೆಯೆ ಮಗನೆ ಕೋಲು ಕೋಲನ್ನ ಕೋಲೆ ||ಹಿ||

ಹಾಲಿನ ಕಾಲೇವು ತಿರುಗಬಾರದೆ ಕೋಲು ಕೋಲನ್ನ ಕೋಲೆ ||ಮು||
ಹಾಲಿನ ಕಾಲೇವು ತಿರುಗಬಾರದೆ ಕೋಲು ಕೋಲನ್ನ ಕೋಲೆ ||ಹಿ||

ಹಾಲಿನ ಕಾಲೇವು ತಿರುಗಬಾರದೆ ಕೋಲು ಕೋಲನ್ನ ಕೋಲೆ ||ಮು||
ಹಾಲಿನ ಕಾಲೇವು ತಿರುಗಬಾರದೆ ಕೋಲು ಕೋಲನ್ನ ಕೋಲೆ ||ಹಿ||

ಗ್ಯಾನದ ಧರ್ಮರ ಗ್ಯಾನದಾರದರೆ
ತುಪ್ಪದ ಕಾಲೇವು ತಿರುಗಬಾರದೆ ಕೋಲು ಕೋಲನ್ನ ಕೋಲೆ ||ಮು||
ತುಪ್ಪದ ಕಾಲೇವು ತಿರುಗಬಾರದೆ ಕೋಲು ಕೋಲನ್ನ ಕೋಲೆ ||ಹಿ||

ಬಾಯಿಯಾಗಳ ಮಾತು ಬಾಯಾಗ ಇರಲಿಕ್ಕೆ
ತುಪ್ಪದ ಕಾಲೇವು ತಿರುಗ್ಯಾವವ್ವಾ ಕೋಲು ಕೋಲನ್ನ ಕೋಲೆ ||ಮು||
ತುಪ್ಪದ ಕಾಲೇವು ತಿರುಗ್ಯಾವವ್ವಾ ಕೋಲು ಕೋಲನ್ನ ಕೋಲೆ ||ಹಿ||

ತುಪ್ಪದ ಕಾಲೇವು ತಿರುಗ್ಯಾವವ್ವಾ ಕೋಲು ಕೋಲನ್ನ ಕೋಲೆ ||ಮು||
ತುಪ್ಪದ ಕಾಲೇವು ತಿರುಗ್ಯಾವವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸವರೇನೆ ಮೂರು ತುತ್ತಿಗೆ ಉಂಡಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಸವರೇನೆ ಮೂರು ತುತ್ತಿಗೆ ಉಂಡಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಇರುಮಂಡಿ ಭೀಮಣ್ಣ ಹಚ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಇರುಮಂಡಿ ಭೀಮಣ್ಣ ಹಚ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೊಪ್ಪರಿಕಿ ನೀರು ಕುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊಪ್ಪರಿಕಿ ನೀರು ಕುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮೂಗೀಲಿ ಉಸುರು ಬಿಟ್ಟನವ್ವಾ ಕೋಲು ಕೋಲನ್ನ ಕೋಲೆ ||ಮು||
ಮೂಗೀಲಿ ಉಸುರು ಬಿಟ್ಟನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಡಿಕೆ ಎಲೆ ಕೊಡೆs….. ಹಡದವ್ವಾ ಕೋಲು ಕೋಲನ್ನ ಕೋಲೆ ||ಮು||
ಅಡಿಕೆ ಎಲೆ ಕೊಡೆs….. ಹಡದವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಡಿಕೆ ಕೊಟ್ವಾಳೆs….. ಹಡದವ್ವಾ ಕೋಲು ಕೋಲನ್ನ ಕೋಲೆ ||ಮು||
ಅಡಿಕೆ ಕೊಟ್ವಾಳೆs….. ಹಡದವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮುಡುಗಿ ಎಲೆ ಜಮಡ್ಯಾನವ್ವಾ ಭೀಮಣ್ಣ ಕೋಲು ಕೋಲನ್ನ ಕೋಲೆ ||ಮು||
ಮುಡುಗಿ ಎಲೆ ಜಮಡ್ಯಾನವ್ವಾ ಭೀಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಚೀಲ ತಂಬಾಕs….. ಜಮಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಚೀಲ ತಂಬಾಕs….. ಜಮಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಚಲಕೀಲಿ ಸುಣ್ಣ ಏಳದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಚಲಕೀಲಿ ಸುಣ್ಣ ಏಳದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕಚಿ ಪಿಸಿ ಭೀಮ ಜಮಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಕಚಿ ಪಿಸಿ ಭೀಮ ಜಮಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಪಿಸಿ ಪಿಸಿ ಭೀಮ ಉಗುಳ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಪಿಸಿ ಪಿಸಿ ಭೀಮ ಉಗುಳ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಭೀಮನ ಉಗುಳು ಕಾಲೇವಾಗಿ ಕೋಲು ಕೋಲನ್ನ ಕೋಲೆ ||ಮು||
ಭೀಮನ ಉಗುಳು ಕಾಲೇವಾಗಿ ಕೋಲು ಕೋಲನ್ನ ಕೋಲೆ ||ಹಿ||

ಸಣ್ಣ ಹಳ್ಳಾಗಿ ಹರದಾವೆ ಕೋಲು ಕೋಲನ್ನ ಕೋಲೆ ||ಮು||
ಸಣ್ಣ ಹಳ್ಳಾಗಿ ಹರದಾವೆ ಕೋಲು ಕೋಲನ್ನ ಕೋಲೆ ||ಹಿ||

ಏಳೂರು ಎಮ್ಮೆ ಗುಡ್ಡು ಸಿಕ್ಕಂದಾವೆ ಕೋಲು ಕೋಲನ್ನ ಕೋಲೆ ||ಮು||
ಏಳೂರು ಎಮ್ಮೆ ಗುಡ್ಡು ಸಿಕ್ಕಂದಾವೆ ಕೋಲು ಕೋಲನ್ನ ಕೋಲೆ ||ಹಿ||

ಏಳೂರು ಎಮ್ಮೆ ಗುಡ್ಡು ಸಿಕ್ಕಂದಾವೆ ಕೋಲು ಕೋಲನ್ನ ಕೋಲೆ ||ಮು||
ಏಳೂರು ಎಮ್ಮೆ ಗುಡ್ಡು ಸಿಕ್ಕಂದಾವೆ ಕೋಲು ಕೋಲನ್ನ ಕೋಲೆ ||ಹಿ||

ಹಲ್ಲಾಕ ಕಡ್ಡಿ ಕೊಡೆ ಹಡದವ್ವಾ ಕೋಲು ಕೋಲನ್ನ ಕೋಲೆ ||ಮು||
ಹಲ್ಲಾಕ ಕಡ್ಡಿ ಕೊಡೆ ಹಡದವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮುಂಡೋಣಕಿ ಕೊಟ್ಟಾಳೆ ಕೊಂತೆಮ್ಮ ಕೋಲು ಕೋಲನ್ನ ಕೋಲೆ ||ಮು||
ಮುಂಡೋಣಕಿ ಕೊಟ್ಟಾಳೆ ಕೊಂತೆಮ್ಮ ಕೋಲು ಕೋಲನ್ನ ಕೋಲೆ ||ಹಿ||

ಆ ಕಡೆ ಸ್ವಾಟ್ಯಾಕ ತಿವಿಕೊಂಡೆ ಈ ಕಡೆ ಸ್ವಾಟ್ಯಾಕ ತಿವಿಕೊಂಡೆ
ಹಲ್ಲಾಕ ಕಡ್ಡಿ ಭೀಮ ತಿವಿಕೊಂಡ ಕೋಲು ಕೋಲನ್ನ ಕೋಲೆ ||ಮು||
ಹಲ್ಲಾಕ ಕಡ್ಡಿ ಭೀಮ ತಿವಿಕೊಂಡ ಕೋಲು ಕೋಲನ್ನ ಕೋಲೆ ||ಹಿ||

ಹಲ್ಲಾಕ ಕಡ್ಡಿ ಭೀಮ ತಿವಿಕೊಂಡ ಕೋಲು ಕೋಲನ್ನ ಕೋಲೆ ||ಮು||
ಹಲ್ಲಾಕ ಕಡ್ಡಿ ಭೀಮ ತಿವಿಕೊಂಡ ಕೋಲು ಕೋಲನ್ನ ಕೋಲೆ ||ಹಿ||

ಪಿಸಿ ಪಿಸಿ ಭೀಮ ಉಗುಳ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಪಿಸಿ ಪಿಸಿ ಭೀಮ ಉಗುಳ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಭೀಮ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಭೀಮ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಬ್ಯಾಟಿಗಾದರೆ ನಾ ಹೋಗುತೀನಿ ಕೋಲು ಕೋಲನ್ನ ಕೋಲೆ ||ಮು||
ಬ್ಯಾಟಿಗಾದರೆ ನಾ ಹೋಗುತೀನಿ ಕೋಲು ಕೋಲನ್ನ ಕೋಲೆ ||ಹಿ||

ಅಣ್ಣನಾ ಮುಂದೆ ಹೇಳಬ್ಯಾಡ ಕೋಲು ಕೋಲನ್ನ ಕೋಲೆ ||ಮು||
ಅಣ್ಣನಾ ಮುಂದೆ ಹೇಳಬ್ಯಾಡ ಕೋಲು ಕೋಲನ್ನ ಕೋಲೆ ||ಹಿ||

ಕಿವಿ ಕೇಳಿಸದಾಕಿ ಕೊಂತೆವ್ವಾ ಕೋಲು ಕೋಲನ್ನ ಕೋಲೆ ||ಮು||
ಕಿವಿ ಕೇಳಿಸದಾಕಿ ಕೊಂತೆವ್ವಾ ಕೋಲು ಕೋಲನ್ನ ಕೋಲೆ ||ಹಿ||

ಪಂಚ ಪಾಂಡವರ ಬಾಳೆವನವಾ ಕೋಲು ಕೋಲನ್ನ ಕೋಲೆ ||ಮು||
ಪಂಚ ಪಾಂಡವರ ಬಾಳೆವನವಾ ಕೋಲು ಕೋಲನ್ನ ಕೋಲೆ ||ಹಿ||

ಕಂಡ ಹಣ್ಣು ತಿನುಕಂತ ಕವಲೇನೆ ಹೋಗಿಕಂತ
ಸೀಗರ ಫಳ್ಯಾಕ ಹೋಗ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಸೀಗರ ಫಳ್ಯಾಕ ಹೋಗ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಸೀಗರ ಫಳ್ಯಾಕ ಹೋಗ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಸೀಗರ ಫಳ್ಯಾಕ ಹೋಗ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಆರುಗಾವುದಾ ಮಾಡಿ ಕಣ್ಣು ಕೆಂಪಗೆ ಮಾಡಿ
ಕುಪ್ಪಳಿಸಿ ಭೀಮ ಎಗರ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕುಪ್ಪಳಿಸಿ ಭೀಮ ಎಗರ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಕುಪ್ಪಳಿಸಿ ಭೀಮ ಎಗರ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕುಪ್ಪಳಿಸಿ ಭೀಮ ಎಗರ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಸಿಳ್ಳು ಇಟ್ಟು ಹಾವನ ಕರದಾನೆ ಕೋಲು ಕೋಲನ್ನ ಕೋಲೆ ||ಮು||
ಸಿಳ್ಳು ಇಟ್ಟು ಹಾವನ ಕರದಾನೆ ಕೋಲು ಕೋಲನ್ನ ಕೋಲೆ ||ಹಿ||

ಹಾವಿಗೆ ಹಾಲು ಕುಡಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಹಾವಿಗೆ ಹಾಲು ಕುಡಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮನ್ಯಾಕೆ ಕರೆಸಿದೆ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಮು||
ನಮ್ಮನ್ಯಾಕೆ ಕರೆಸಿದೆ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಹಿ||

ಸೀಗರ ಘಳ್ಯಾಗ ನಿಮ್ಮ ತಾಯಿ ಕುಂತಾಳೆ ಕೋಲು ಕೋಲನ್ನ ಕೋಲೆ ||ಮು||
ಸೀಗರ ಘಳ್ಯಾಗ ನಿಮ್ಮ ತಾಯಿ ಕುಂತಾಳೆ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮ ತಾಯಿ ದುಃಖ ಕೇಳಿ ಬರ್ರೋ ಕೋಲು ಕೋಲನ್ನ ಕೋಲೆ ||ಮು||
ನಿಮ್ಮ ತಾಯಿ ದುಃಖ ಕೇಳಿ ಬರ್ರೋ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮ ತಾಯಿ ದುಃಖ ಕೇಳಿ ಬರ್ರೋ ಕೋಲು ಕೋಲನ್ನ ಕೋಲೆ ||ಮು||
ನಿಮ್ಮ ತಾಯಿ ದುಃಖ ಕೇಳಿ ಬರ್ರೋ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ಮೈಮೇಲೆ ಹಾಡ್ಯಾವೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ಮೈಮೇಲೆ ಹಾಡ್ಯಾವೆ ಕೋಲು ಕೋಲನ್ನ ಕೋಲೆ ||ಹಿ||

ಮುಚ್ಚಿದ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿದ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಹಿ||

ಕೈ ಮುಗಿದು ಹಿಂದಕ್ಕೆ ತಿರುಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕೈ ಮುಗಿದು ಹಿಂದಕ್ಕೆ ತಿರುಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮವ್ವ ಶರಣೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಮು||
ನಮ್ಮವ್ವ ಶರಣೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುಚ್ಚಿದಾ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿದಾ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಹಿ||

ಕೈ ಮುಗಿದು ಹಿಂದಕೆ ತಿರುಗೀನಿ ಕೋಲು ಕೋಲನ್ನ ಕೋಲೆ ||ಮು||
ಕೈ ಮುಗಿದು ಹಿಂದಕೆ ತಿರುಗೀನಿ ಕೋಲು ಕೋಲನ್ನ ಕೋಲೆ ||ಹಿ||

ಹುಲಿರಾಜನ ಆತ ಕರಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಹುಲಿರಾಜನ ಆತ ಕರಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಹುಲಿರಾಜನ ಆತ ಕರಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಹುಲಿರಾಜನ ಆತ ಕರಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಯಾಕ ಕರೆಸಿದೆ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಮು||
ಯಾಕ ಕರೆಸಿದೆ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಹಿ||

ಯಾಕ ಕರೆಸಿದೆ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಮು||
ಯಾಕ ಕರೆಸಿದೆ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಹಿ||

ಸೀಗರ ಫಳ್ಯಾಗ ನಿಮ್ಮ ತಾಯಿ ಕುಂತಾಳೆ ಕೋಲು ಕೋಲನ್ನ ಕೋಲೆ ||ಮು||
ಸೀಗರ ಫಳ್ಯಾಗ ನಿಮ್ಮ ತಾಯಿ ಕುಂತಾಳೆ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮ ತಾಯಿ ದುಃಖ ಕೇಳಿ ಬರ್‍ರೋ ಕೋಲು ಕೋಲನ್ನ ಕೋಲೆ ||ಮು||
ನಿಮ್ಮ ತಾಯಿ ದುಃಖ ಕೇಳಿ ಬರ್‍ರೋ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮ ತಾಯಿ ದುಃಖ ಕೇಳಿ ಬರ್‍ರೋ ಕೋಲು ಕೋಲನ್ನ ಕೋಲೆ ||ಮು||
ನಿಮ್ಮ ತಾಯಿ ದುಃಖ ಕೇಳಿ ಬರ್‍ರೋ ಕೋಲು ಕೋಲನ್ನ ಕೋಲೆ ||ಹಿ||

ಹುಲಿರಾಜ ಕೈ ಮುಗಿದು ಜಿಗಿದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಹುಲಿರಾಜ ಕೈ ಮುಗಿದು ಜಿಗಿದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮುಚ್ಚಿದಾ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿದಾ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಹಿ||

ಕೈ ಮುಗಿದು ಹಿಂದಕಾ ತಿರುಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕೈ ಮುಗಿದು ಹಿಂದಕಾ ತಿರುಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮವ್ವ ಶರಣೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಮು||
ನಮ್ಮವ್ವ ಶರಣೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುಚ್ಚಿದಾ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿದಾ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಹಿ||

ಹುಲಿರಾಜ ಗವಿಗೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಹುಲಿರಾಜ ಗವಿಗೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಕರಡಿರಾಜನ ಕರಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕರಡಿಗೆ ಹೆಂಡ ಕುಡಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ನನ್ನನ್ಯಾಕೆ ಕರೆಸಿದೋ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಮು||
ನನ್ನನ್ಯಾಕೆ ಕರೆಸಿದೋ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಹಿ||

ಸೀಗರ ಫಳ್ಯಾಗ ನಿಮ್ಮ ತಾಯಿ ಕುಂತಾಳೆ ಕೋಲು ಕೋಲನ್ನ ಕೋಲೆ ||ಮು||
ಸೀಗರ ಫಳ್ಯಾಗ ನಿಮ್ಮ ತಾಯಿ ಕುಂತಾಳೆ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮ ತಾಯಿ ದುಃಖ ಕೇಳಿ ಬರ್ರ್ರೋ ಕೋಲು ಕೋಲನ್ನ ಕೋಲೆ ||ಮು||
ನಿಮ್ಮ ತಾಯಿ ದುಃಖ ಕೇಳಿ ಬರ್ರ್ರೋ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮ ತಾಯಿ ದುಃಖ ಕೇಳಿ ಬರ್ರ್ರೋ ಕೋಲು ಕೋಲನ್ನ ಕೋಲೆ ||ಮು||
ನಿಮ್ಮ ತಾಯಿ ದುಃಖ ಕೇಳಿ ಬರ್ರ್ರೋ ಕೋಲು ಕೋಲನ್ನ ಕೋಲೆ ||ಹಿ||

ಗವಿಗೆ ಹೋಗ್ಯಾನೆ ಕರಡಿರಾಜ ಕೋಲು ಕೋಲನ್ನ ಕೋಲೆ ||ಮು||
ಗವಿಗೆ ಹೋಗ್ಯಾನೆ ಕರಡಿರಾಜ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ಮುಂದೆ ನಿಂತಾನೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ಮುಂದೆ ನಿಂತಾನೆ ಕೋಲು ಕೋಲನ್ನ ಕೋಲೆ ||ಹಿ||

ಗದ್ಲಾ ಮಾಡ್ಯಾನೆ ಕರಡಿರಾಜ ಕೋಲು ಕೋಲನ್ನ ಕೋಲೆ ||ಮು||
ಗದ್ಲಾ ಮಾಡ್ಯಾನೆ ಕರಡಿರಾಜ ಕೋಲು ಕೋಲನ್ನ ಕೋಲೆ ||ಹಿ||

ಮುಚ್ಚಿದಾ ಕಣ್ಣು ತಗಿವಲ್ಲಾ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿದಾ ಕಣ್ಣು ತಗಿವಲ್ಲಾ ಕೋಲು ಕೋಲನ್ನ ಕೋಲೆ ||ಹಿ||

ಕೈ ಮುಗಿದು ಹಿಂದಕೆ ತಿರುಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕೈ ಮುಗಿದು ಹಿಂದಕೆ ತಿರುಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮವ್ವ ಶರಣೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಮು||
ನಮ್ಮವ್ವ ಶರಣೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುಚ್ಚಿದಾ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿದಾ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಹಿ||

ಗುಡ್ಡಕ್ಕೆ ಕರಡಿ ಹೋಗ್ಯೈತೆ ಕೋಲು ಕೋಲನ್ನ ಕೋಲೆ ||ಮು||
ಗುಡ್ಡಕ್ಕೆ ಕರಡಿ ಹೋಗ್ಯೈತೆ ಕೋಲು ಕೋಲನ್ನ ಕೋಲೆ ||ಹಿ||

ಊರಾಳ ದೆವ್ವ ಕರಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಊರಾಳ ದೆವ್ವ ಕರಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ದೆವ್ವಗೆ ರೊಟ್ಟಿ ಎಸೆದಾನೆ ಕೋಲು ಕೋಲನ್ನ ಕೋಲೆ ||ಮು||
ದೆವ್ವಗೆ ರೊಟ್ಟಿ ಎಸೆದಾನೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮನ್ಯಾಕೆ ಕರೆಸಿದೋ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಮು||
ನಮ್ಮನ್ಯಾಕೆ ಕರೆಸಿದೋ ನಮ್ಮ ತಂದೆ ಕೋಲು ಕೋಲನ್ನ ಕೋಲೆ ||ಹಿ||

ಸೀಗರ ಫಳ್ಯಾಗ ನಿಮ್ಮ ತಾಯಿ ಕುಂತಾಳೆ ಕೋಲು ಕೋಲನ್ನ ಕೋಲೆ ||ಮು||
ಸೀಗರ ಫಳ್ಯಾಗ ನಿಮ್ಮ ತಾಯಿ ಕುಂತಾಳೆ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮವ್ವನ ದುಃಖ ಕೇಳಿ ಬರ್ರೋ ಕೋಲು ಕೋಲನ್ನ ಕೋಲೆ ||ಮು||
ನಿಮ್ಮವ್ವನ ದುಃಖ ಕೇಳಿ ಬರ್ರೋ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ಮುಂದೆ ಕುಣಿಯುತಾವೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ಮುಂದೆ ಕುಣಿಯುತಾವೆ ಕೋಲು ಕೋಲನ್ನ ಕೋಲೆ ||ಹಿ||

ಮುಚ್ಚಿದ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿದ ಕಣ್ಣು ತಗಿವಲ್ಲ ಕೋಲು ಕೋಲನ್ನ ಕೋಲೆ ||ಹಿ||

ಕೈ ಮುಗಿದು ಹಿಂದಕಾ ತಿರುಗ್ಯಾವೆ ಕೋಲು ಕೋಲನ್ನ ಕೋಲೆ ||ಮು||
ಕೈ ಮುಗಿದು ಹಿಂದಕಾ ತಿರುಗ್ಯಾವೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮವ್ವ ಶರಣೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಮು||
ನಮ್ಮವ್ವ ಶರಣೆ ಕುಂತಾಳೆ ಕೋಲು ಕೋಲನ್ನ ಕೋಲೆ ||ಹಿ||

ಕೈ ಮುಗಿದು ಹಿಂದಕ್ಕೆ ಬಂದೀವಿ ಕೋಲು ಕೋಲನ್ನ ಕೋಲೆ ||ಮು||
ಕೈ ಮುಗಿದು ಹಿಂದಕ್ಕೆ ಬಂದೀವಿ ಕೋಲು ಕೋಲನ್ನ ಕೋಲೆ ||ಹಿ||

ಅಲ್ಲಿಗೆ ಹೋಗ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಅಲ್ಲಿಗೆ ಹೋಗ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಯೋಚನೆ ಮಾಡ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಯೋಚನೆ ಮಾಡ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಸತ್ತ್ಯುಳ್ಳ ಧರ್ಮರ ಸತ್ತ್ಯುಳ್ಳರಾದರೆ
ಜಂಬ ನೀಲದಮರ ಬೆಳೆಯಬಾರದೆ ಕೋಲು ಕೋಲನ್ನ ಕೋಲೆ ||ಮು||
ಜಂಬ ನೀಲದಮರ ಬೆಳೆಯಬಾರದೆ ಕೋಲು ಕೋಲನ್ನ ಕೋಲೆ ||ಹಿ||

ಜಂಬ ನೀಲದ ಮರ ಹುಟ್ಟಬಾರದೆ ಕೋಲು ಕೋಲನ್ನ ಕೋಲೆ ||ಮು||
ಜಂಬ ನೀಲದ ಮರ ಹುಟ್ಟಬಾರದೆ ಕೋಲು ಕೋಲನ್ನ ಕೋಲೆ ||ಹಿ||

ಬಾಯಿಯಾಗಳ ಮಾತು ಬಾಯಾಗ ಇರಲಿಕ್ಕೆ
ಜಂಬ ನೀಲದ ಮರವಾ ಹುಟ್ಯಾವ್ವಾ ಕೋಲು ಕೋಲನ್ನ ಕೋಲೆ ||ಮು||
ಜಂಬ ನೀಲದ ಮರವಾ ಹುಟ್ಯಾವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗ್ಯಾನುಳ್ಳ ಧರ್ಮರು ಗ್ಯಾನುಳ್ಳರಾದರೆ
ಹೂವು ಕಾಯಾಗಿ ಜಡಿಯಬಾರದೆ ಕೋಲು ಕೋಲನ್ನ ಕೋಲೆ ||ಮು||
ಹೂವು ಕಾಯಾಗಿ ಜಡಿಯಬಾರದೆ ಕೋಲು ಕೋಲನ್ನ ಕೋಲೆ ||ಹಿ||

ಬಾಯಿಯಾಗಳ ಮಾತು ಬಾಯಾಗ ಇರಲಿಕ್ಕೆ
ಹೂವಾಗಿ ಮಗ್ಯಾಗಿ ಕಾಯಾಗಿ ಜಡೆದವವ್ವಾ ಕೋಲು ಕೋಲನ್ನ ಕೋಲೆ ||ಮು||
ಹೂವಾಗಿ ಮಗ್ಯಾಗಿ ಕಾಯಾಗಿ ಜಡೆದವವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸತ್ಯುಳ್ಳ ಧರ್ಮರ ಸತ್ಯುಳ್ಳರಾದರೆ
ಕಾಯಿನೆ ಹಣ್ಣಾಗಿ ಜಡೆಯಬಾರದೆ ಕೋಲು ಕೋಲನ್ನ ಕೋಲೆ ||ಮು||
ಕಾಯಿನೆ ಹಣ್ಣಾಗಿ ಜಡೆಯಬಾರದೆ ಕೋಲು ಕೋಲನ್ನ ಕೋಲೆ ||ಹಿ||

ಬಾಯಿಯಾಗಳ ಮಾತು ಬಾಯಾಗ ಇರಲಿಕ್ಕೆ
ಕಾಯಿನೆ ಹಣ್ಣಾಗಿ ಜಡೆದವವ್ವಾ ಕೋಲು ಕೋಲನ್ನ ಕೋಲೆ ||ಮು||
ಕಾಯಿನೆ ಹಣ್ಣಾಗಿ ಜಡೆದವವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕಾಯಿನೆ ಹಣ್ಣಾಗಿ ಜಡೆದವವ್ವಾ ಕೋಲು ಕೋಲನ್ನ ಕೋಲೆ ||ಮು||
ಕಾಯಿನೆ ಹಣ್ಣಾಗಿ ಜಡೆದವವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮರ ಹತ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಮರ ಹತ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಮರ ಹತ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಮರ ಹತ್ಯಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಮರ ಹತ್ತಿ ಭೀಮ ಉಪ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಮರ ಹತ್ತಿ ಭೀಮ ಉಪ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ಮ್ಯಾಕ ಬಿದ್ದವವ್ವಾ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ಮ್ಯಾಕ ಬಿದ್ದವವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮುಚ್ಚಿದ ಕಣ್ಣು ತಗದಾಳವ್ವ ಕೋಲು ಕೋಲನ್ನ ಕೋಲೆ ||ಮು||
ಮುಚ್ಚಿದ ಕಣ್ಣು ತಗದಾಳವ್ವ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದೆ ನುಡಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದೆ ನುಡಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಮ್ಮಣ್ಣನ ಮಕ್ಕಳಿಗೆ ಕೊಡಬೇಕೆ ಕೋಲು ಕೋಲನ್ನ ಕೋಲೆ ||ಮು||
ನಮ್ಮಣ್ಣನ ಮಕ್ಕಳಿಗೆ ಕೊಡಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಬಿದ್ದು ಬಿದ್ದು ಹಣ್ಣು ಆರಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಬಿದ್ದು ಬಿದ್ದು ಹಣ್ಣು ಆರಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಮರವನ್ನು ಇಳಿದಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಮರವನ್ನು ಇಳಿದಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಮರವನ್ನು ಇಳಿದಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಮರವನ್ನು ಇಳಿದಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಹಣ್ಣಿನ ಸುಂಕಾ ಕೊಟ್ಟು ಹೋಗೆಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಣ್ಣಿನ ಸುಂಕಾ ಕೊಟ್ಟು ಹೋಗೆಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹಣ್ಣಿನ ಸುಂಕಾ ಕೊಟ್ಟು ಹೋಗೆಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಣ್ಣಿನ ಸುಂಕಾ ಕೊಟ್ಟು ಹೋಗೆಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಅಡವ್ಯಾಳ ಹಣ್ಣೀಗೆ ಯಾತರ ಸುಂಕ ಜಾಣ ಕೋಲು ಕೋಲನ್ನ ಕೋಲೆ ||ಮು||
ಅಡವ್ಯಾಳ ಹಣ್ಣೀಗೆ ಯಾತರ ಸುಂಕ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನಡುವಿನ ಪಟ್ಟಿ ಬಿಚ್ಚಿವಗೆದಾಳೋ ಜಾಣೆ ಬಿಚ್ಚಿವಗೆದಾಳೋ ಕೋಲು ಕೋಲನ್ನ ಕೋಲೆ ||ಮು||
ನಡುವಿನ ಪಟ್ಟಿ ಬಿಚ್ಚಿವಗೆದಾಳೋ ಜಾಣೆ ಬಿಚ್ಚಿವಗೆದಾಳೋ ಕೋಲು ಕೋಲನ್ನ ಕೋಲೆ ||ಹಿ||

ನಿನ್ನಂತ ಮಡದಿ ನನಗೆ ಇದ್ದರೆ ಆ ಪಟ್ಟಿ ವೈದು ಇಡುತ್ತಿದೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನಿನ್ನಂತ ಮಡದಿ ನನಗೆ ಇದ್ದರೆ ಆ ಪಟ್ಟಿ ವೈದು ಇಡುತ್ತಿದೆ ಜಾಣೆ  ಕೋಲು ಕೋಲನ್ನ ಕೋಲೆ ||ಹಿ||

ಹಣ್ಣಿನ ಸುಂಕಾ ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಣ್ಣಿನ ಸುಂಕಾ ಕೊಟ್ಟು ಹೋಗೆ ಜಾಣೆ  ಕೋಲು ಕೋಲನ್ನ ಕೋಲೆ ||ಹಿ||

ಹಣ್ಣಿನ ಸುಂಕಾ ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಣ್ಣಿನ ಸುಂಕಾ ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಮು||

# ೩. ಅವ್ವಣೆವ್ವ ಕಾವ್ಯ (೭)

ಎತ್ತು ಬಂಡಿಗೆ ಸುಂಕಾ ಮೂಲಿ ಮುಕಟಿಗೆ ಸುಂಕಾ
ಅಡವ್ಯಾಳ ಹಣ್ಣಿಗೆ ಯಾತರ ಸುಂಕಾ ಜಾಣ ಕೋಲು ಕೋಲನ್ನ ಕೋಲೆ ||ಮು||
ಅಡವ್ಯಾಳ ಹಣ್ಣಿಗೆ ಯಾತರ ಸುಂಕಾ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಕಿವಿಯಾಗಳ ವಾಲಿ ಬಿಚ್ಚಿ ಹೋಗದ್ಲು ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕಿವಿಯಾಗಳ ವಾಲಿ ಬಿಚ್ಚಿ ಹೋಗದ್ಲು ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ನಿನ್ನಂತ ಮಡದಿ ನನಗೆ ಇದ್ದರೆ ಆ ವಾಲಿ ವೈದು ಇಡುತ್ತಿದೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನಿನ್ನಂತ ಮಡದಿ ನನಗೆ ಇದ್ದರೆ ಆ ಪಟ್ಟಿ ವೈದು ಇಡುತ್ತಿದೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹಣ್ಣಿನ ಸುಂಕಾ ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಣ್ಣಿನ ಸುಂಕಾ ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಅಡವ್ಯಾಗಳಾ ಹಣ್ಣಿಗೆ ಯಾತರ ಸುಂಕಾ ಜಾಣ ಕೋಲು ಕೋಲನ್ನ ಕೋಲೆ ||ಮು||
ಅಡವ್ಯಾಗಳಾ ಹಣ್ಣಿಗೆ ಯಾತರ ಸುಂಕಾಜಾಣ ಕೋಲು ಕೋಲನ್ನ ಕೋಲೆ ||ಹಿ||

ಅಡವ್ಯಾಗ ಯಾರಿಲ್ಲವೆಂದು ಅಡವಿಗೆ ನಾ ಬಂದೆ,
ಅಡವ್ಯಾಗ ನೀನೆಲ್ಲಿ ಕುಂತಿದ್ದೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಅಡವ್ಯಾಗ ನೀನೆಲ್ಲಿ ಕುಂತಿದ್ದೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಗ್ಯಾನ ಮೂಳಾ ಗಜ ಭೀಮ ಕೋಲು ಕೋಲನ್ನ ಕೋಲೆ ||ಮು||
ಗ್ಯಾನ ಮೂಳಾ ಗಜ ಭೀಮ ಕೋಲು ಕೋಲನ್ನ ಕೋಲೆ ||ಹಿ||

ನೀನೇನೆ ಕುಂತಿದ್ದೆ ಮುಳಾ ಗಜ ಭೀಮ ಕೋಲು ಕೋಲನ್ನ ಕೋಲೆ ||ಮು||
ನೀನೇನೆ ಕುಂತಿದ್ದೆ ಮುಳಾ ಗಜ ಭೀಮ ಕೋಲು ಕೋಲನ್ನ ಕೋಲೆ ||ಹಿ||

ಜಾಣ ಮೂಳಾ ಗಜ ಭೀಮ ಕೋಲು ಕೋಲನ್ನ ಕೋಲೆ ||ಮು||
ಜಾಣ ಮೂಳಾ ಗಜ ಭೀಮ ಕೋಲು ಕೋಲನ್ನ ಕೋಲೆ ||ಹಿ||

ನಿನ್ನ ಬೆನ್ನಟ್ಟಿ ಬಂದೀನೆ ನಾನೇ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನಿನ್ನ ಬೆನ್ನಟ್ಟಿ ಬಂದೀನೆ ನಾನೇಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಬಂದೀನಿ ನಾನೇ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಬಂದೀನಿ ನಾನೇ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಭೀಮಗೆ ಸಿಟ್ಟು ಬಂದಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಭೀಮಗೆ ಸಿಟ್ಟು ಬಂದಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಬಂದವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಬಂದವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಮೆಲ್ಲ ಮೆಲ್ಲಕೆ ಹೆಜ್ಜೆ ಇಡುವುತಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಮೆಲ್ಲ ಮೆಲ್ಲಕೆ ಹೆಜ್ಜೆ ಇಡುವುತಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಇಡುವುತಾಳೆ  ಜಾಣೆ ಕೋಲು ಕೋಲನ್ನ ಕೋಲೆ ||ಮು||
ಇಡುವುತಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಮೆಲ್ಲ ಮೆಲ್ಲಕ್ಕೆ ಹೆಜ್ಜೆ ಇಡಬ್ಯಾಡೆ ಎಲೆ ಹೆಣ್ಣೆ
ಹಣ್ಣೀನ ಸುಂಕಾ ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಣ್ಣೀನ ಸುಂಕಾ ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹಣ್ಣೀನ ಸುಂಕಾ ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಣ್ಣೀನ ಸುಂಕಾ ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೊಟ್ಟು ಹೋಗೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಭೀಮಗೆ ರೋಷ ತುಂಬ್ಯಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಭೀಮಗೆ ರೋಷ ತುಂಬ್ಯಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ತುಂಬ್ಯಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ತುಂಬ್ಯಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹೊಕ್ಕು ಮುಂಗೈ ಇಡದಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಮು||
ಹೊಕ್ಕು ಮುಂಗೈ ಇಡದಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಇಡದಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಮು||
ಇಡದಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಹೊಕ್ಕು ಒಳದೆಡೆ ಕಚ್ಯಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಮು||
ಹೊಕ್ಕು ಒಳದೆಡೆ ಕಚ್ಯಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಕಚ್ಚ್ಯಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಮು||
ಕಚ್ಚ್ಯಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಹೊಕ್ಕಳ ತಡಿಯ ಕಚ್ಚ್ಯಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಮು||
ಹೊಕ್ಕಳ ತಡಿಯ ಕಚ್ಚ್ಯಾನವ್ವಾ  ಜಾಣ ಕೋಲು ಕೋಲನ್ನ ಕೋಲೆ ||ಹಿ||

ಕಚ್ಚ್ಯಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಮು||
ಕಚ್ಚ್ಯಾನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಒಂದು ದಿನ ಅಂಬೋದು ಒಂದು ತಿಂಗಳಾಗಿ
ಎರಡೆ ದಿನ ಅಂಬೋದು ಎರಡೆ ತಿಂಗಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಎರಡೆ ದಿನ ಅಂಬೋದು ಎರಡೆ ತಿಂಗಳೆ ಜಾಣೆ  ಕೋಲು ಕೋಲನ್ನ ಕೋಲೆ ||ಹಿ||

ಎರಡೆ ತಿಂಗಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಎರಡೆ ತಿಂಗಳೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಮೂರು ದಿನ ಅಂಬೋದು ನಾಕು ತಿಂಗಳೆ ಜಾಣ ಕೋಲು ಕೋಲನ್ನ ಕೋಲೆ ||ಮು||
ಮೂರು ದಿನ ಅಂಬೋದು ನಾಕು ತಿಂಗಳೆ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನಾಕು ತಿಂಗಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನಾಕು ತಿಂಗಳೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ನಾಕು ದಿನ ಅಂಬೋದು ಐದು ತಿಂಗಳು ಜಾಣ ಕೋಲು ಕೋಲನ್ನ ಕೋಲೆ ||ಮು||
ನಾಕು ದಿನ ಅಂಬೋದು ಐದು ತಿಂಗಳು ಜಾಣ ಕೋಲು ಕೋಲನ್ನ ಕೋಲೆ ||ಹಿ||

ಐದು ತಿಂಗಳು ಜಾಣ ಕೋಲು ಕೋಲನ್ನ ಕೋಲೆ ||ಮು||
ಐದು ತಿಂಗಳು ಜಾಣ ಕೋಲು ಕೋಲನ್ನ ಕೋಲೆ ||ಹಿ||

ಐದು ದಿನ ಅಂಬೋದು ಆರು ತಿಂಗಳು ಜಾಣ ಕೋಲು ಕೋಲನ್ನ ಕೋಲೆ ||ಮು||
ಐದು ದಿನ ಅಂಬೋದು ಆರು ತಿಂಗಳು ಜಾಣ  ಕೋಲು ಕೋಲನ್ನ ಕೋಲೆ ||ಹಿ||

ಆರು ತಿಂಗಳು ಜಾಣ ಕೋಲು ಕೋಲನ್ನ ಕೋಲೆ ||ಮು||
ಆರು ತಿಂಗಳು ಜಾಣ ಕೋಲು ಕೋಲನ್ನ ಕೋಲೆ ||ಹಿ||

ಏಳು ದಿನ ಅಂಬೋದು ಎಂಟು ತಿಂಗಳು  ಜಾಣೆ ಕೋಲು ಕೋಲನ್ನ ಕೋಲೆ ||ಮು||
ಏಳು ದಿನ ಅಂಬೋದು ಎಂಟು ತಿಂಗಳು  ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಎಂಟು ತಿಂಗಳು ಜಾಣೆ ಕೋಲು ಕೋಲನ್ನ ಕೋಲೆ ||ಮು||
ಎಂಟು ತಿಂಗಳು ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಒಂಬತ್ತು ತಿಂಗಳು ತುಂಬ್ಯಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಒಂಬತ್ತು ತಿಂಗಳು ತುಂಬ್ಯಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ತುಂಬ್ಯಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ತುಂಬ್ಯಾವವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಸಂದು ಸಂದೆಲ್ಲಾ ಸವಾಬ್ಯಾನೆ  ಜಾಣ ಕೋಲು ಕೋಲನ್ನ ಕೋಲೆ ||ಮು||
ಸಂದು ಸಂದೆಲ್ಲಾ ಸವಾಬ್ಯಾನೆ  ಜಾಣ ಕೋಲು ಕೋಲನ್ನ ಕೋಲೆ ||ಹಿ||

ಸವಾಬ್ಯಾನೆ  ಜಾಣೆ ಕೋಲು ಕೋಲನ್ನ ಕೋಲೆ ||ಮು||
ಸವಾಬ್ಯಾನೆ  ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹೊತ್ತಿ ಹೊತ್ತಿಗೆ ಬ್ಯಾನಿ ಕತ್ತೀಲಿ ಕಡದಂಗ
ನಿತ್ತರಿಸಲಾರೆ ನಿಲ್ಲಲಾರೆ  ಜಾಣ ಕೋಲು ಕೋಲನ್ನ ಕೋಲೆ ||ಮು||
ನಿತ್ತರಿಸಲಾರೆ ನಿಲ್ಲಲಾರೆ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನಿಲ್ಲಲಾರೆ ಜಾಣ ಕೋಲು ಕೋಲನ್ನ ಕೋಲೆ ||ಮು||
ನಿಲ್ಲಲಾರೆ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನಿತ್ತರಿಸಲಾರೆ ನಿಲ್ಲಲಾರೆ  ಜಾಣ ಕೋಲು ಕೋಲನ್ನ ಕೋಲೆ ||ಮು||
ನಿತ್ತರಿಸಲಾರೆ ನಿಲ್ಲಲಾರೆ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನಿಲ್ಲಲಾರೆ ಜಾಣ ಕೋಲು ಕೋಲನ್ನ ಕೋಲೆ ||ಮು||
ನಿಲ್ಲಲಾರೆ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನಿತ್ತರಿಸಲಾರೆ ನಿಲ್ಲಲಾರೆ ಬದಿಯಲ್ಲಿ
ಅಕ್ಕವ್ವ ಇಲ್ಲಲ್ಲೊ ಮರುಗಾಕೋ ಜಾಣ ಕೋಲು ಕೋಲನ್ನ ಕೋಲೆ ||ಮು||
ಅಕ್ಕವ್ವ ಇಲ್ಲಲ್ಲೊ ಮರುಗಾಕೋ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಮರುಗಾಕೋ ಜಾಣ ಕೋಲು ಕೋಲನ್ನ ಕೋಲೆ ||ಮು||
ಮರುಗಾಕೋ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಜಾವ ಜಾವಕೆ ಬ್ಯಾನಿ ತಾಳ ಬಾರಿಸಿದಂಗ
ತಾಳಲಾರೆ ತಡಿಯಲಾರೆ ಜಾಣ ಕೋಲು ಕೋಲನ್ನ ಕೋಲೆ ||ಮು||
ತಾಳಲಾರೆ ತಡಿಯಲಾರೆ ಜಾಣ ಕೋಲು ಕೋಲನ್ನ ಕೋಲೆ ||ಹಿ||

ತಡಿಯಲಾರೆ  ಜಾಣ ಕೋಲು ಕೋಲನ್ನ ಕೋಲೆ ||ಮು||
ತಡಿಯಲಾರೆ  ಜಾಣ ಕೋಲು ಕೋಲನ್ನ ಕೋಲೆ ||ಹಿ||

ತಾಳಲಾರೆ ತಡಿಲಾರೆ ಬದಿಯಲ್ಲಿ
ತಾಯವ್ವ ಇಲ್ಲಲ್ಲೊ ಮರುಗಾಕೋ ಜಾಣ ಕೋಲು ಕೋಲನ್ನ ಕೋಲೆ ||ಮು||
ತಾಯವ್ವ ಇಲ್ಲಲ್ಲೊ ಮರುಗಾಕೋ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಮರುಗಾಕೋ ಜಾಣ ಕೋಲು ಕೋಲನ್ನ ಕೋಲೆ ||ಮು||
ಮರುಗಾಕೋ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಸತ್ಯ ಧರ್ಮರ ನೆನೆಯ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಸತ್ಯ ಧರ್ಮರ ನೆನೆಯ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ನೆನೆಯ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನೆನೆಯ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಬಾಯಿಯಾಗಳ ಮಾತು ಬಾಯಾಗ ಇರಲಿಕ್ಕೆ
ಸತ್ಯ ಧರ್ಮರನ  ನೆನೆದಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಸತ್ಯ ಧರ್ಮರನ  ನೆನೆದಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ನೆನೆದಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನೆನೆದಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಸತ್ಯಧರ್ಮರ ಸತ್ತ್ಯುಳ್ಳರಾದರೆ
ಕೂಸು ಮಾಸುಗಳ ಬೀಳಬಾರದೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೂಸು ಮಾಸುಗಳ ಬೀಳಬಾರದೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಬೀಳಬಾರದೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಬೀಳಬಾರದೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಗ್ಯಾನುಳ್ಳಧರ್ಮರು ಗ್ಯಾನಾರಾದರೆ
ಕೂಸು ಮಾಸುಗಳ ಬಿದ್ದಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೂಸು ಮಾಸುಗಳ ಬಿದ್ದಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಬಿದ್ದಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಬಿದ್ದಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕೂಸಿನ ಮೈ ತೊಳಿಯಾಕೆ ನೀರು ಇಲ್ಲೊ ಜಾಣ ಕೋಲು ಕೋಲನ್ನ ಕೋಲೆ ||ಮು||
ಕೂಸಿನ ಮೈ ತೊಳಿಯಾಕೆ ನೀರು ಇಲ್ಲೊ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನೀರು ಇಲ್ಲೊ ಜಾಣ ಕೋಲು ಕೋಲನ್ನ ಕೋಲೆ ||ಮು||
ನೀರು ಇಲ್ಲೊ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಸತ್ಯ ಧರ್ಮರನ ನೆನೆಯ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಸತ್ಯ ಧರ್ಮರನ ನೆನೆಯ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||

ನೆನೆಯ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನೆನೆಯ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಸತ್ಯುಳ್ಳ ಧರ್ಮರ ಸತ್ಯುಳ್ಳರಾದರೆ
ಬಿಸಿನೀರಾ ಕಾಲ್ಯಾವು ತಿರುಗಬಾರದೆ  ಜಾಣೆ ಕೋಲು ಕೋಲನ್ನ ಕೋಲೆ ||ಮು||
ಬಿಸಿನೀರಾ ಕಾಲ್ಯಾವು ತಿರುಗಬಾರದೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ತಿರುಗಬಾರದೆ  ಜಾಣೆ ಕೋಲು ಕೋಲನ್ನ ಕೋಲೆ ||ಮು||
ತಿರುಗಬಾರದೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಬಾಯಿಯಾಗಳ ಮಾತು ಬಾಯಾಗ ಇರಲಿಕ್ಕೆ
ಬಿಸಿನೀರ ಕಾಲ್ಯಾವು ತಿರುಗ್ಯಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಬಿಸಿನೀರ ಕಾಲ್ಯಾವು ತಿರುಗ್ಯಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ತಿರುಗ್ಯಾವಲ್ಲೇ  ಜಾಣೆ ಕೋಲು ಕೋಲನ್ನ ಕೋಲೆ ||ಮು||
ತಿರುಗ್ಯಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಗ್ಯಾನುಳ್ಳ ಧರ್ಮದ ಗ್ಯಾನುಳ್ಳರಾದರೆ
ತಣ್ಣೀರು ಕಾಲೇವು ತಿರುಗಬಾರದೆ ಜಾಣ ಕೋಲು ಕೋಲನ್ನ ಕೋಲೆ ||ಮು||
ತಣ್ಣೀರು ಕಾಲೇವು ತಿರುಗಬಾರದೆ  ಜಾಣ ಕೋಲು ಕೋಲನ್ನ ಕೋಲೆ ||ಹಿ||

ತಿರುಗಬಾರದೆ ಜಾಣ ಕೋಲು ಕೋಲನ್ನ ಕೋಲೆ ||ಮು||
ತಿರುಗಬಾರದೆ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಬಾಯಿಯಾಗಳ ಮಾತು ಬಾಯಗ ಇರಲಿಕ್ಕೆ
ತಣ್ಣೀರು ಕಾಲೇವು ತಿರುಗ್ಯಾವಲ್ಲೇ  ಜಾಣೆ ಕೋಲು ಕೋಲನ್ನ ಕೋಲೆ ||ಮು||
ತಣ್ಣೀರು ಕಾಲೇವು ತಿರುಗ್ಯಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ತಿರುಗ್ಯಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಮು||
ತಿರುಗ್ಯಾವಲ್ಲೇ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕೂಸಿನ ಮೈಯ ತೊಳೆದಾಳಲ್ಲೋ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೂಸಿನ ಮೈಯ ತೊಳೆದಾಳಲ್ಲೋ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ತೊಳೆದಾಳೋ ಜಾಣೆ ಕೋಲು ಕೋಲನ್ನ ಕೋಲೆ ||ಮು||
ತೊಳೆದಾಳೋ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಒಳದಡಿ ತೊಳೆದಾಳಲ್ಲೋ ಜಾಣ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಒಳದಡಿ ತೊಳೆದಾಳಲ್ಲೋ ಜಾಣ ಕೋಲು ಕೋಲನ್ನ ಕೋಲೆ ||ಹಿ||

ತೊಳೆದಾಳಲೋ ಜಾಣೆ ಕೋಲು ಕೋಲನ್ನ ಕೋಲೆ ||ಮು||
ತೊಳೆದಾಳಲೋ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದು ನುಡಿದಾಳೆ  ಜಾಣೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದು ನುಡಿದಾಳೆ  ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ನುಡಿದಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನುಡಿದಾಳೆ  ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಉರಿಗಳಾ ಕೊಯ್ಯೋ ಗಜಭೀಮ ಜಾಣ ಕೋಲು ಕೋಲನ್ನ ಕೋಲೆ ||ಮು||
ಉರಿಗಳಾ ಕೊಯ್ಯೋ ಗಜಭೀಮ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಗಜಭೀಮ ಜಾಣ ಕೋಲು ಕೋಲನ್ನ ಕೋಲೆ ||ಮು||
ಗಜಭೀಮ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನೀನು ಕೊಯ್ಯಲೇ ಎಲೆ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನೀನು ಕೊಯ್ಯಲೇ ಎಲೆ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಎಲೆ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಎಲೆ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ನೀನು ಕೊಯ್ಯಲೋ ಗಜಭೀಮ  ಜಾಣ ಕೋಲು ಕೋಲನ್ನ ಕೋಲೆ ||ಮು||
ನೀನು ಕೊಯ್ಯಲೋ ಗಜಭೀಮ  ಜಾಣ ಕೋಲು ಕೋಲನ್ನ ಕೋಲೆ ||ಹಿ||

ಗಜಭೀಮ  ಜಾಣ ಕೋಲು ಕೋಲನ್ನ ಕೋಲೆ ||ಮು||
ಗಜಭೀಮ  ಜಾಣ ಕೋಲು ಕೋಲನ್ನ ಕೋಲೆ ||ಮು||

ನೀನು ಕೊಯ್ಯಲೋ ಗಜಭೀಮ  ಜಾಣ ಕೋಲು ಕೋಲನ್ನ ಕೋಲೆ ||ಮು||
ನೀನು ಕೊಯ್ಯಲೋ ಗಜಭೀಮ   ಜಾಣ ಕೋಲು ಕೋಲನ್ನ ಕೋಲೆ ||ಹಿ||

ಗಜಭೀಮ  ಜಾಣ ಕೋಲು ಕೋಲನ್ನ ಕೋಲೆ ||ಮು||
ಗಜಭೀಮ  ಜಾಣ ಕೋಲು ಕೋಲನ್ನ ಕೋಲೆ ||ಮು||

ಕೊರಕಲ್ಲು ಭೀಮ ತಂದನವ್ವಾ  ಜಾಣ ಕೋಲು ಕೋಲನ್ನ ಕೋಲೆ ||ಮು||
ಕೊರಕಲ್ಲು ಭೀಮ ತಂದನವ್ವಾ  ಜಾಣ ಕೋಲು ಕೋಲನ್ನ ಕೋಲೆ ||ಹಿ||

ತಂದನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಮು||
ತಂದನವ್ವಾ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನಿನ್ನ ಉರಿಗಳ ನಾನೇನೇ ಕೊಯಿದೇನೆ ನನ್ನ ಮಗನೆ
ನನ್ನ  ಉಡಿಯಾಕ ಮುಡಿಯೆ ಮಗನೆ  ಜಾಣೆ  ಕೋಲು ಕೋಲನ್ನ ಕೋಲೆ ||ಮು||
ನನ್ನ  ಉಡಿಯಾಕ ಮುಡಿಯೆ ಮಗನೆ  ಜಾಣೆ  ಕೋಲು ಕೋಲನ್ನ ಕೋಲೆ ||ಹಿ||

ಮುಡಿಯೆ ಮಗನೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಮುಡಿಯೆ ಮಗನೆ ಜಾಣೆ  ಕೋಲು ಕೋಲನ್ನ ಕೋಲೆ ||ಹಿ||

ಉರಿಗಳ ಭೀಮ ಕೊಯ್ದಾನವ್ವ ಜಾಣ ಕೋಲು ಕೋಲನ್ನ ಕೋಲೆ ||ಮು||
ಉರಿಗಳ ಭೀಮ ಕೊಯ್ದಾನವ್ವ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಕೊಯ್ದಾನವ್ವ ಜಾಣ ಕೋಲು ಕೋಲನ್ನ ಕೋಲೆ ||ಮು||
ಕೊಯ್ದಾನವ್ವ ಜಾಣ ಕೋಲು ಕೋಲನ್ನ ಕೋಲೆ ||ಹಿ||

ಕೂಸಿನ ಕುಂಚ ಕಟ್ಟು ಹೆಣ್ಣೆ  ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೂಸಿನ ಕುಂಚ ಕಟ್ಟು ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕಟ್ಟು ಹೆಣ್ಣೆ  ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕಟ್ಟು ಹೆಣ್ಣೆ  ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕೂಸಿನ ಕುಂಚ ಕಟ್ಟು ಭೀಮ ಜಾಣ ಕೋಲು ಕೋಲನ್ನ ಕೋಲೆ ||ಮು||
ಕೂಸಿನ ಕುಂಚ ಕಟ್ಟು ಭೀಮ  ಜಾಣ ಕೋಲು ಕೋಲನ್ನ ಕೋಲೆ ||ಹಿ||

ಕಟ್ಟು ಭೀಮ ಜಾಣ ಕೋಲು ಕೋಲನ್ನ ಕೋಲೆ ||ಮು||
ಕಟ್ಟು ಭೀಮ ಜಾಣ ಕೋಲು ಕೋಲನ್ನ ಕೋಲೆ ||ಹಿ||

ನಾನೇನು ಕಟ್ಟಿದರೆ ಮಂದಿ ನೋಡುತಾರೆ
ನಿನ್ನ ಕುಂಚ ಕಟ್ಟು ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ನಿನ್ನ ಕುಂಚ ಕಟ್ಟು ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕಟ್ಟು ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕಟ್ಟು ಹೆಣ್ಣೆ  ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕೂಸಿನ ಕುಂಚ ಕಟ್ಯಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೂಸಿನ ಕುಂಚ ಕಟ್ಯಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಎಲ್ಲಿಗೋಗ್ಯಾನ ಗಜಭೀಮ  ಜಾಣ ಕೋಲು ಕೋಲನ್ನ ಕೋಲೆ ||ಮು||
ಎಲ್ಲಿಗೋಗ್ಯಾನ ಗಜಭೀಮ  ಜಾಣ ಕೋಲು ಕೋಲನ್ನ ಕೋಲೆ ||ಹಿ||

ಗಜಭೀಮ ಜಾಣ ಕೋಲು ಕೋಲನ್ನ ಕೋಲೆ ||ಮು||
ಗಜಭೀಮ ಜಾಣ ಕೋಲು ಕೋಲನ್ನ ಕೋಲೆ ||ಮು||

ಕೊಂತೆಮ್ಮ ಮಜ್ಜಿಗೆ ಮಾಡುತಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮ ಮಜ್ಜಿಗೆ ಮಾಡುತಾಳೆ  ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಮಜ್ಜಿಗೆ ಮಾಡುತಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಮಜ್ಜಿಗೆ ಮಾಡುತಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಮಜ್ಜಿಗೆ ಗಡಿಗೆ ಹಿಂದೆ ಕೂಸನ್ನು ಉಳ್ಳಬಿಟ್ಟ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಮಜ್ಜಿಗೆ ಗಡಿಗೆ ಹಿಂದೆ ಕೂಸನ್ನು ಉಳ್ಳಬಿಟ್ಟ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಉಳ್ಳಬಿಟ್ಟ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಉಳ್ಳಬಿಟ್ಟ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮರಾ ಮನೆಗೆ ಹೋಗ್ಯಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಧರ್ಮರಾ ಮನೆಗೆ ಹೋಗ್ಯಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹೋಗ್ಯಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹೋಗ್ಯಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಮಜ್ಜಿಗೆ ಗಡಿಗೆಗೆ ಕೂಸ ಉಳ್ಳಬಿಟ್ಲೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಮಜ್ಜಿಗೆ ಗಡಿಗೆಗೆ ಕೂಸ ಉಳ್ಳಬಿಟ್ಲೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಉಳ್ಳ ಬಿಟ್ಲೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಉಳ್ಳ ಬಿಟ್ಲೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆಮ್ಮೆ ಬೆಣ್ಣೆ ತಗುದಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮೆ ಬೆಣ್ಣೆ ತಗುದಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ತಗುದಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ತಗುದಾಳೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

## ೩. ಅವ್ವಣೆವ್ವ ಕಾವ್ಯ (ಆ)

ಕೂಸಿನ ಬಾಯಾಕ ಹಾಕುತಾಳೋ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕೂಸಿನ ಬಾಯಾಕ ಹಾಕುತಾಳೋ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹಾಕುತಾಳೋ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಾಕುತಾಳೋ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪೆ ಬಣಿಮ್ಯಾಕ ಹೋಗಾ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಸಪ್ಪೆ ಬಣಿಮ್ಯಾಕ ಹೋಗಾ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹೋಗಾ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹೋಗಾ ಹೆಣ್ಣೆ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪೆ ಬಣಿಮ್ಯಾಗೆ ಕುಂತಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಸಪ್ಪೆ ಬಣಿಮ್ಯಾಗೆ ಕುಂತಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕುಂತಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕುಂತಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹಾಳುಗೋಡ್ಯಾಗ ಭೀಮ ಕುಂತನವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಾಳುಗೋಡ್ಯಾಗ ಭೀಮ ಕುಂತನವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕುಂತಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕುಂತಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಹಾಳುಗೋಡ್ಯಾಗ ಭೀಮ ಕುಂತನವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಹಾಳುಗೋಡ್ಯಾಗ ಭೀಮ ಕುಂತನವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಕುಂತಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಮು||
ಕುಂತಾಳವ್ವಾ ಜಾಣೆ ಕೋಲು ಕೋಲನ್ನ ಕೋಲೆ ||ಹಿ||

ಇಲ್ಲಿಗೆ ಹರಹರ ಇಲ್ಲಿಗೆ ಶಿವ ಶಿವ
ಇಲ್ಲಿಗೆ ಸಂದೀನ ಪದ ಮುಗಿದೆ ಸೋಬಾನವೆ ||ಮು||
ಇಲ್ಲಿಗೆ ಸಂದೀನ ಪದ ಮುಗಿದೆ ಸೋಬಾನವೆ ||ಹಿ||

ಇಲ್ಲಿಗೆ ನಿಮ್ಮ ದನಿಯ ನಿಲ್ಲ ವಡಿಯ ಸೋಬಾನವೆ ||ಮು||
ಇಲ್ಲಿಗೆ ನಿಮ್ಮ ದನಿಯ ನಿಲ್ಲ ವಡಿಯ ಸೋಬಾನವೆ ||ಹಿ||

ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಭೀಮಣ್ಣ ಎಲ್ಲೆಲ್ಲೆ ಸುಳಿವಿಲ್ಲ ಕೋಲು ಕೋಲನ್ನ ಕೋಲೆ ||ಮು||
ಭೀಮಣ್ಣ ಎಲ್ಲೆಲ್ಲೆ ಸುಳಿವಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಭೀಮಣ್ಣ ಎಲ್ಲೆಲ್ಲೆ ಸುಳಿವಿಲ್ಲ ಕೋಲು ಕೋಲನ್ನ ಕೋಲೆ ||ಮು||
ಭೀಮಣ್ಣ ಎಲ್ಲೆಲ್ಲೆ ಸುಳಿವಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆಮ್ಮನೋಗಿ ಕೇಳುತಾನೆ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮನೋಗಿ ಕೇಳುತಾನೆ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆಮ್ಮನೋಗಿ ಕೇಳುತಾನೆ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮನೋಗಿ ಕೇಳುತಾನೆ ಕೋಲು ಕೋಲನ್ನ ಕೋಲೆ ||ಹಿ||

ಬೆಣ್ಣೆ ತಗಿತಾಳೆ ಕೊಂತೆಮ್ಮ ಕೋಲು ಕೋಲನ್ನ ಕೋಲೆ
ಬೆಣ್ಣೆ ತಗಿತಾಳೆ ಕೊಂತೆಮ್ಮ ಕೋಲು ಕೋಲನ್ನ ಕೋಲೆ ||ಮು||
ಬೆಣ್ಣೆ ತಗಿತಾಳೆ ಕೊಂತೆಮ್ಮ ಕೋಲು ಕೋಲನ್ನ ಕೋಲೆ ||ಹಿ||

ಭೀಮ ಎಲ್ಲಿಗೆs..... ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಭೀಮ ಎಲ್ಲಿಗೆs..... ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಭೀಮ ಎಲ್ಲಿಗೆs..... ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಭೀಮ ಎಲ್ಲಿಗೆs..... ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಬ್ಯಾಟಿಗೆ ಹೋಗ್ಯಾನೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಬ್ಯಾಟಿಗೆ ಹೋಗ್ಯಾನೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಬ್ಯಾಟಿಗೆ ಹೋಗ್ಯಾನೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಬ್ಯಾಟಿಗೆ ಹೋಗ್ಯಾನೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಕೂಸಿನ ಮಾರಿ ನೋಡ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕೂಸಿನ ಮಾರಿ ನೋಡ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಹೊಲಿಕೆ ಭೀಮನಂಗ, ಕಣ್ಣು ಭೀಮನಂಗಾ
ಮುಖ ನೋಡಿದರೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಮು||
ಮುಖ ನೋಡಿದರೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಹಿ||

ಮುಸಿನಗು ಧರ್ಮಣ್ಣ ನಕ್ಕಾನೇ ಕೋಲು ಕೋಲನ್ನ ಕೋಲೆ ||ಮು||
ಮುಸಿನಗು ಧರ್ಮಣ್ಣ ನಕ್ಕಾನೇ ಕೋಲು ಕೋಲನ್ನ ಕೋಲೆ ||ಹಿ||

ಭೀಮ ಅಲ್ಲದಲ್ಲೆ ಬದಲಲ್ಲಾ ಕೋಲು ಕೋಲನ್ನ ಕೋಲೆ ||ಮು||
ಭೀಮ ಅಲ್ಲದಲ್ಲೆ ಬದಲಲ್ಲಾ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಭೀಮನನ್ನು ನೀವು ಹುಡಿಕಿ ಬರ್ರೋ ಕೋಲು ಕೋಲನ್ನ ಕೋಲೆ ||ಮು||
ಭೀಮನನ್ನು ನೀವು ಹುಡಿಕಿ ಬರ್ರೋ ಕೋಲು ಕೋಲನ್ನ ಕೋಲೆ ||ಹಿ||

ನಕುಲ ಸಹದೇವಾ ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ನಕುಲ ಸಹದೇವಾ ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಳ್ಳವಾ ಕೊಳ್ಳವಾ ಹುಡಿಕ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಹಳ್ಳವಾ ಕೊಳ್ಳವಾ ಹುಡಿಕ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಎಲ್ಲೆಲ್ಲಿ ಭೀಮನ ಸುಳಾವಿಲ್ಲ ಕೋಲು ಕೋಲನ್ನ ಕೋಲೆ ||ಮು||
ಎಲ್ಲೆಲ್ಲಿ ಭೀಮನ ಸುಳಾವಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಹಾಳೇನಾ ಗೋಡ್ಯಾಕ ಬಂದರವ್ವಾ ಕೋಲು ಕೋಲನ್ನ ಕೋಲೆ ||ಮು||
ಹಾಳೇನಾ ಗೋಡ್ಯಾಕ ಬಂದರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಲ್ಲೇನೆ ಕುಂತಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಅಲ್ಲೇನೆ ಕುಂತಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಅಲ್ಲೇನೆ ಕುಂತಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಅಲ್ಲೇನೆ ಕುಂತಾನೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಅಣ್ಣ ಕರೀತಾನೆ ಬರಬೇಕೆ ಕೋಲು ಕೋಲನ್ನ ಕೋಲೆ ||ಮು||
ಅಣ್ಣ ಕರೀತಾನೆ ಬರಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಅಣ್ಣ ಕರೀತಾನೆ ಬರಬೇಕೆ ಕೋಲು ಕೋಲನ್ನ ಕೋಲೆ ||ಮು||
ಅಣ್ಣ ಕರೀತಾನೆ ಬರಬೇಕೆ ಕೋಲು ಕೋಲನ್ನ ಕೋಲೆ ||ಹಿ||

ನೀವು ಕರೆದರೆ ನಾನು ಬರೋದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನೀವು ಕರೆದರೆ ನಾನು ಬರೋದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ನನ್ನ ಬೈಯುತಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ನನ್ನ ಬೈಯುತಾನೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ನನ್ನ ಬೈಯುತಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ನನ್ನ ಬೈಯುತಾನೆ ಕೋಲು ಕೋಲನ್ನ ಕೋಲೆ ||ಹಿ||

ಹಿಂದಕಾ ಬಂದಾರೆ ಅವರೇನ ಕೋಲು ಕೋಲನ್ನ ಕೋಲೆ ||ಮು||
ಹಿಂದಕಾ ಬಂದಾರೆ ಅವರೇನ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣನ ಮುಂದೆ ಹೇಳುತಾರೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣನ ಮುಂದೆ ಹೇಳುತಾರೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣನ ಮುಂದೆ ಹೇಳುತಾರೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣನ ಮುಂದೆ ಹೇಳುತಾರೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮಿಗೆ ಆತ ಬರಾವಲ್ಲ ಕೋಲು ಕೋಲನ್ನ ಕೋಲೆ ||ಮು||
ನಮ್ಮಿಗೆ ಆತ ಬರಾವಲ್ಲ ಕೋಲು ಕೋಲನ್ನ ಕೋಲೆ ||ಹಿ||

ಅರ್ಜುನನಾದರೆ ಕಳಿವ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಅರ್ಜುನನಾದರೆ ಕಳಿವ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಅರ್ಜುನನೋಗಿ ಕರದಾನೆ ಕೋಲು ಕೋಲನ್ನ ಕೋಲೆ ||ಮು||
ಅರ್ಜುನನೋಗಿ ಕರದಾನೆ ಕೋಲು ಕೋಲನ್ನ ಕೋಲೆ ||ಹಿ||

ನಿನ್ನಿಂದೆ ನಾನು ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿನ್ನಿಂದೆ ನಾನು ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ನಿನ್ನಿಂದೆ ನಾನು ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿನ್ನಿಂದೆ ನಾನು ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ನನ್ನ ಬೈಯುತಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ನನ್ನ ಬೈಯುತಾನೆ ಕೋಲು ಕೋಲನ್ನ ಕೋಲೆ ||ಹಿ||

ಯಾರಿಂದೆ ಬರುತ್ತಿಯೋ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಯಾರಿಂದೆ ಬರುತ್ತಿಯೋ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆಮ್ಮನಾದರೆ ಕಳಿಸಿಕೊಡೆ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮನಾದರೆ ಕಳಿಸಿಕೊಡೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನಾ ಪಲ್ಲಕ್ಕಿ ಹೊರಗೆ ಇಡಿರೋ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನಾ ಪಲ್ಲಕ್ಕಿ ಹೊರಗೆ ಇಡಿರೋ ಕೋಲು ಕೋಲನ್ನ ಕೋಲೆ ||ಹಿ||

ಅದರಾಗ ಕೊಂತೆಮ್ಮ ಕುಂತಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಅದರಾಗ ಕೊಂತೆಮ್ಮ ಕುಂತಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಾಲಾರು ಗೌಳೇರು ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಮು||
ನಾಲಾರು ಗೌಳೇರು ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಾಲಾರು ಗೌಳೇರು ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಮು||
ನಾಲಾರು ಗೌಳೇರು ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅರಗೀನಾ ಮನಿಮುಂದೆ ಇಳಿವ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಅರಗೀನಾ ಮನಿಮುಂದೆ ಇಳಿವ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಎಲ್ಲಿ ಕುಂತೀಯಾ ನನ್ನ ಮಗನೆ ಕೋಲು ಕೋಲನ್ನ ಕೋಲೆ ||ಮು||
ಎಲ್ಲಿ ಕುಂತೀಯಾ ನನ್ನ ಮಗನೆ ಕೋಲು ಕೋಲನ್ನ ಕೋಲೆ ||ಹಿ||

ಎಲ್ಲಿ ಕುಂತೀಯಾ ನನ್ನ ಮಗನೆ ಕೋಲು ಕೋಲನ್ನ ಕೋಲೆ ||ಮು||
ಎಲ್ಲಿ ಕುಂತೀಯಾ ನನ್ನ ಮಗನೆ ಕೋಲು ಕೋಲನ್ನ ಕೋಲೆ ||ಹಿ||

ಕಾರೆಪಲ್ಲೆ ತಿಂದು, ಬಾರೆ ಪಲ್ಲೆ ತಿಂದು
ಕಳ್ಳೆಲ್ಲಾ ಹಸಿರು ಏರ್ಯಾವೆ ಕೋಲು ಕೋಲನ್ನ ಕೋಲೆ ||ಮು||
ಕಳ್ಳೆಲ್ಲಾ ಹಸಿರು ಏರ್ಯಾವೆ ಮಗನೆ ಕೋಲು ಕೋಲನ್ನ ಕೋಲೆ ||ಹಿ||

ಕಳ್ಳೆಲ್ಲಾ ಹಸಿರು ಏರ್ಯಾವೆ ಕೋಲು ಕೋಲನ್ನ ಕೋಲೆ ||ಮು||
ಕಳ್ಳೆಲ್ಲಾ ಹಸಿರು ಏರ್ಯಾವೆ ಕೋಲು ಕೋಲನ್ನ ಕೋಲೆ ||ಹಿ||

ಹೊಟ್ಟೆ ಸವರಾಡಿ ನೋಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಹೊಟ್ಟೆ ಸವರಾಡಿ ನೋಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಹೊಟ್ಟೆ ಸವರಾಡಿ ನೋಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಹೊಟ್ಟೆ ಸವರಾಡಿ ನೋಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮ ಬೋರಾಡಿ ಅಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಕೊಂಡಗದ ಬಾನ್ಽ..... ಉಂಬೋ ಕೋಲು ಕೋಲನ್ನ ಕೋಲೆ ||ಮು||
ಕೊಂಡಗದ ಬಾನ್ಽ..... ಉಂಬೋ ಕೋಲು ಕೋಲನ್ನ ಕೋಲೆ ||ಹಿ||

ಕೊಪ್ಪರಿಕಿ ನೀರು ಕುಡಿಯೋ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಕೊಪ್ಪರಿಕಿ ನೀರು ಕುಡಿಯೋ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಕೊಪ್ಪರಿಕಿ ನೀರು ಕುಡಿಯೋ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಕೊಪ್ಪರಿಕಿ ನೀರು ಕುಡಿಯೋ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಹೋಗೋಣ ಬಾರ ನನ್ನ ಮಗನೆ ಕೋಲು ಕೋಲನ್ನ ಕೋಲೆ ||ಮು||
ಹೋಗೋಣ ಬಾರ ನನ್ನ ಮಗನೆ ಕೋಲು ಕೋಲನ್ನ ಕೋಲೆ ||ಹಿ||

ಹೋಗೋಣ ಬಾರ ನನ್ನ ಮಗನೆ ಕೋಲು ಕೋಲನ್ನ ಕೋಲೆ ||ಮು||
ಹೋಗೋಣ ಬಾರ ನನ್ನ ಮಗನೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಪಲ್ಲಕ್ಯಾಗ ಕುಂತಾಳೆ ಕೊಂತೆಮ್ಮ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಪಲ್ಲಕ್ಯಾಗ ಕುಂತಾಳೆ ಕೊಂತೆಮ್ಮ ಕೋಲು ಕೋಲನ್ನ ಕೋಲೆ ||ಹಿ||

ಭೀಮ ಒಬ್ಬಾನೆ ಹೊತ್ತನವ್ವಾ ಕೋಲು ಕೋಲನ್ನ ಕೋಲೆ ||ಮು||
ಭೀಮ ಒಬ್ಬಾನೆ ಹೊತ್ತನವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಡುಮನ್ಯಾಕ ಹೋಗಿ ಇಳಿವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ನಡುಮನ್ಯಾಕ ಹೋಗಿ ಇಳಿವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸೆರಗ ಮರೆಮಾಡಿ ಕುಂತರಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಸೆರಗ ಮರೆಮಾಡಿ ಕುಂತರಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಭೀಮನ ಮಾರಿ ನೋಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಭೀಮನ ಮಾರಿ ನೋಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆಮ್ಮಗೆ ಏನೊಂದೆ ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊಂತೆಮ್ಮಗೆ ಏನೊಂದೆ ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಭೀಮಾಗ ಜಳಕ ಮಾಡಿಸವ್ವಾ ಕೋಲು ಕೋಲನ್ನ ಕೋಲೆ ||ಮು||
ಭೀಮಾಗ ಜಳಕ ಮಾಡಿಸವ್ವಾ ಕೋಲು ಕೋಲನ್ನ ಕೋಲೆ ||ಹಿ||

ಭೀಮಾಗ ಊಟ ನೀಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಭೀಮಾಗ ಊಟ ನೀಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅನ್ನ ತುಪ್ಪಾ ನೀಡೆ ಹಡದವ್ವಾ ಕೋಲು ಕೋಲನ್ನ ಕೋಲೆ ||ಮು||
ಅನ್ನ ತುಪ್ಪಾ ನೀಡೆ ಹಡದವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉಂಡಾನೆ ಉಟ್ಟಾನೆ ಅಂಗೈ ತೊಳೆದಾನೆ
ಗಂಧದ ಇಳೇವೆ ಮೆಲುದಾನೆ ಕೋಲು ಕೋಲನ್ನ ಕೋಲೆ ||ಮು||
ಗಂಧದ ಇಳೇವೆ ಮೆಲುದಾನೆ ಕೋಲು ಕೋಲನ್ನ ಕೋಲೆ ||ಹಿ||

ಗರಡಿ ಮನಿಯಾಕೆ ಹೋದನವ್ವಾ ಕೋಲು ಕೋಲನ್ನ ಕೋಲೆ ||ಮು||
ಗರಡಿ ಮನಿಯಾಕೆ ಹೋದನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಗೆಣಿಯಾನ ಹೋಗಿ ಕರದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಗೆಣಿಯಾನ ಹೋಗಿ ಕರದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕುಸ್ತಿಯನ್ನು ಭೀಮ ಆಡುತಾನೆ ಕೋಲು ಕೋಲನ್ನ ಕೋಲೆ ||ಮು||
ಕುಸ್ತಿಯನ್ನು ಭೀಮ ಆಡುತಾನೆ ಕೋಲು ಕೋಲನ್ನ ಕೋಲೆ ||ಹಿ||

ಭೀಮನನ್ನು ಅವರೇ ದಣಿಸುತಾರೆ ಕೋಲು ಕೋಲನ್ನ ಕೋಲೆ ||ಮು||
ಭೀಮನನ್ನು ಅವರೇ ದಣಿಸುತಾರೆ ಕೋಲು ಕೋಲನ್ನ ಕೋಲೆ ||ಹಿ||

ಭೀಮನನ್ನು ಅವರೇ ದಣಿಸುತಾರೆ ಕೋಲು ಕೋಲನ್ನ ಕೋಲೆ ||ಮು||
ಭೀಮನನ್ನು ಅವರೇ ದಣಿಸುತಾರೆ ಕೋಲು ಕೋಲನ್ನ ಕೋಲೆ ||ಹಿ||

ಸಡ್ಡು ಬಡಿದು ಕುಸ್ತಿ ಆಡುತಾನೆ ಕೋಲು ಕೋಲನ್ನ ಕೋಲೆ ||ಮು||
ಸಡ್ಡು ಬಡಿದು ಕುಸ್ತಿ ಆಡುತಾನೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದೆ ಏನು ನುಡಿದೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದೆ ಏನು ನುಡಿದೆ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪಿ ಬಣವಿಗೆ ನಾನು ಹೋಗಬೇಕೆ ಕೋಲು ಕೋಲನ್ನ ಕೋಲೆ ||ಮು||
ಸಪ್ಪಿ ಬಣವಿಗೆ ನಾನು ಹೋಗಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಅವರೇನೆ ಮನಿದಾರಿ ಬಿಟ್ಟರವ್ವಾ ಕೋಲು ಕೋಲನ್ನ ಕೋಲೆ ||ಮು||
ಅವರೇನೆ ಮನಿದಾರಿ ಬಿಟ್ಟರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಟ್ಯಾದಾಕ ಅವರು ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಹಟ್ಯಾದಾಕ ಅವರು ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪೀನಾ ಸೂಡು ಕಿತ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಸಪ್ಪೀನಾ ಸೂಡು ಕಿತ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪೀನಾ ಸೂಡು ಕಿತ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಸಪ್ಪೀನಾ ಸೂಡು ಕಿತ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ಕೂದ್ಲು ಬಂದವವ್ವಾ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ಕೂದ್ಲು ಬಂದವವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ಕೂದ್ಲು ಬಂದವವ್ವಾ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ಕೂದ್ಲು ಬಂದವವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪೆ ಬಣವಿಯಲ್ಲಿ ದೆವ್ವ ನೋಡೆ ಕೋಲು ಕೋಲನ್ನ ಕೋಲೆ ||ಮು||
ಸಪ್ಪೆ ಬಣವಿಯಲ್ಲಿ ದೆವ್ವ ನೋಡೆ ಕೋಲು ಕೋಲನ್ನ ಕೋಲೆ ||ಹಿ||

ಓಡೋಡಿ ಅವರೇನೆ ಬರುತಾರೆ ಕೋಲು ಕೋಲನ್ನ ಕೋಲೆ ||ಮು||
ಓಡೋಡಿ ಅವರೇನೆ ಬರುತಾರೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮ ತಾಯಿ ಅವ್ವಣೆವ್ವ ಕುಂತೀನಿ ಬರ್ರೇ ಕೋಲು ಕೋಲನ್ನ ಕೋಲೆ ||ಮು||
ನಿಮ್ಮ ತಾಯಿ ಅವ್ವಣೆವ್ವ ಕುಂತೀನಿ ಬರ್ರೇ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮ ತಾಯಿ ಅವ್ವಣೆವ್ವ ಕುಂತೀನಿ ಬರ್ರೇ ಕೋಲು ಕೋಲನ್ನ ಕೋಲೆ ||ಮು||
ನಿಮ್ಮ ತಾಯಿ ಅವ್ವಣೆವ್ವ ಕುಂತೀನಿ ಬರ್ರೇ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪೆಯನ್ನು ಸೂಡು ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಸಪ್ಪೆಯನ್ನು ಸೂಡು ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪೆಯ ಹೊರೆಯ ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಮು||
ಸಪ್ಪೆಯ ಹೊರೆಯ ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹೊರೆಯ ಹೊತ್ತುಕೊಂಡೆ ಬರುತಾರೆ ಕೋಲು ಕೋಲನ್ನ ಕೋಲೆ ||ಮು||
ಹೊರೆಯ ಹೊತ್ತುಕೊಂಡೆ ಬರುತಾರೆ ಕೋಲು ಕೋಲನ್ನ ಕೋಲೆ ||ಹಿ||

ಹೊರೆಯ ಹೊತ್ತುಕೊಂಡೆ ಬರುತಾರೆ ಕೋಲು ಕೋಲನ್ನ ಕೋಲೆ ||ಮು||
ಹೊರೆಯ ಹೊತ್ತುಕೊಂಡೆ ಬರುತಾರೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮ ಅಣ್ಣೋರೆ ಬೈಯುತಾರೆ ಕೋಲು ಕೋಲನ್ನ ಕೋಲೆ ||ಮು||
ನಮ್ಮ ಅಣ್ಣೋರೆ ಬೈಯುತಾರೆ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮಿಂದೆ ನಾನು ಬರೋದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿಮ್ಮಿಂದೆ ನಾನು ಬರೋದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮಿಂದೆ ನಾನು ಬರೋದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿಮ್ಮಿಂದೆ ನಾನು ಬರೋದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪೆ ಮರೆಮಾಡಿ ಒಯ್ಯುತೀವೀ ಕೋಲು ಕೋಲನ್ನ ಕೋಲೆ ||ಮು||
ಸಪ್ಪೆ ಮರೆಮಾಡಿ ಒಯ್ಯುತೀವೀ ಕೋಲು ಕೋಲನ್ನ ಕೋಲೆ ||ಹಿ||

ಸಪ್ಪೆ ಮರೆಮಾಡಿ ಒಯ್ಯುತೀವೀ ಕೋಲು ಕೋಲನ್ನ ಕೋಲೆ ||ಮು||
ಸಪ್ಪೆ ಮರೆಮಾಡಿ ಒಯ್ಯುತೀವೀ ಕೋಲು ಕೋಲನ್ನ ಕೋಲೆ ||ಹಿ||

ನಡು ಮನ್ಯಾಕ ಹೋಗಿ ಬಿಡತೀವೀ ಕೋಲು ಕೋಲನ್ನ ಕೋಲೆ ||ಮು||
ನಡು ಮನ್ಯಾಕ ಹೋಗಿ ಬಿಡತೀವೀ ಕೋಲು ಕೋಲನ್ನ ಕೋಲೆ ||ಹಿ||

ನಡು ಮನ್ಯಾಕ ಹೋಗಿ ಬಿಡತೀವೀ ಕೋಲು ಕೋಲನ್ನ ಕೋಲೆ ||ಮು||
ನಡು ಮನ್ಯಾಕ ಹೋಗಿ ಬಿಡತೀವೀ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವನ ಕರಕಂಡೆ ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವನ ಕರಕಂಡೆ ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಡುಮನ್ಯಾಕ ಹೋಗಿ ಬಿಟ್ಟರವ್ವಾ ಕೋಲು ಕೋಲನ್ನ ಕೋಲೆ ||ಮು||
ನಡುಮನ್ಯಾಕ ಹೋಗಿ ಬಿಟ್ಟರವ್ವಾ ಕೋಲು ಕೋಲನ್ನ ಕೋಲೆ ||ಹಿ||

## ೩. ಅವ್ವಣೆವ್ವ ಕಾವ್ಯ (೯)

ಅಣ್ಣರೇನೆಂದೆ ನುಡಿದರವ್ವಾ ಕೋಲು ಕೋಲನ್ನ ಕೋಲೆ ||ಮು||
ಅಣ್ಣರೇನೆಂದೆ ನುಡಿದರವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಮ್ಮ ತಂಗಿಯ ಮೈಯ ತೊಳೆಯಬೇಕೇ ಕೋಲು ಕೋಲನ್ನ ಕೋಲೆ ||ಮು||
ನಮ್ಮ ತಂಗಿಯ ಮೈಯ ತೊಳೆಯಬೇಕೇ ಕೋಲು ಕೋಲನ್ನ ಕೋಲೆ ||ಹಿ||

ಏಳುಪುಟ್ಟಿ ಹೂವು ತರಬೇಕೇ ಕೋಲು ಕೋಲನ್ನ ಕೋಲೆ ||ಮು||
ಏಳುಪುಟ್ಟಿ ಹೂವು ತರಬೇಕೇ ಕೋಲು ಕೋಲನ್ನ ಕೋಲೆ ||ಹಿ||

ಮಂಚಾದ ಮ್ಯಾಕೆ ಹರವಬೇಕೆ ಕೋಲು ಕೋಲನ್ನ ಕೋಲೆ ||ಮು||
ಮಂಚಾದ ಮ್ಯಾಕೆ ಹರವಬೇಕೆ ಕೋಲು ಕೋಲನ್ನ ಕೋಲೆ ||ಹಿ||

ದಿನಾ ಒಬ್ಬರು ತೂಗಬೇಕೆ ಕೋಲು ಕೋಲನ್ನ ಕೋಲೆ ||ಮು||
ದಿನಾ ಒಬ್ಬರು ತೂಗಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಒಂದು ದಿನ ತೂಗ್ಯಾರೆ ಎರಡು ದಿನ ತೂಗ್ಯಾರ ಕೋಲು ಕೋಲನ್ನ ಕೋಲೆ ||ಮು||
ಒಂದು ದಿನ ತೂಗ್ಯಾರೆ ಎರಡು ದಿನ ತೂಗ್ಯಾರ ಕೋಲು ಕೋಲನ್ನ ಕೋಲೆ ||ಹಿ||

ಮೂರು ದಿನದಾಗ ಏನೊಂದು ನುಡಿದೆ ಕೋಲು ಕೋಲನ್ನ ಕೋಲೆ ||ಮು||
ಮೂರು ದಿನದಾಗ ಏನೊಂದು ನುಡಿದೆ ಕೋಲು ಕೋಲನ್ನ ಕೋಲೆ ||ಹಿ||

ಆರು ಬಟ್ಟಲ ಎಣ್ಣೆ ನೆತ್ತಿಯಾ ಕುಡಿದೈತೆ ಕೋಲು ಕೋಲನ್ನ ಕೋಲೆ ||ಮು||
ಆರು ಬಟ್ಟಲ ಎಣ್ಣೆ ನೆತ್ತಿಯಾ ಕುಡಿದೈತೆ ಕೋಲು ಕೋಲನ್ನ ಕೋಲೆ ||ಹಿ||

ಪುತ್ರನಾ ಹಡೆದು ಬಂದಳಲ್ಲ ಕೋಲು ಕೋಲನ್ನ ಕೋಲೆ ||ಮು||
ಪುತ್ರನಾ ಹಡೆದು ಬಂದಳಲ್ಲ ಕೋಲು ಕೋಲನ್ನ ಕೋಲೆ ||ಹಿ||

ಆರು ಬಟ್ಟಲ ಎಣ್ಣೆ ಆ ನೆತ್ತಿ ಕುಡಿದೈತೆ ಕೋಲು ಕೋಲನ್ನ ಕೋಲೆ ||ಮು||
ಆರು ಬಟ್ಟಲ ಎಣ್ಣೆ ಆ ನೆತ್ತಿ ಕುಡಿದೈತೆ ಕೋಲು ಕೋಲನ್ನ ಕೋಲೆ ||ಹಿ||

ಪುತ್ರನಾ ಹಡೆದು ಬಂದಳಲ್ಲ ಕೋಲು ಕೋಲನ್ನ ಕೋಲೆ ||ಮು||
ಪುತ್ರನಾ ಹಡೆದು ಬಂದಳಲ್ಲ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ಏನೊಂದೆ ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಏನೊಂದೆ ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ಏನೊಂದೆ ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಏನೊಂದೆ ನುಡಿದಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಇತ್ತಬಾರೋ ಪರದಾನಿ ಮಾತೊಂದು ಹೇಳ್ತೀನಿ ಕೋಲು ಕೋಲನ್ನ ಕೋಲೆ ||ಮು||
ಇತ್ತಬಾರೋ ಪರದಾನಿ ಮಾತೊಂದು ಹೇಳ್ತೀನಿ ಕೋಲು ಕೋಲನ್ನ ಕೋಲೆ ||ಹಿ||

ಪಟ್ಟಣಕ್ಕೆ ಡಂಗುರ ಸಾರಿಬಾರೋ ಕೋಲು ಕೋಲನ್ನ ಕೋಲೆ ||ಮು||
ಪಟ್ಟಣಕ್ಕೆ ಡಂಗುರ ಸಾರಿಬಾರೋ ಕೋಲು ಕೋಲನ್ನ ಕೋಲೆ ||ಹಿ||

ಪಟ್ಟಣಕ್ಕೆ ಡಂಗುರ ಸಾರಿಬಾರೋ ಕೋಲು ಕೋಲನ್ನ ಕೋಲೆ ||ಮು||
ಪಟ್ಟಣಕ್ಕೆ ಡಂಗುರ ಸಾರಿಬಾರೋ ಕೋಲು ಕೋಲನ್ನ ಕೋಲೆ ||ಹಿ||

ಕುಟ್ಟಕ್ಕೆ ಬಂದಾರ ಬೀಸಾಕ ಬಂದಾರ
ಕೂಸೀನ್ಾ….. ಬಿಟ್ಟು ಹೋಗ್ಯಾರಲ್ಲೇ ಕೋಲು ಕೋಲನ್ನ ಕೋಲೆ ||ಮು||
ಕೂಸೀನ್ಾ….. ಬಿಟ್ಟು ಹೋಗ್ಯಾರಲ್ಲೇ ಕೋಲು ಕೋಲನ್ನ ಕೋಲೆ ||ಹಿ||

ಕೂಸೀನ ಬಿಟ್ಟು ಹೋಗ್ಯಾರಲ್ಲೇ ಕೋಲು ಕೋಲನ್ನ ಕೋಲೆ ||ಮು||
ಕೂಸೀನ ಬಿಟ್ಟು ಹೋಗ್ಯಾರಲ್ಲೇ ಕೋಲು ಕೋಲನ್ನ ಕೋಲೆ ||ಹಿ||

ಬಡವರು ಬಗ್ಗರು ಬರಬೇಕೇ ಕೋಲು ಕೋಲನ್ನ ಕೋಲೆ ||ಮು||
ಬಡವರು ಬಗ್ಗರು ಬರಬೇಕೇ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣರ ಅರಮನಿಗೆ ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣರ ಅರಮನಿಗೆ ಬಂದಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೂಸೀನ ಮಾರಿ ನೋಡ್ಯಾರವ್ವ ಕೋಲು ಕೋಲನ್ನ ಕೋಲೆ ||ಮು||
ಕೂಸೀನ ಮಾರಿ ನೋಡ್ಯಾರವ್ವ ಕೋಲು ಕೋಲನ್ನ ಕೋಲೆ ||ಹಿ||

ಕೂಸೀನ ಮಾರಿ ನೋಡ್ಯಾರವ್ವ ಕೋಲು ಕೋಲನ್ನ ಕೋಲೆ ||ಮು||
ಕೂಸೀನ ಮಾರಿ ನೋಡ್ಯಾರವ್ವ ಕೋಲು ಕೋಲನ್ನ ಕೋಲೆ ||ಹಿ||

ನಮ್ಮದಲ್ಲಪ್ಪ ಈ ಕೂಸೆ ಕೋಲು ಕೋಲನ್ನ ಕೋಲೆ ||ಮು||
ನಮ್ಮದಲ್ಲಪ್ಪ ಈ ಕೂಸೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮದಲ್ಲಪ್ಪ ಈ ಕೂಸೆ ಕೋಲು ಕೋಲನ್ನ ಕೋಲೆ ||ಮು||
ನಮ್ಮದಲ್ಲಪ್ಪ ಈ ಕೂಸೆ ಕೋಲು ಕೋಲನ್ನ ಕೋಲೆ ||ಹಿ||

ಹಿಂದಕ್ಕೆ ಅವರೇ ಹೋಗ್ಯಾರವ್ವ ಕೋಲು ಕೋಲನ್ನ ಕೋಲೆ ||ಮು||
ಹಿಂದಕ್ಕೆ ಅವರೇ ಹೋಗ್ಯಾರವ್ವ ಕೋಲು ಕೋಲನ್ನ ಕೋಲೆ ||ಹಿ||

ಹಿಂದಕ್ಕೆ ಅವರೇ ಹೋಗ್ಯಾರವ್ವ ಕೋಲು ಕೋಲನ್ನ ಕೋಲೆ ||ಮು||
ಹಿಂದಕ್ಕೆ ಅವರೇ ಹೋಗ್ಯಾರವ್ವ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ದ್ರೌಪತಿ ಮಗನ ಮಾಡಬೇಕೇ ಕೋಲು ಕೋಲನ್ನ ಕೋಲೆ ||ಮು||
ದ್ರೌಪತಿ ಮಗನ ಮಾಡಬೇಕೇ ಕೋಲು ಕೋಲನ್ನ ಕೋಲೆ ||ಹಿ||

ದ್ರೌಪತಿ ಮಗನ ಮಾಡಬೇಕೇ ಕೋಲು ಕೋಲನ್ನ ಕೋಲೆ ||ಮು||
ದ್ರೌಪತಿ ಮಗನ ಮಾಡಬೇಕೇ ಕೋಲು ಕೋಲನ್ನ ಕೋಲೆ ||ಹಿ||

ಮಕ್ಕಳಿಲ್ಲದಾಕೆ ದ್ರೌಪತಿ ಕೋಲು ಕೋಲನ್ನ ಕೋಲೆ ||ಮು||
ಮಕ್ಕಳಿಲ್ಲದಾಕೆ ದ್ರೌಪತಿ ಕೋಲು ಕೋಲನ್ನ ಕೋಲೆ ||ಹಿ||

ಮಕ್ಕಳಿಲ್ಲದಾಕೆ ದ್ರೌಪತಿ ಕೋಲು ಕೋಲನ್ನ ಕೋಲೆ ||ಮು||
ಮಕ್ಕಳಿಲ್ಲದಾಕೆ ದ್ರೌಪತಿ ಕೋಲು ಕೋಲನ್ನ ಕೋಲೆ ||ಹಿ||

ಇತ್ತಬಾರೋ ಪರದಾನಿ ಮಾತೊಂದು ಹೇಳ್ತೀನಿ ಕೋಲು ಕೋಲನ್ನ ಕೋಲೆ ||ಮು||
ಇತ್ತಬಾರೋ ಪರದಾನಿ ಮಾತೊಂದು ಹೇಳ್ತೀನಿ ಕೋಲು ಕೋಲನ್ನ ಕೋಲೆ ||ಹಿ||

ಸೂಲಗಿತ್ತಿ ಸಂಗವ್ವನ ಬರಹೇಳೇ ಕೋಲು ಕೋಲನ್ನ ಕೋಲೆ ||ಮು||
ಸೂಲಗಿತ್ತಿ ಸಂಗವ್ವನ ಬರಹೇಳೇ ಕೋಲು ಕೋಲನ್ನ ಕೋಲೆ ||ಹಿ||

ಸೂಲಗಿತ್ತಿ ಸಂಗವ್ವನ ಬರಹೇಳೇ ಕೋಲು ಕೋಲನ್ನ ಕೋಲೆ ||ಮು||
ಸೂಲಗಿತ್ತಿ ಸಂಗವ್ವನ ಬರಹೇಳೇ ಕೋಲು ಕೋಲನ್ನ ಕೋಲೆ ||ಹಿ||

ಬಟ್ಟಲದ ಕುದುರೆ ಹತ್ತಯಾನೆ ಪರದಾನಿ ಕೋಲು ಕೋಲನ್ನ ಕೋಲೆ ||ಮು||
ಬಟ್ಟಲದ ಕುದುರೆ ಹತ್ತಯಾನೆ ಪರದಾನಿ ಕೋಲು ಕೋಲನ್ನ ಕೋಲೆ ||ಹಿ||

ಸಂಗವ್ವನಾರಮನಿಗೆ ಹೋಗ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಸಂಗವ್ವನಾರಮನಿಗೆ ಹೋಗ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಂಗವ್ವನಾರಮನಿಗೆ ಹೋಗ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಸಂಗವ್ವನಾರಮನಿಗೆ ಹೋಗ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಎಂದು ಬರದ ಪರದಾನಿ ಬಂದೀಯ ಬಾಳದಿನಕ ಕೋಲು ಕೋಲನ್ನ ಕೋಲೆ ||ಮು||
ಎಂದು ಬರದ ಪರದಾನಿ ಬಂದೀಯ ಬಾಳದಿನಕ ಕೋಲು ಕೋಲನ್ನ ಕೋಲೆ ||ಹಿ||

ಕುಂದರಗಳ್ಳಾ ಮನಿಗಳ್ಳಾ ಕೋಲು ಕೋಲನ್ನ ಕೋಲೆ ||ಮು||
ಕುಂದರಗಳ್ಳಾ ಮನಿಗಳ್ಳಾ ಕೋಲು ಕೋಲನ್ನ ಕೋಲೆ ||ಹಿ||

ಕುಂದರಕಾ ಬಂದಿಲ್ಲ ನಿಂದರಕಾ ಬಂದಿಲ್ಲ
ಧರ್ಮಣ್ಣರ ಮನಿಯಾಗೆ ಬಾಣಸ್ತಾನ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣರ ಮನಿಯಾಗೆ ಬಾಣಸ್ತಾನ ಕೋಲು ಕೋಲನ್ನ ಕೋಲೆ ||ಹಿ||

ಬಡವರು ಅಲ್ಲಪ್ಪ ಬಗ್ಗರು ಅಲ್ಲಪ್ಪಾ
ಬರೆಗಾಲಲ್ಲಿ ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ಬರೆಗಾಲಲ್ಲಿ ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಪಲ್ಲಕ್ಕಿ ಕಳುವಬೇಕೆ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಪಲ್ಲಕ್ಕಿ ಕಳುವಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಪಲ್ಲಕ್ಕಿ ಕಳುವಬೇಕೆ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಪಲ್ಲಕ್ಕಿ ಕಳುವಬೇಕೆ ಕೋಲು ಕೋಲನ್ನ ಕೋಲೆ ||ಹಿ||

ನಾಲಾರು ಗೌಳೇರನಾ ಕಳುವಬೇಕೇ ಕೋಲು ಕೋಲನ್ನ ಕೋಲೆ ||ಮು||
ನಾಲಾರು ಗೌಳೇರನಾ ಕಳುವಬೇಕೇ ಕೋಲು ಕೋಲನ್ನ ಕೋಲೆ ||ಹಿ||

ನಾಲಾರು ಗೌಳೇರನಾ ಕಳುವಬೇಕೇ ಕೋಲು ಕೋಲನ್ನ ಕೋಲೆ ||ಮು||
ನಾಲಾರು ಗೌಳೇರನಾ ಕಳುವಬೇಕೇ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣಗಾ ಬಂದು ಹೇಳುತಾರೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣಗಾ ಬಂದು ಹೇಳುತಾರೆ ಕೋಲು ಕೋಲನ್ನ ಕೋಲೆ ||ಹಿ||

ಬಡವರು ಅಲ್ಲಪ್ಪ ಬಗ್ಗರು ಅಲ್ಲಪ್ಪಾ
ಬರೆಗಾಲಲ್ಲಿ ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ಬರೆಗಾಲಲ್ಲಿ ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಬರೆಗಾಲಲ್ಲಿ ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ಬರೆಗಾಲಲ್ಲಿ ಬರಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಪಲ್ಲಕ್ಕಿ ಕಳುವಬೇಕೆ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಪಲ್ಲಕ್ಕಿ ಕಳುವಬೇಕೆ ಕೋಲು ಕೋಲನ್ನ ಕೋಲೆ ||ಹಿ||

ನಾಲಾರು ಗೌಳೇರನಾ ಕಳುವಬೇಕೇ ಕೋಲು ಕೋಲನ್ನ ಕೋಲೆ ||ಮು||
ನಾಲಾರು ಗೌಳೇರನಾ ಕಳುವಬೇಕೇ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಪಲ್ಲಕ್ಕಿ ಹರಗಿಟ್ಟೋ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಪಲ್ಲಕ್ಕಿ ಹರಗಿಟ್ಟೋ ಕೋಲು ಕೋಲನ್ನ ಕೋಲೆ ||ಹಿ||

ನಾಲಾರು ಗೌಳೇರನಾ ಕಳುವ್ಯಾನವ್ವ ಕೋಲು ಕೋಲನ್ನ ಕೋಲೆ ||ಮು||
ನಾಲಾರು ಗೌಳೇರನಾ ಕಳುವ್ಯಾನವ್ವ ಕೋಲು ಕೋಲನ್ನ ಕೋಲೆ ||ಹಿ||

ಸಂಗವ್ವನ ಅರಮನಿಗೆ ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಸಂಗವ್ವನ ಅರಮನಿಗೆ ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಂಗವ್ವನ ಅರಮನಿಗೆ ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಸಂಗವ್ವನ ಅರಮನಿಗೆ ಹೋಗ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಅಂಗಳದಾಗೆ ಹೋಗಿ ಇಳಿವ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಅಂಗಳದಾಗೆ ಹೋಗಿ ಇಳಿವ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಸಂಗವ್ವ ಏನೊಂದೆ ನುಡಿದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಸಂಗವ್ವ ಏನೊಂದೆ ನುಡಿದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹಲ್ಲಿಗೆ ಹಲ್ಲುಪುಡಿ ತೀಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಹಲ್ಲಿಗೆ ಹಲ್ಲುಪುಡಿ ತೀಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಜಳಕ ಸಂಗವ್ವ ಮಾಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಜಳಕ ಸಂಗವ್ವ ಮಾಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಗಂಜಿಸೀರೆನ್ನುಟ್ಟು ಗಂಧದ ಬೊಟ್ಟನಿಟ್ಟು
ಗಂಧಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಮು||
ಗಂಧಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಹಿ||

ಗಂಧಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಮು||
ಗಂಧಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಹಿ||

ಚಂದಿಲವೆಂದೆ ಬಿಡುತಾಳೆ ಕೋಲು ಕೋಲನ್ನ ಕೋಲೆ ||ಮು||
ಚಂದಿಲವೆಂದೆ ಬಿಡುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಸಾದೀನ ಸೀರೆನ್ನುಟ್ಟು ಸಾದೀನ ಬೊಟ್ಟ ನಿಟ್ಟು
ಸಾದೀನ ಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಮು||
ಸಾದೀನ ಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನಿ ಸೀರೆನ್ನುಟ್ಟು ಮುತ್ತಿನ ಬೊಟ್ಟಾನಿಟ್ಟು
ಜೊತೆಗನ್ನಡಿ ಮುಖನೋಡಿ ಕೋಲು ಕೋಲನ್ನ ಕೋಲೆ ||ಮು||
ಜೊತ್ತಗನ್ನಡಿ ಮುಖ ನೋಡಿ ಕೋಲು ಕೋಲನ್ನ ಕೋಲೆ ||ಹಿ||

ಜೊತ್ತೇನೆ ಗನ್ನಡಿ ಮುಖ ನೋಡಿ ಸಂಗವ್ವ
ಒಪ್ಪಿದ್ದಿನೆಂದು ಉಡುತಾಳೆ  ಕೋಲು ಕೋಲನ್ನ ಕೋಲೆ ||ಮು||
ಒಪ್ಪಿದ್ದಿನೆಂದು ಉಡುತಾಳೆ  ಕೋಲು ಕೋಲನ್ನ ಕೋಲೆ ||ಹಿ||

ಕಣ್ಣಿಗೆ ಕಾಡಿಗೆ ಹಚ್ಚುತಾಳೆ ಕೋಲು ಕೋಲನ್ನ ಕೋಲೆ ||ಮು||
ಕಣ್ಣಿಗೆ ಕಾಡಿಗೆ ಹಚ್ಚುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಕಣ್ಣಿಗೆ ಕಾಡಿಗೆ ಹಚ್ಚುತಾಳೆ ಕೋಲು ಕೋಲನ್ನ ಕೋಲೆ ||ಮು||
ಕಣ್ಣಿಗೆ ಕಾಡಿಗೆ ಹಚ್ಚುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಗಂಧದ ಇಳೇವೆ ಮೇಲುದಾಳೆ ಕೋಲು ಕೋಲನ್ನ ಕೋಲೆ ||ಮು||
ಗಂಧದ ಇಳೇವೆ ಮೇಲುದಾಳೆ ಕೋಲು ಕೋಲನ್ನ ಕೋಲೆ ||ಹಿ||

ತನ್ನ ಮನಿಬೀಗ ಜಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ತನ್ನ ಮನಿಬೀಗ ಜಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಪಲ್ಲಕ್ಯಾಗೆ  ಕುಂತಳಲ್ಲ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಪಲ್ಲಕ್ಯಾಗೆ  ಕುಂತಳಲ್ಲ ಕೋಲು ಕೋಲನ್ನ ಕೋಲೆ ||ಹಿ||

ನಾಲಾರು ಗೌಳೇರು ಹೊತ್ತರವ್ವ  ಕೋಲು ಕೋಲನ್ನ ಕೋಲೆ ||ಮು||
ನಾಲಾರು ಗೌಳೇರು ಹೊತ್ತರವ್ವ  ಕೋಲು ಕೋಲನ್ನ ಕೋಲೆ ||ಹಿ||

ನಾಲಾರು ಗೌಳೇರು ಹೊತ್ತರವ್ವ ಕೋಲು ಕೋಲನ್ನ ಕೋಲೆ ||ಮು||
ನಾಲಾರು ಗೌಳೇರು ಹೊತ್ತರವ್ವ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣರ ಮನಿಗೆ  ಬಂದರವ್ವಾ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣರ ಮನಿಗೆ  ಬಂದರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣರ ಮನಿಗೆ  ಬಂದರವ್ವಾ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣರ ಮನಿಗೆ  ಬಂದರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಪಲ್ಲಕ್ಕಿ ಇಳಿವ್ಯಾರವ್ವ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಪಲ್ಲಕ್ಕಿ ಇಳಿವ್ಯಾರವ್ವ ಕೋಲು ಕೋಲನ್ನ ಕೋಲೆ ||ಹಿ||

ಸಂಗವ್ವ ಮನಿಯಾಕೆ ಹೋಗ್ಯಾಳವ್ವ ಕೋಲು ಕೋಲನ್ನ ಕೋಲೆ ||ಮು||
ಸಂಗವ್ವ ಮನಿಯಾಕೆ ಹೋಗ್ಯಾಳವ್ವ ಕೋಲು ಕೋಲನ್ನ ಕೋಲೆ ||ಹಿ||

ಯಾಕ ಕರಸೀಯಾ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಯಾಕ ಕರಸೀಯಾ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಯಾಕ ಕರಸೀಯಾ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಯಾಕ ಕರಸೀಯಾ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ಏನೊಂದೆ ನುಡಿದಾನವ್ವ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಏನೊಂದೆ ನುಡಿದಾನವ್ವ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ಏನೊಂದೆ ನುಡಿದಾನವ್ವ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಏನೊಂದೆ ನುಡಿದಾನವ್ವ ಕೋಲು ಕೋಲನ್ನ ಕೋಲೆ ||ಹಿ||

ನಾನು ಹೇಳಿದಂಗೆ ಕೇಳಬೇಕೇ ಕೋಲು ಕೋಲನ್ನ ಕೋಲೆ ||ಮು||
ನಾನು ಹೇಳಿದಂಗೆ ಕೇಳಬೇಕೇ ಕೋಲು ಕೋಲನ್ನ ಕೋಲೆ ||ಹಿ||

ಕೇಳಿದ್ದು ನಾನಾ ಕೊಡತೀನಿ ಕೋಲು ಕೋಲನ್ನ ಕೋಲೆ ||ಮು||
ಕೇಳಿದ್ದು ನಾನಾ ಕೊಡತೀನಿ ಕೋಲು ಕೋಲನ್ನ ಕೋಲೆ ||ಹಿ||

ಅದು ಏನು ಸುದ್ದಿ ಹೇಳಬೇಕೆ ಕೋಲು ಕೋಲನ್ನ ಕೋಲೆ ||ಮು||
ಅದು ಏನು ಸುದ್ದಿ ಹೇಳಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಅದು ಏನು ಸುದ್ದಿ ಹೇಳಬೇಕೆ ಕೋಲು ಕೋಲನ್ನ ಕೋಲೆ ||ಮು||
ಅದು ಏನು ಸುದ್ದಿ ಹೇಳಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಮಕ್ಕಳಿಲ್ಲದಾಕಿ ದ್ರೌಪತಿ ಕೋಲು ಕೋಲನ್ನ ಕೋಲೆ ||ಮು||
ಮಕ್ಕಳಿಲ್ಲದಾಕಿ ದ್ರೌಪತಿ ಕೋಲು ಕೋಲನ್ನ ಕೋಲೆ ||ಹಿ||

ಮಕ್ಕಳಿಲ್ಲದಾಕಿ ದ್ರೌಪತಿ ಕೋಲು ಕೋಲನ್ನ ಕೋಲೆ ||ಮು||
ಮಕ್ಕಳಿಲ್ಲದಾಕಿ ದ್ರೌಪತಿ ಕೋಲು ಕೋಲನ್ನ ಕೋಲೆ ||ಹಿ||

ದ್ರೌಪತಿ ಮಗನಾ ಮಾಡಬೇಕೆ ಕೋಲು ಕೋಲನ್ನ ಕೋಲೆ ||ಮು||
ದ್ರೌಪತಿ ಮಗನಾ ಮಾಡಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಮಾಡ್ತೀನಿ ಅಂದಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಮು||
ಮಾಡ್ತೀನಿ ಅಂದಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಹಿ||

ಮಾಡ್ತೀನಿ ಅಂದಾಳೆ ಸಂಗವ್ವ  ಕೋಲು ಕೋಲನ್ನ ಕೋಲೆ ||ಮು||
ಮಾಡ್ತೀನಿ ಅಂದಾಳೆ ಸಂಗವ್ವ  ಕೋಲು ಕೋಲನ್ನ ಕೋಲೆ ||ಹಿ||

ಕಂಚಿನ ಬಟ್ಟಲದಾಗ ಮಿಂಚೆಣ್ಣೆ ತಿಳಿದುಪ್ಪ
ನೆತ್ತಿ ದ್ರೌಪತಿಗೆ ತಲಿಗಚ್ಚಿ ಕೋಲು ಕೋಲನ್ನ ಕೋಲೆ ||ಮು||
ನೆತ್ತಿ ದ್ರೌಪತಿಗೆ ತಲಿಗಚ್ಚಿ ಕೋಲು ಕೋಲನ್ನ ಕೋಲೆ ||ಹಿ||

ಬೆಳ್ಳಿ ಬಟ್ಟಲದಾಗ ಎಳ್ಳೇಣ್ಣೆ ತಿಳಿದುಪ್ಪ
ನೆತ್ತಿ ದ್ರೌಪತಿಗೆ ತಲಿಗಚ್ಚಿ ಕೋಲು ಕೋಲನ್ನ ಕೋಲೆ ||ಮು||
ನೆತ್ತಿ ದ್ರೌಪತಿಗೆ ತಲಿಗಚ್ಚಿ ಕೋಲು ಕೋಲನ್ನ ಕೋಲೆ ||ಹಿ||

ಹಂಡೆವದ ನೀರು ಆರುತಾ ತೋರುತಾ
ಯಾಲಕ್ಕಿ ನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಮು||
ಯಾಲಕ್ಕಿ ನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಹಿ||

ದಾರಿ ಬಚ್ಚಲಕಾ ಇಡವ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ದಾರಿ ಬಚ್ಚಲಕಾ ಇಡವ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ದಾರಿ ಬಚ್ಚಲಕಾ ಇಡವ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ದಾರಿ ಬಚ್ಚಲಕಾ ಇಡವ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಉಪ್ಪರಿಕ್ಯಾಗಳ ನೀರು ಉಕ್ಕುತಾ ತೋರುತಾ
ಕರ್ಪೂರನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಮು||
ಕರ್ಪೂರನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಹಿ||

ಕರ್ಪೂರನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಮು||
ಕರ್ಪೂರನಾಕಿ ಸುಳಿಮಳ್ಳೆ ಕೋಲು ಕೋಲನ್ನ ಕೋಲೆ ||ಹಿ||

ಗಚ್ಚಿನ ಬಚ್ಚಲಕೆ ಇಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಗಚ್ಚಿನ ಬಚ್ಚಲಕೆ ಇಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಗಚ್ಚಿನ ಬಚ್ಚಲಕೆ ಇಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಗಚ್ಚಿನ ಬಚ್ಚಲಕೆ ಇಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಬೇವು ಅರೆದಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಮು||
ಬೇವು ಅರೆದಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಹಿ||

ಬೇವು ಅರೆದಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಮು||
ಬೇವು ಅರೆದಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಹಿ||

ಕುಡುಗೋಲು ತಪ್ಲ ಕೈ ಒಳಗೆ ಕೋಲು ಕೋಲನ್ನ ಕೋಲೆ ||ಮು||
ಕುಡುಗೋಲು ತಪ್ಲ ಕೈ ಒಳಗೆ ಕೋಲು ಕೋಲನ್ನ ಕೋಲೆ ||ಹಿ||

ಬಗ್ಗಿ ಬಾರವ್ವ ದ್ರೌಪತಿ ಕೋಲು ಕೋಲನ್ನ ಕೋಲೆ ||ಮು||
ಬಗ್ಗಿ ಬಾರವ್ವ ದ್ರೌಪತಿ ಕೋಲು ಕೋಲನ್ನ ಕೋಲೆ ||ಹಿ||

ಬಗ್ಗಿ ಬಾರವ್ವ ದ್ರೌಪತಿ  ಕೋಲು ಕೋಲನ್ನ ಕೋಲೆ ||ಮು||
ಬಗ್ಗಿ ಬಾರವ್ವ ದ್ರೌಪತಿ  ಕೋಲು ಕೋಲನ್ನ ಕೋಲೆ ||ಹಿ||

ಏನು ಕಾಣದಾಕಿ ದ್ರೌಪತಿ ಕೋಲು ಕೋಲನ್ನ ಕೋಲೆ ||ಮು||
ಏನು ಕಾಣದಾಕಿ ದ್ರೌಪತಿ ಕೋಲು ಕೋಲನ್ನ ಕೋಲೆ ||ಹಿ||

ಬಚ್ಚಲದಾಕೆ ಕರಕಂದೋಗೀ ಕೋಲು ಕೋಲನ್ನ ಕೋಲೆ ||ಮು||
ಬಚ್ಚಲದಾಕೆ ಕರಕಂದೋಗೀ ಕೋಲು ಕೋಲನ್ನ ಕೋಲೆ ||ಹಿ||

ನೀರು ಎರುದಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಮು||
ನೀರು ಎರುದಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಹಿ||

ನಾಣ್ಯದ ಸೀರೆ ಉಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ನಾಣ್ಯದ ಸೀರೆ ಉಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ನಾಣ್ಯದ ಸೀರೆ ಉಡಿಸ್ಯಾಳೆ  ಕೋಲು ಕೋಲನ್ನ ಕೋಲೆ ||ಮು||
ನಾಣ್ಯದ ಸೀರೆ ಉಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಕುಬುಸ ತೊಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಕುಬುಸ ತೊಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತಿನ ಕುಬುಸ ತೊಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಮುತ್ತಿನ ಕುಬುಸ ತೊಡಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ತಲೆಗೆ ಪಟ್ಟೇಯ ಬಿಗಿದಾಳೆ ಕೋಲು ಕೋಲನ್ನ ಕೋಲೆ ||ಮು||
ತಲೆಗೆ ಪಟ್ಟೇಯ ಬಿಗಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ತಲೆಗೆ ಪಟ್ಟೇಯ ಬಿಗಿದಾಳೆ ಕೋಲು ಕೋಲನ್ನ ಕೋಲೆ ||ಮು||
ತಲೆಗೆ ಪಟ್ಟೇಯ ಬಿಗಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ನಡುವಿಗೆ ನಡುಕಟ್ಟ ಬಿಗಿದಾಳೆ ಕೋಲು ಕೋಲನ್ನ ಕೋಲೆ ||ಮು||
ನಡುವಿಗೆ ನಡುಕಟ್ಟ ಬಿಗಿದಾಳೆ ಕೋಲು ಕೋಲನ್ನ ಕೋಲೆ ||ಹಿ||

## ೩. ಅವ್ವಣೆವ್ವ ಕಾವ್ಯ (೧೦)

ಕಿವ್ಯಾಗ ಹತ್ತಿ ಬೆಳ್ಳೊಳ್ಳಿ ಇಟ್ಟಾಳೆ ಕೋಲು ಕೋಲನ್ನ ಕೋಲೆ ||ಮು||
ಕಿವ್ಯಾಗ ಹತ್ತಿ ಬೆಳ್ಳೊಳ್ಳಿ ಇಟ್ಟಾಳೆ ಕೋಲು ಕೋಲನ್ನ ಕೋಲೆ ||ಹಿ||

ಸೂರ್ಯದೇವಗೆ ಕೈಯ ಮುಗಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಸೂರ್ಯದೇವಗೆ ಕೈಯ ಮುಗಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಬಗ್ಗಿ ಬಾರವ್ವ ದ್ರೌಪತಿ ಕೋಲು ಕೋಲನ್ನ ಕೋಲೆ ||ಮು||
ಬಗ್ಗಿ ಬಾರವ್ವ ದ್ರೌಪತಿ ಕೋಲು ಕೋಲನ್ನ ಕೋಲೆ ||ಹಿ||

ಮಂಚದ ಮ್ಯಾಲೆ ಮಲಗಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಮಂಚದ ಮ್ಯಾಲೆ ಮಲಗಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಂಚದ ಮ್ಯಾಲೆ ಮಲಗಿಸ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಮಂಚದ ಮ್ಯಾಲೆ ಮಲಗಿಸ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಬೆಂಕಿ ಹಾಕ್ಯಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಮು||
ಬೆಂಕಿ ಹಾಕ್ಯಾಳೆ ಸಂಗವ್ವ ಕೋಲು ಕೋಲನ್ನ ಕೋಲೆ ||ಹಿ||

ಮಂಚಾದ ಅಡಿಯಲ್ಲಿ ಇಟ್ಟಾಳೆ ಕೋಲು ಕೋಲನ್ನ ಕೋಲೆ ||ಮು||
ಮಂಚಾದ ಅಡಿಯಲ್ಲಿ ಇಟ್ಟಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಂಚಾದ ಅಡಿಯಲ್ಲಿ ಇಟ್ಟಾಳೆ ಕೋಲು ಕೋಲನ್ನ ಕೋಲೆ ||ಮು||
ಮಂಚಾದ ಅಡಿಯಲ್ಲಿ ಇಟ್ಟಾಳೆ ಕೋಲು ಕೋಲನ್ನ ಕೋಲೆ ||ಹಿ||

ಕೂಸೀನಾ ಮೈಯ ತೊಳೆದಾಳೆ ಕೋಲು ಕೋಲನ್ನ ಕೋಲೆ ||ಮು||
ಕೂಸೀನಾ ಮೈಯ ತೊಳೆದಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಂಚದ ಮ್ಯಾಲೆ ಹಾಕ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಮಂಚದ ಮ್ಯಾಲೆ ಹಾಕ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಂಚದ ಮ್ಯಾಲೆ ಹಾಕ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಮಂಚದ ಮ್ಯಾಲೆ ಹಾಕ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಜಳಕ ಸಂಗವ್ವ ಮಾಡ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಜಳಕ ಸಂಗವ್ವ ಮಾಡ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಜಳಕ ಸಂಗವ್ವ ಮಾಡ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಜಳಕ ಸಂಗವ್ವ ಮಾಡ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಹೂವಿನ ಸೀರೆ ಉಟ್ಟಾಳೆ ಕೋಲು ಕೋಲನ್ನ ಕೋಲೆ ||ಮು||
ಹೂವಿನ ಸೀರೆ ಉಟ್ಟಾಳೆ ಕೋಲು ಕೋಲನ್ನ ಕೋಲೆ ||ಹಿ||

ಹೂವಿನ ಸೀರೆ ಉಟ್ಟಾಳೆ ಕೋಲು ಕೋಲನ್ನ ಕೋಲೆ ||ಮು||
ಹೂವಿನ ಸೀರೆ ಉಟ್ಟಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಗ್ಗಿಯ ಕುಬುಸ ತೊಟ್ಟಾಳೆ ಕೋಲು ಕೋಲನ್ನ ಕೋಲೆ ||ಮು||
ಮಗ್ಗಿಯ ಕುಬುಸ ತೊಟ್ಟಾಳೆ ಕೋಲು ಕೋಲನ್ನ ಕೋಲೆ ||ಹಿ||

ಮಗ್ಗಿಯ ಕುಬುಸ ತೊಟ್ಟಾಳೆ ಕೋಲು ಕೋಲನ್ನ ಕೋಲೆ ||ಮು||
ಮಗ್ಗಿಯ ಕುಬುಸ ತೊಟ್ಟಾಳೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತುರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಮು||
ಮುತ್ತುರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಹಿ||

ಮುತ್ತುರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಮು||
ಮುತ್ತುರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಹಿ||

ಗಂಧದ ಇಳೇವು ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಮು||
ಗಂಧದ ಇಳೇವು ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಹಿ||

ಹೋಗಿ ಬರುತೀನಿ ಧರ್ಮಣ್ಣ  ಕೋಲು ಕೋಲನ್ನ ಕೋಲೆ ||ಮು||
ಹೋಗಿ ಬರುತೀನಿ ಧರ್ಮಣ್ಣ  ಕೋಲು ಕೋಲನ್ನ ಕೋಲೆ ||ಹಿ||

ಹೋಗಿ ಬರುತೀನಿ ಧರ್ಮಣ್ಣ  ಕೋಲು ಕೋಲನ್ನ ಕೋಲೆ ||ಮು||
ಹೋಗಿ ಬರುತೀನಿ ಧರ್ಮಣ್ಣ  ಕೋಲು ಕೋಲನ್ನ ಕೋಲೆ ||ಹಿ||

ಹೋಗಿ ಬಾರಮ್ಮ ಸಂಗವ್ವ  ಕೋಲು ಕೋಲನ್ನ ಕೋಲೆ ||ಮು||
ಹೋಗಿ ಬಾರಮ್ಮ ಸಂಗವ್ವ  ಕೋಲು ಕೋಲನ್ನ ಕೋಲೆ ||ಹಿ||

ಹೋಗಿ ಬಾರಮ್ಮ ಸಂಗವ್ವ  ಕೋಲು ಕೋಲನ್ನ ಕೋಲೆ ||ಮು||
ಹೋಗಿ ಬಾರಮ್ಮ ಸಂಗವ್ವ  ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣರ ಅರಮನಿ ಬಿಟ್ವಾಳೆ  ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣರ ಅರಮನಿ ಬಿಟ್ವಾಳೆ ಕೋಲು ಕೋಲನ್ನ ಕೋಲೆ ||ಹಿ||

ಊರಾಳ ಜನರು ಏನು ನುಡಿದೆ ಕೋಲು ಕೋಲನ್ನ ಕೋಲೆ ||ಮು||
ಊರಾಳ ಜನರು ಏನು ನುಡಿದೆ ಕೋಲು ಕೋಲನ್ನ ಕೋಲೆ ||ಹಿ||

ಯಾರೆ ಹಡದಾರೆ ಸಂಗವ್ವ ಕೋಲು ಕೋಲನ್ನ ಕೋಲೆ ||ಮು||
ಯಾರೆ ಹಡದಾರೆ ಸಂಗವ್ವ  ಕೋಲು ಕೋಲನ್ನ ಕೋಲೆ ||ಹಿ||

ಯಾರೆ ಹಡದಾರೆ ಸಂಗವ್ವ  ಕೋಲು ಕೋಲನ್ನ ಕೋಲೆ ||ಮು||
ಯಾರೆ ಹಡದಾರೆ ಸಂಗವ್ವ  ಕೋಲು ಕೋಲನ್ನ ಕೋಲೆ ||ಹಿ||

ಧರ್ಮರ ಮನಿಯಾಗೆ ದ್ರೌಪತಿ ಕೋಲು ಕೋಲನ್ನ ಕೋಲೆ ||ಮು||
ಧರ್ಮರ ಮನಿಯಾಗೆ ದ್ರೌಪತಿ  ಕೋಲು ಕೋಲನ್ನ ಕೋಲೆ ||ಹಿ||

ಧರ್ಮರ ಮನಿಯಾಗೆ ದ್ರೌಪತಿ  ಕೋಲು ಕೋಲನ್ನ ಕೋಲೆ ||ಮು||
ಧರ್ಮರ ಮನಿಯಾಗೆ ದ್ರೌಪತಿ  ಕೋಲು ಕೋಲನ್ನ ಕೋಲೆ ||ಹಿ||

ಗಣಮಗನ ಮನಿಯಾಗೆ ಮಲಗ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಗಣಮಗನ ಮನಿಯಾಗೆ ಮಲಗ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಗಣಮಗನ ಮನಿಯಾಗೆ ಮಲಗ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಗಣಮಗನ ಮನಿಯಾಗೆ ಮಲಗ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ಹೊಟ್ಟೆ ಕಾಣಲಿಲ್ಲ ದ್ರೌಪತಿಗೆ ಕೋಲು ಕೋಲನ್ನ ಕೋಲೆ ||ಮು||
ಹೊಟ್ಟೆ ಕಾಣಲಿಲ್ಲ ದ್ರೌಪತಿಗೆ ಕೋಲು ಕೋಲನ್ನ ಕೋಲೆ ||ಹಿ||

ಮಂದಿಗೇಳಿಕೆಂತಾ ಹೋಗ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ಮಂದಿಗೇಳಿಕೆಂತಾ ಹೋಗ್ಯಾಳೆ ಕೋಲು ಕೋಲನ್ನ ಕೋಲೆ ||ಹಿ||

ತನ್ನ ಅರಮನಿಗೆ ಹೋಗ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ತನ್ನ ಅರಮನಿಗೆ ಹೋಗ್ಯಾಳೆ  ಕೋಲು ಕೋಲನ್ನ ಕೋಲೆ ||ಹಿ||

ತನ್ನ ಅರಮನಿಗೆ ಹೋಗ್ಯಾಳೆ ಕೋಲು ಕೋಲನ್ನ ಕೋಲೆ ||ಮು||
ತನ್ನ ಅರಮನಿಗೆ ಹೋಗ್ಯಾಳೆ  ಕೋಲು ಕೋಲನ್ನ ಕೋಲೆ ||ಹಿ||

ಒಂಬತ್ತು ದಿನದಾಗೆ ತೊಟ್ಲಾವೆ ಕೋಲು ಕೋಲನ್ನ ಕೋಲೆ ||ಮು||
ಒಂಬತ್ತು ದಿನದಾಗೆ ತೊಟ್ಲಾವೆ ಕೋಲು ಕೋಲನ್ನ ಕೋಲೆ ||ಹಿ||

ಇತ್ತ ಬಾರೋ ಪರದಾನಿ ಮಾತೊಂದು ಹೇಳೇನು
ಬಡೀಗೇರ ಅರಮನಿಗೆ ಹೋಗಬೇಕೆ ಕೋಲು ಕೋಲನ್ನ ಕೋಲೆ ||ಮು||
ಬಡೀಗೇರ ಅರಮನಿಗೆ ಹೋಗಬೇಕೆ  ಕೋಲು ಕೋಲನ್ನ ಕೋಲೆ ||ಹಿ||

ಬಡೀಗೇರ ಅರಮನಿಗೆ ಹೋಗಬೇಕೆ ಕೋಲು ಕೋಲನ್ನ ಕೋಲೆ ||ಮು||
ಬಡೀಗೇರ ಅರಮನಿಗೆ ಹೋಗಬೇಕೆ  ಕೋಲು ಕೋಲನ್ನ ಕೋಲೆ ||ಹಿ||

ಎತ್ಲುತ್ತ ಬಡಿಗೇರಣ್ಣ ತುಪ್ಪಬಾನ ಉಂಡು
ಉಕ್ಕಿನ ಉಳಿಬಾಸಿ ಹೆಗಲಿಗೆ ಕೋಲು ಕೋಲನ್ನ ಕೋಲೆ ||ಮು||
ಉಕ್ಕಿನ ಉಳಿಬಾಸಿ ಹೆಗಲಿಗೆ ಕೋಲು ಕೋಲನ್ನ ಕೋಲೆ ||ಹಿ||

ಉಕ್ಕಿನ ಉಳಿಬಾಸಿ ಹೆಗಲಿಗೆ ಕೋಲು ಕೋಲನ್ನ ಕೋಲೆ ||ಮು||
ಉಕ್ಕಿನ ಉಳಿಬಾಸಿ ಹೆಗಲಿಗೆ ಕೋಲು ಕೋಲನ್ನ ಕೋಲೆ ||ಹಿ||

ಸುತ್ತಾವ ಏಳುವನವಾ ತಿರುಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಸುತ್ತಾವ ಏಳುವನವಾ ತಿರುಗ್ಯಾನೆ  ಕೋಲು ಕೋಲನ್ನ ಕೋಲೆ ||ಹಿ||

ಉತ್ತತ್ತಿ ಮರವಾ ಇಳಿವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಉತ್ತತ್ತಿ ಮರವಾ ಇಳಿವ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ಎತ್ಲುತ್ತ ಬಡಿಗೇರಣ್ಣ ಹಾಲುಬಾನ ಉಂಡು
ಹಾಯಿಉಳ್ಳ ಉಳಿಬಾಸಿ ಹೆಗಲಮ್ಯಾಲೆ  ಕೋಲು ಕೋಲನ್ನ ಕೋಲೆ ||ಮು||
ಹಾಯಿಉಳ್ಳ ಉಳಿಬಾಸಿ ಹೆಗಲಮ್ಯಾಲೆ ಕೋಲು  ಕೋಲನ್ನ ಕೋಲೆ ||ಹಿ||

ಹಾಯಿಉಳ್ಳ ಉಳಿಬಾಸಿ ಹೆಗಲಮ್ಯಾಲೆ  ಕೋಲು ಕೋಲನ್ನ ಕೋಲೆ ||ಮು||
ಹಾಯಿಉಳ್ಳ ಉಳಿಬಾಸಿ ಹೆಗಲಮ್ಯಾಲೆ  ಕೋಲು ಕೋಲನ್ನ ಕೋಲೆ ||ಹಿ||

ಸಾಲು ಏಳುವನವಾ ತಿರುಗ್ಯಾನವ್ವ ಕೋಲು ಕೋಲನ್ನ ಕೋಲೆ ||ಮು||
ಸಾಲು ಏಳುವನವಾ ತಿರುಗ್ಯಾನವ್ವ ಕೋಲು ಕೋಲನ್ನ ಕೋಲೆ ||ಹಿ||

ಸಾಲು ಏಳುವನವಾ ತಿರುಗ್ಯಾನವ್ವ ಕೋಲು ಕೋಲನ್ನ ಕೋಲೆ ||ಮು||
ಸಾಲು ಏಳುವನವಾ ತಿರುಗ್ಯಾನವ್ವ ಕೋಲು ಕೋಲನ್ನ ಕೋಲೆ ||ಹಿ||

ಯಾಲಕ್ಕಿ ಮರವಾ ಇಳಿವ್ಯಾನವ್ವ ಕೋಲು ಕೋಲನ್ನ ಕೋಲೆ ||ಮು||
ಯಾಲಕ್ಕಿ ಮರವಾ ಇಳಿವ್ಯಾನವ್ವ ಕೋಲು ಕೋಲನ್ನ ಕೋಲೆ ||ಹಿ||

ಯಾಲಕ್ಕಿ ಮರವಾ ಇಳಿವ್ಯಾನವ್ವ ಕೋಲು ಕೋಲನ್ನ ಕೋಲೆ ||ಮು||
ಯಾಲಕ್ಕಿ ಮರವಾ ಇಳಿವ್ಯಾನವ್ವ ಕೋಲು ಕೋಲನ್ನ ಕೋಲೆ ||ಹಿ||

ಕಂದಗಾ ತೊಟ್ಟಿಲು ಮಾಡತಾನ ಕೋಲು ಕೋಲನ್ನ ಕೋಲೆ ||ಮು||
ಕಂದಗಾ ತೊಟ್ಟಿಲು ಮಾಡತಾನ ಕೋಲು ಕೋಲನ್ನ ಕೋಲೆ ||ಹಿ||

ಒಂದೇನೆ ಮೂಲಿಗೆ ಒಂದೇನೆ ಬಸವಣ್ಣ
ಒಂದಕ್ಕೆ ಒಂದೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಮು||
ಒಂದಕ್ಕೆ ಒಂದೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಹಿ||

ಒಂದಕ್ಕೆ ಒಂದೆ ಶಿವಗಂಟೆ ಪದಕ
ನಂದಿ ಈಶ್ವರನಾ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ನಂದಿ ಈಶ್ವರನಾ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಎರಡನೆ ಮೂಲಿಗೆ ಎರಡೇನೆ ಬಸವಣ್ಣ
ಎರಡಾಕ ಎರಡೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಮು||
ಎರಡಾಕ ಎರಡೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಹಿ||

ಎರಡಾಕ ಎರಡೆ ಶಿವಗಂಟೆ ಪದಕ
ಮುಕ್ಕಣ್ಣ ಈಶ್ವರನಾ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಮುಕ್ಕಣ್ಣ ಈಶ್ವರನಾ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಮೂರನೇ ಮೂಲಿಗೆ ಮೂರಾನೆ ಬಸವಣ್ಣ
ಮೂರಕ್ಕೆ ಮೂರೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಮು||
ಮೂರಕ್ಕೆ ಮೂರೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಹಿ||

ಮೂರಕ್ಕೆ ಮೂರೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಮು||
ಮೂರಕ್ಕೆ ಮೂರೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಹಿ||

ಮೂರಕ್ಕೆ ಮೂರೆ ಶಿವಗಂಟೆ ಪದಕ
ಮುಕ್ಕಣ್ಣ ಈಶ್ವರನಾ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಮುಕ್ಕಣ್ಣ ಈಶ್ವರನಾ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ನಾಲ್ಕನೆ ಮೂಲಿಗೆ ನಾಕೇನೆ ಬಸವಣ್ಣ
ನಾಲ್ಕಾಕ್ಕೆ ನಾಲ್ಕೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಮು||
ನಾಲ್ಕಾಕ್ಕೆ ನಾಲ್ಕೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಹಿ||

ನಾಲ್ಕಾಕ್ಕೆ ನಾಲ್ಕೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಮು||
ನಾಲ್ಕಾಕ್ಕೆ ನಾಲ್ಕೆ ಶಿವಗಂಟೆ ಕೋಲು ಕೋಲನ್ನ ಕೋಲೆ ||ಹಿ||

ನಾಲ್ಕಾಕ್ಕೆ ನಾಲ್ಕೆ ಶಿವಗಂಟೆ ಪದಕ
ಸಾಕ್ಷತ್ ಶಿವನಾ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಸಾಕ್ಷತ್ ಶಿವನಾ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಐದೇನೆ ಮೂಲಿಗೆ ಐದೇನೆ ಶಿವಾಗಂಟೆ
ಐದಕ್ಕೆ ಐದೆ ಶಿವಾಗಂಟೆ ಕೋಲು ಕೋಲನ್ನ ಕೋಲೆ ||ಮು||
ಐದಕ್ಕೆ ಐದೆ ಶಿವಾಗಂಟೆ ಕೋಲು ಕೋಲನ್ನ ಕೋಲೆ ||ಹಿ||

ಐದಕ್ಕೆ ಐದೆ ಶಿವಾಗಂಟೆ ಕೋಲು ಕೋಲನ್ನ ಕೋಲೆ ||ಮು||
ಐದಕ್ಕೆ ಐದೆ ಶಿವಾಗಂಟೆ ಕೋಲು ಕೋಲನ್ನ ಕೋಲೆ ||ಹಿ||

ಕಳಸದ ಚಂಬ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕಳಸದ ಚಂಬ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಕಳಸದ ಚಂಬ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕಳಸದ ಚಂಬ ನಿಲ್ಲಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಕಳಸದ ಚಂಬ ನಡವಿಟ್ಟೆ ಕೋಲು ಕೋಲನ್ನ ಕೋಲೆ ||ಮು||
ಕಳಸದ ಚಂಬ ನಡವಿಟ್ಟೆ ಕೋಲು ಕೋಲನ್ನ ಕೋಲೆ ||ಹಿ||

ಕಂದನಾಽ..... ತೊಟ್ಟಿಲ ಮುಗಿದಾವೆ ಕೋಲು ಕೋಲನ್ನ ಕೋಲೆ ||ಮು||
ಕಂದನಾಽ..... ತೊಟ್ಟಿಲ ಮುಗಿದಾವೆ ಕೋಲು ಕೋಲನ್ನ ಕೋಲೆ ||ಹಿ||

ಕಂದನಾಽ..... ತೊಟ್ಟಿಲ ಮುಗಿದಾವೆ ಕೋಲು ಕೋಲನ್ನ ಕೋಲೆ ||ಮು||
ಕಂದನಾಽ..... ತೊಟ್ಟಿಲ ಮುಗಿದಾವೆ ಕೋಲು ಕೋಲನ್ನ ಕೋಲೆ ||ಹಿ||

ಹೆಗಲಮ್ಯಾಲೆ ಬಡಿಗೇರ ಹೊತ್ತಾನೆ ಕೋಲು ಕೋಲನ್ನ ಕೋಲೆ ||ಮು||
ಹೆಗಲಮ್ಯಾಲೆ ಬಡಿಗೇರ ಹೊತ್ತಾನೆ ಕೋಲು ಕೋಲನ್ನ ಕೋಲೆ ||ಹಿ||

ಹೆಗಲಮ್ಯಾಲೆ ಬಡಿಗೇರ ಹೊತ್ತಾನೆ ಕೋಲು ಕೋಲನ್ನ ಕೋಲೆ ||ಮು||
ಹೆಗಲಮ್ಯಾಲೆ ಬಡಿಗೇರ ಹೊತ್ತಾನೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣರ ಅರಮನಿಗೆ ಬಂದಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣರ ಅರಮನಿಗೆ ಬಂದಾನೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣರರಾಮನಿಗೆ ಬಂದಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣರರಾಮನಿಗೆ ಬಂದಾನೆ ಕೋಲು ಕೋಲನ್ನ ಕೋಲೆ ||ಹಿ||

ಪಡಸಾಲಿಗೆ ತೊಟ್ಲಾ ಇಳಿವ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಪಡಸಾಲಿಗೆ ತೊಟ್ಲಾ ಇಳಿವ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಪಡಸಾಲಿಗೆ ತೊಟ್ಲಾ ಇಳಿವ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಪಡಸಾಲಿಗೆ ತೊಟ್ಲಾ ಇಳಿವ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಹಾಲು ಅನ್ನವಾ ಉಣನೀಡೆ ಕೋಲು ಕೋಲನ್ನ ಕೋಲೆ ||ಮು||
ಹಾಲು ಅನ್ನವಾ ಉಣನೀಡೆ ಕೋಲು ಕೋಲನ್ನ ಕೋಲೆ ||ಹಿ||

ಹಾಲು ಅನ್ನವಾ ಉಣನೀಡೆ ಕೋಲು ಕೋಲನ್ನ ಕೋಲೆ ||ಮು||
ಹಾಲು ಅನ್ನವಾ ಉಣನೀಡೆ ಕೋಲು ಕೋಲನ್ನ ಕೋಲೆ ||ಹಿ||

ಮುತ್ತು ರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಮು||
ಮುತ್ತು ರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಹಿ||

ಮುತ್ತು ರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಮು||
ಮುತ್ತು ರತ್ನವಾ ಉಡಿಯಕ್ಕಿ ಕೋಲು ಕೋಲನ್ನ ಕೋಲೆ ||ಹಿ||

ಗಂಧದ ಇಳೇವೆ ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಮು||
ಗಂಧದ ಇಳೇವೆ ಕೊಟ್ಟಾರೆ ಕೋಲು ಕೋಲನ್ನ ಕೋಲೆ ||ಹಿ||

ಹೋಗಿ ಬರುತೀನಿ ಧರ್ಮಣ್ಣಾ ಕೋಲು ಕೋಲನ್ನ ಕೋಲೆ ||ಮು||
ಹೋಗಿ ಬರುತೀನಿ ಧರ್ಮಣ್ಣಾ ಕೋಲು ಕೋಲನ್ನ ಕೋಲೆ ||ಹಿ||

ಹೋಗಿ ಬರುತೀನಿ ಧರ್ಮಣ್ಣಾ ಕೋಲು ಕೋಲನ್ನ ಕೋಲೆ ||ಮು||
ಹೋಗಿ ಬರುತೀನಿ ಧರ್ಮಣ್ಣಾ ಕೋಲು ಕೋಲನ್ನ ಕೋಲೆ ||ಹಿ||

ಅಪ್ಪಣೆ ಕೊಟ್ಟ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಅಪ್ಪಣೆ ಕೊಟ್ಟ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಅಪ್ಪಣೆ ಕೊಟ್ಟ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ಅಪ್ಪಣೆ ಕೊಟ್ಟ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ತನ್ನ ಪಟ್ಟಣಕ್ಕೆ ನಡೆದಾನೆ ಕೋಲು ಕೋಲನ್ನ ಕೋಲೆ ||ಮು||
ತನ್ನ ಪಟ್ಟಣಕ್ಕೆ ನಡೆದಾನೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದಾ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದಾ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದಾ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದಾ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಸಣ್ಣ ಸಣ್ಣದೊಂಟು ಆರಿಸಿಕೊಂಡು ಬರ್ರೇ ಕೋಲು ಕೋಲನ್ನ ಕೋಲೆ ||ಮು||
ಸಣ್ಣ ಸಣ್ಣದೊಂಟು ಆರಿಸಿಕೊಂಡು ಬರ್ರೇ ಕೋಲು ಕೋಲನ್ನ ಕೋಲೆ ||ಹಿ||

ಸಣ್ಣ ಸಣ್ಣದೊಂಟು ಆರಿಸಿಕೊಂಡು ಬರ್ರೇ ಕೋಲು ಕೋಲನ್ನ ಕೋಲೆ ||ಮು||
ಸಣ್ಣ ಸಣ್ಣದೊಂಟು ಆರಿಸಿಕೊಂಡು ಬರ್ರೇ ಕೋಲು ಕೋಲನ್ನ ಕೋಲೆ ||ಹಿ||

ಬೆಂಡೀನಾ ಸಾಮಾನಾ ಮಾಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಬೆಂಡೀನಾ ಸಾಮಾನಾ ಮಾಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಬೆಂಡೀನಾ ಸಾಮಾನಾ ಮಾಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಬೆಂಡೀನಾ ಸಾಮಾನಾ ಮಾಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ದೊಡ್ಡೇನೆ ಅರಿವ್ಯಾನಕ ತುಂಬ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ದೊಡ್ಡೇನೆ ಅರಿವ್ಯಾನಕ ತುಂಬ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ದೊಡ್ಡೇನೆ ಅರಿವ್ಯಾನಕ ತುಂಬ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ದೊಡ್ಡೇನೆ ಅರಿವ್ಯಾನಕ ತುಂಬ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣಾ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣಾ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣಾ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣಾ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರ ಅರಮನಿಗೆ ಹೋಗಿ ಬರ್ರೇ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರ ಅರಮನಿಗೆ ಹೋಗಿ ಬರ್ರೇ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರ ಅರಮನಿಗೆ ಹೋಗಿ ಬರ್ರೇ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರ ಅರಮನಿಗೆ ಹೋಗಿ ಬರ್ರೇ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರರ ಸೊಸ್ತಿರರನ ಕರೆದು ಬರ್ರೇ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರರ ಸೊಸ್ತಿರರನ ಕರೆದು ಬರ್ರೇ ಕೋಲು ಕೋಲನ್ನ ಕೋಲೆ ||ಹಿ||

ಊರಿಗೆ ಡಂಗುರ ಸಾರಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಊರಿಗೆ ಡಂಗುರ ಸಾರಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮರ ಮನಿಯಾಗೆ ತೊಟ್ಲ ನೋಡೆ ಕೋಲು ಕೋಲನ್ನ ಕೋಲೆ ||ಮು||
ಧರ್ಮರ ಮನಿಯಾಗೆ ತೊಟ್ಲ ನೋಡೆ ಕೋಲು ಕೋಲನ್ನ ಕೋಲೆ ||ಹಿ||

ಬಡವರು ಬಗ್ಗರು ಬರಬೇಕೆ ಕೋಲು ಕೋಲನ್ನ ಕೋಲೆ ||ಮು||
ಬಡವರು ಬಗ್ಗರು ಬರಬೇಕೆ ನೋಡೆ ಕೋಲು ಕೋಲನ್ನ ಕೋಲೆ ||ಹಿ||

ಬಡವರು ಬಗ್ಗರು ಬರಬೇಕೆ ಕೋಲು ಕೋಲನ್ನ ಕೋಲೆ ||ಮು||
ಬಡವರು ಬಗ್ಗರು ಬರಬೇಕೆ ನೋಡೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಏನೊಂದೆ ನುಡಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಅಣ್ಣಾನೆಂಡರಿಗೆ ಹೇಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಅಣ್ಣಾನೆಂಡರಿಗೆ ಹೇಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಅಣ್ಣಾನೆಂಡರಿಗೆ ಹೇಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಅಣ್ಣಾನೆಂಡರಿಗೆ ಹೇಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಹೇಗೆ ಹೋಗುತೀರೋ ಹಾಗೆ ಬರ್ರೇ ಕೋಲು ಕೋಲನ್ನ ಕೋಲೆ ||ಮು||
ಹೇಗೆ ಹೋಗುತೀರೋ ಹಾಗೆ ಬರ್ರೇ ಕೋಲು ಕೋಲನ್ನ ಕೋಲೆ ||ಹಿ||

ಹೇಗೆ ಹೋಗುತೀರೋ ಹಾಗೆ ಬರ್ರೇ ಕೋಲು ಕೋಲನ್ನ ಕೋಲೆ ||ಮು||
ಹೇಗೆ ಹೋಗುತೀರೋ ಹಾಗೆ ಬರ್ರೇ ಕೋಲು ಕೋಲನ್ನ ಕೋಲೆ ||ಹಿ||

ಯಾವುದು ನೀವು ಅನ್ನಬ್ಯಾಡ್ರೆ ಕೋಲು ಕೋಲನ್ನ ಕೋಲೆ ||ಮು||
ಯಾವುದು ನೀವು ಅನ್ನಬ್ಯಾಡ್ರೆ ಕೋಲು ಕೋಲನ್ನ ಕೋಲೆ ||ಹಿ||

ಯಾವುದು ನೀವು ಅನ್ನಬ್ಯಾಡ್ರೆ ಕೋಲು ಕೋಲನ್ನ ಕೋಲೆ ||ಮು||
ಯಾವುದು ನೀವು ಅನ್ನಬ್ಯಾಡ್ರೆ ಕೋಲು ಕೋಲನ್ನ ಕೋಲೆ ||ಹಿ||

ದೊಡ್ಡ ಅರಿವ್ಯಾನ ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಮು||
ದೊಡ್ಡ ಅರಿವ್ಯಾನ ಹೊತ್ತರವ್ವಾ ಕೋಲು ಕೋಲನ್ನ ಕೋಲೆ ||ಹಿ||

ದ್ರೌಪತಿ ಮೈಯ ತೊಳೆದಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ದ್ರೌಪತಿ ಮೈಯ ತೊಳೆದಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೂಸೀನಾ ಮೈಯ ತೊಳೆದಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಕೂಸೀನಾ ಮೈಯ ತೊಳೆದಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೂಸೀಗೆ ಅಂಗಿ ತೊಡಿಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಕೂಸೀಗೆ ಅಂಗಿ ತೊಡಿಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

## ೩. ಅವ್ವಣೆವ್ವ ಕಾವ್ಯ (೧೧)

ಬರುತೀಯೆನಪ್ಪಾ ಹೋಗಾನ ಕೋಲು ಕೋಲನ್ನ ಕೋಲೆ ||ಮು||
ಬರುತೀಯೆನಪ್ಪಾ ಹೋಗಾನ ಕೋಲು ಕೋಲನ್ನ ಕೋಲೆ ||ಹಿ||

ಬರುತೀನಿ ನಡೆಯೋ ನಮ್ಮ ತಾತ ಕೋಲು ಕೋಲನ್ನ ಕೋಲೆ ||ಮು||
ಬರುತೀನಿ ನಡೆಯೋ ನಮ್ಮ ತಾತ ಕೋಲು ಕೋಲನ್ನ ಕೋಲೆ ||ಹಿ||

ಗರುಡ ಗಂಭಕ್ಕೆ ಹೋಯ್ದಾನೆ ಕೋಲು ಕೋಲನ್ನ ಕೋಲೆ ||ಮು||
ಗರುಡ ಗಂಭಕ್ಕೆ ಹೋಯ್ದಾನೆ ಕೋಲು ಕೋಲನ್ನ ಕೋಲೆ ||ಹಿ||

ಶಕುನಿ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಶಕುನಿ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಎರಡು ಕಣ್ಣು ನಿನ್ನವೇ ಕಟ್ಟಬೇಕೆ ಕೋಲು ಕೋಲನ್ನ ಕೋಲೆ ||ಮು||
ಎರಡು ಕಣ್ಣು ನಿನ್ನವೇ ಕಟ್ಟಬೇಕೆ ಕೋಲು ಕೋಲನ್ನ ಕೋಲೆ ||ಹಿ||

ಗರುಡ ಗಂಭಕ್ಕೆ ಮ್ಯಾಲೆ ಹತ್ತಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಗರುಡ ಗಂಭಕ್ಕೆ ಮ್ಯಾಲೆ ಹತ್ತಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಓಡೋಡಿ ಅವನಾ ಬಂದಾನೆ ಕೋಲು ಕೋಲನ್ನ ಕೋಲೆ ||ಮು||
ಓಡೋಡಿ ಅವನಾ ಬಂದಾನೆ ಕೋಲು ಕೋಲನ್ನ ಕೋಲೆ ||ಹಿ||

ಗರಡಿ ಮನಿಯಾಗೆ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಗರಡಿ ಮನಿಯಾಗೆ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಭೀಮಾನ ಹೋಗಿ ಎಬ್ಬಿಸ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಭೀಮಾನ ಹೋಗಿ ಎಬ್ಬಿಸ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ನಿನ್ನ ಮ್ಯಾಲೆ ವೈರಿ ಬಂದಾವೆ ಕೋಲು ಕೋಲನ್ನ ಕೋಲೆ ||ಮು||
ನಿನ್ನ ಮ್ಯಾಲೆ ವೈರಿ ಬಂದಾವೆ ಕೋಲು ಕೋಲನ್ನ ಕೋಲೆ ||ಹಿ||

ಹೋಗಾನ ಬಾರೋ ಗಜಭೀಮ ಕೋಲು ಕೋಲನ್ನ ಕೋಲೆ ||ಮು||
ಹೋಗಾನ ಬಾರೋ ಗಜಭೀಮ ಕೋಲು ಕೋಲನ್ನ ಕೋಲೆ ||ಹಿ||

ಹೇಡಿ ಧರ್ಮರ ನೀವೇನಾ ಕೋಲು ಕೋಲನ್ನ ಕೋಲೆ ||ಮು||
ಹೇಡಿ ಧರ್ಮರ ನೀವೇನಾ ಕೋಲು ಕೋಲನ್ನ ಕೋಲೆ ||ಹಿ||

ಭಂಡ ಧರ್ಮರ ನೀವೇನಾ ಕೋಲು ಕೋಲನ್ನ ಕೋಲೆ ||ಮು||
ಭಂಡ ಧರ್ಮರ ನೀವೇನಾ ಕೋಲು ಕೋಲನ್ನ ಕೋಲೆ ||ಹಿ||

ಭೀಮಾಗೆ ಸಿಟ್ಟು ಬಂದಾವೆ ಕೋಲು ಕೋಲನ್ನ ಕೋಲೆ ||ಮು||
ಭೀಮಾಗೆ ಸಿಟ್ಟು ಬಂದಾವೆ ಕೋಲು ಕೋಲನ್ನ ಕೋಲೆ ||ಹಿ||

ನಡೆಯಪ್ಪ ಮಾವ ಹೋಗೋಣ ಕೋಲು ಕೋಲನ್ನ ಕೋಲೆ ||ಮು||
ನಡೆಯಪ್ಪ ಮಾವ ಹೋಗೋಣ ಕೋಲು ಕೋಲನ್ನ ಕೋಲೆ ||ಹಿ||

ನಡೆಯಪ್ಪ ಮಾವ ಹೋಗೋಣ ಕೋಲು ಕೋಲನ್ನ ಕೋಲೆ ||ಮು||
ನಡೆಯಪ್ಪ ಮಾವ ಹೋಗೋಣ ಕೋಲು ಕೋಲನ್ನ ಕೋಲೆ ||ಹಿ||

ಭೀಮಾನ ಕೊಣ್ಣ ಬಂಡಿಗಾಲಿ ಕೋಲು ಕೋಲನ್ನ ಕೋಲೆ ||ಮು||
ಭೀಮಾನ ಕೊಣ್ಣ ಬಂಡಿಗಾಲಿ ಕೋಲು ಕೋಲನ್ನ ಕೋಲೆ ||ಹಿ||

ನಿನ್ನ ಕೊಣ್ಣ ನೋಡಿದರೆ ಹೆದರುತಾರೆ ಕೋಲು ಕೋಲನ್ನ ಕೋಲೆ ||ಮು||
ನಿನ್ನ ಕೊಣ್ಣ ನೋಡಿದರೆ ಹೆದರುತಾರೆ ಕೋಲು ಕೋಲನ್ನ ಕೋಲೆ ||ಹಿ||

ಕೊಣ್ಣಿಗೆ ಧೂಳ ಬೀಳತಾವೆ ಕೋಲು ಕೋಲನ್ನ ಕೋಲೆ ||ಮು||
ಕೊಣ್ಣಿಗೆ ಧೂಳ ಬೀಳತಾವೆ ಕೋಲು ಕೋಲನ್ನ ಕೋಲೆ ||ಹಿ||

ಎಲ್ಡು ಕೊಣ್ಣುಗಳಾ ಕಟ್ಟುತೀನಿ ಕೋಲು ಕೋಲನ್ನ ಕೋಲೆ ||ಮು||
ಎಲ್ಡು ಕೊಣ್ಣುಗಳಾ ಕಟ್ಟುತೀನಿ ಕೋಲು ಕೋಲನ್ನ ಕೋಲೆ ||ಹಿ||

ರಣಗಂಭದ ಮುಂದೆ ಹೋಯ್ದಾನೆ ಕೋಲು ಕೋಲನ್ನ ಕೋಲೆ ||ಮು||
ರಣಗಂಭದ ಮುಂದೆ ಹೋಯ್ದಾನೆ ಕೋಲು ಕೋಲನ್ನ ಕೋಲೆ ||ಹಿ||

ಸೇದಿಯ್ಯಾಽ..... ಬಾಣ ಬಿಟ್ಟಾನೆ ಕೋಲು ಕೋಲನ್ನ ಕೋಲೆ ||ಮು||
ಸೇದಿಯ್ಯಾಽ..... ಬಾಣ ಬಿಟ್ಟಾನೆ ಕೋಲು ಕೋಲನ್ನ ಕೋಲೆ ||ಹಿ||

ದಿಂಬಾ ಕೆಳಕ್ಕೆ ಬಿದ್ದೈತೆ ಕೋಲು ಕೋಲನ್ನ ಕೋಲೆ ||ಮು||
ದಿಂಬಾ ಕೆಳಕ್ಕೆ ಬಿದ್ದೈತೆ ಕೋಲು ಕೋಲನ್ನ ಕೋಲೆ ||ಹಿ||

ಕಂಭದ ಮ್ಯಾಲೆ ರುಂಡ ಐತೆ ಕೋಲು ಕೋಲನ್ನ ಕೋಲೆ ||ಮು||
ಕಂಭದ ಮ್ಯಾಲೆ ರುಂಡ ಐತೆ ಕೋಲು ಕೋಲನ್ನ ಕೋಲೆ ||ಹಿ||

ಎಂತಾಟ ಹೊಡೆದೆ ನಮ್ಮಪ್ಪಾ ಕೋಲು ಕೋಲನ್ನ ಕೋಲೆ ||ಮು||
ಎಂತಾಟ ಹೊಡೆದೆ ನಮ್ಮಪ್ಪಾ ಕೋಲು ಕೋಲನ್ನ ಕೋಲೆ ||ಹಿ||

ಎಂತಾಟ ಹೊಡೆದೆ ನಮ್ಮಪ್ಪಾ ಕೋಲು ಕೋಲನ್ನ ಕೋಲೆ ||ಮು||
ಎಂತಾಟ ಹೊಡೆದೆ ನಮ್ಮಪ್ಪಾ ಕೋಲು ಕೋಲನ್ನ ಕೋಲೆ ||ಹಿ||

ಎಲ್ಡು ಕೊಣ್ಣುಗಳಾ ಬಿಚ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಎಲ್ಡು ಕೊಣ್ಣುಗಳಾ ಬಿಚ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಭೀಮ ಬೋರ್ಯಾಡಿ ಅಳುತಾನೆ ಕೋಲು ಕೋಲನ್ನ ಕೋಲೆ ||ಮು||
ಭೀಮ ಬೋರ್ಯಾಡಿ ಅಳುತಾನೆ ಕೋಲು ಕೋಲನ್ನ ಕೋಲೆ ||ಹಿ||

ನಿನ್ನ ಉರಿಗಳಾ ನಾನೇನೇ ಕೊಯ್ದಿದ್ದೆ ಕೋಲು ಕೋಲನ್ನ ಕೋಲೆ ||ಮು||
ನಿನ್ನ ಉರಿಗಳಾ ನಾನೇನೇ ಕೊಯ್ದಿದ್ದೆ ಕೋಲು ಕೋಲನ್ನ ಕೋಲೆ ||ಹಿ||

ನನ್ನ ಹಾದ್ಯಾಕೆ ಮುಡಿ ಮಗನೆ ಕೋಲು ಕೋಲನ್ನ ಕೋಲೆ ||ಮು||
ನನ್ನ ಹಾದ್ಯಾಕೆ ಮುಡಿ ಮಗನೆ ಕೋಲು ಕೋಲನ್ನ ಕೋಲೆ ||ಹಿ||

ನನ್ನೇನೇ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಮು||
ನನ್ನೇನೇ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಹಿ||

ನಿನ್ನೇನೇ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿನ್ನೇನೇ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ನಕುಲ ಸಹದೇವ ಬಂದರವ್ವಾ ಕೋಲು ಕೋಲನ್ನ ಕೋಲೆ ||ಮು||
ನಕುಲ ಸಹದೇವ ಬಂದರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಉಡಿಗಳಾ ಅವರಿನ್ನಾ ಒಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಉಡಿಗಳಾ ಅವರಿನ್ನಾ ಒಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಮ್ಮೆನಾ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಮು||
ನಮ್ಮೆನಾ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮೆನಾ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿಮ್ಮೆನಾ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಅರ್ಜುನನಾದರೆ ಬಂದನವ್ವಾ ಕೋಲು ಕೋಲನ್ನ ಕೋಲೆ ||ಮು||
ಅರ್ಜುನನಾದರೆ ಬಂದನವ್ವಾ ಕೋಲು ಕೋಲನ್ನ ಕೋಲೆ ||ಹಿ||

ನನ್ನೇನಾ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಮು||
ನನ್ನೇನಾ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಹಿ||

ನಿಮ್ಮೇನಾ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿಮ್ಮೇನಾ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ಉಡಿಯಾ ಒಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಉಡಿಯಾ ಒಡ್ಯಾನವ್ವಾ ಕೋಲು ಕೋಲನ್ನ ಕೋಲೆ ||ಹಿ||

ನನ್ನೇನೇ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಮು||
ನನ್ನೇನೇ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಹಿ||

ನಿನ್ನೇನೇ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿನ್ನೇನೇ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ದ್ರೌಪತಿ ಉಡಿಗಳಾ ಒಡ್ಯಾಳ್ಳವ್ವಾ ಕೋಲು ಕೋಲನ್ನ ಕೋಲೆ ||ಮು||
ದ್ರೌಪತಿ ಉಡಿಗಳಾ ಒಡ್ಯಾಳ್ಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನನ್ನ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಮು||
ನನ್ನ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಹಿ||

ನಿನ್ನ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿನ್ನ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಕೊಂತೆವ್ವಾ ಸೆರಗು ಒಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಮು||
ಕೊಂತೆವ್ವಾ ಸೆರಗು ಒಡ್ಯಾಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ನನ್ನ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಮು||
ನನ್ನ ಉಡಿಯಾಕೆ ಬೀಳಮಗನೆ ಕೋಲು ಕೋಲನ್ನ ಕೋಲೆ ||ಹಿ||

ನಿನ್ನ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಿನ್ನ ಉಡಿಯಾಕೆ ಬೀಳಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಯಾರ ಉಡಿಯಾಕೆ ಬೀಳತೀಯಾ ಕೋಲು ಕೋಲನ್ನ ಕೋಲೆ ||ಮು||
ಯಾರ ಉಡಿಯಾಕೆ ಬೀಳತೀಯಾ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರಾ ಮನಿಯಾಗೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರಾ ಮನಿಯಾಗೆ ಅವ್ವಣೆವ್ವ ಕೋಲು ಕೋಲನ್ನ ಕೋಲೆ ||ಹಿ||

ನಮ್ಮ ತಾಯಿನಾ ಕರಿಸಬೇಕೇ ಕೋಲು ಕೋಲನ್ನ ಕೋಲೆ ||ಮು||
ನಮ್ಮ ತಾಯಿನಾ ಕರಿಸಬೇಕೇ ಕೋಲು ಕೋಲನ್ನ ಕೋಲೆ ||ಹಿ||

ನಮ್ಮ ತಾಯಿಗೆ ಲಗ್ನ ಮಾಡಬೇಕೇ ಕೋಲು ಕೋಲನ್ನ ಕೋಲೆ ||ಮು||
ನಮ್ಮ ತಾಯಿಗೆ ಲಗ್ನ ಮಾಡಬೇಕೇ ಕೋಲು ಕೋಲನ್ನ ಕೋಲೆ ||ಹಿ||

ತಾಯಿ ಉಡಿಯಾಕೆ ಬೀಳತೀನಿ ಕೋಲು ಕೋಲನ್ನ ಕೋಲೆ ||ಮು||
ತಾಯಿ ಉಡಿಯಾಕೆ ಬೀಳತೀನಿ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರು ಓಡೋಡಿ ಬಂದರಾವ್ವಾ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರು ಓಡೋಡಿ ಬಂದರಾವ್ವಾ ಕೋಲು ಕೋಲನ್ನ ಕೋಲೆ ||ಹಿ||

ಆಕೇನೆ ಅವ್ವಣೆವ್ವ ಬಂದಳವ್ವಾ ಕೋಲು ಕೋಲನ್ನ ಕೋಲೆ ||ಮು||
ಆಕೇನೆ ಅವ್ವಣೆವ್ವ ಬಂದಳವ್ವಾ ಕೋಲು ಕೋಲನ್ನ ಕೋಲೆ ||ಹಿ||

ಬೋರ್ಯಾಡಿ ಅವ್ವಣೆವ್ವ ಅಳುತಾಳೆ ಕೋಲು ಕೋಲನ್ನ ಕೋಲೆ ||ಮು||
ಬೋರ್ಯಾಡಿ ಅವ್ವಣೆವ್ವ ಅಳುತಾಳೆ ಕೋಲು ಕೋಲನ್ನ ಕೋಲೆ ||ಹಿ||

ಕಳವೀಲೆ ನಿನ್ನ ಹಡದಿದ್ದೆ ಕೋಲು ಕೋಲನ್ನ ಕೋಲೆ ||ಮು||
ಕಳವೀಲೆ ನಿನ್ನ ಹಡದಿದ್ದೆ ಕೋಲು ಕೋಲನ್ನ ಕೋಲೆ ||ಹಿ||

ನೀನು ಹುಟ್ಟಿ ಬಯಲಿಗೆ ತಂದಿಯಲ್ಲಾ ಕೋಲು ಕೋಲನ್ನ ಕೋಲೆ ||ಮು||
ನೀನು ಹುಟ್ಟಿ ಬಯಲಿಗೆ ತಂದಿಯಲ್ಲಾ ಕೋಲು ಕೋಲನ್ನ ಕೋಲೆ ||ಹಿ||

ಭೀಮಾಗ ಅವ್ವಣೆವ್ವೆಗೆ ಲಗ್ನ ನೋಡೆ ಕೋಲು ಕೋಲನ್ನ ಕೋಲೆ ||ಮು||
ಭೀಮಾಗ ಅವ್ವಣೆವ್ವೆಗೆ ಲಗ್ನ ನೋಡೆ ಕೋಲು ಕೋಲನ್ನ ಕೋಲೆ ||ಹಿ||

ತಂದೆ ತಾಯಿಗೆ ಲಗ್ನ ನೋಡೆ ಕೋಲು ಕೋಲನ್ನ ಕೋಲೆ ||ಮು||
ತಂದೆ ತಾಯಿಗೆ ಲಗ್ನ ನೋಡೆ ಕೋಲು ಕೋಲನ್ನ ಕೋಲೆ ||ಹಿ||

ತಾಯಿ ಉಡಿಯಾಕೆ ಬಿದ್ದನವ್ವಾ ಕೋಲು ಕೋಲನ್ನ ಕೋಲೆ ||ಮು||
ತಾಯಿ ಉಡಿಯಾಕೆ ಬಿದ್ದನವ್ವಾ ಕೋಲು ಕೋಲನ್ನ ಕೋಲೆ ||ಹಿ||

ದಿಂಬಕ್ಕೆ ರುಂಡ ಹೊಂದಿಸ್ಯಾರೆ ಕೋಲು ಕೋಲನ್ನ ಕೋಲೆ ||ಮು||
ದಿಂಬಕ್ಕೆ ರುಂಡ ಹೊಂದಿಸ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಸಿರಿಗಂಧದ ಕಟ್ಟಿಗೆ ಹೊಂದಿಸ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಸಿರಿಗಂಧದ ಕಟ್ಟಿಗೆ ಹೊಂದಿಸ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಬೊಬ್ಬಲಿನಾ ಅದರಾಗ ಇಟ್ಟರವ್ವಾ ಕೋಲು ಕೋಲನ್ನ ಕೋಲೆ ||ಮು||
ಬೊಬ್ಬಲಿನಾ ಅದರಾಗ ಇಟ್ಟರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಒಂದೊಂದು ಕಟ್ಟಿಗೆ ಹೊಂದಿಸ್ಯಾರೆ ಕೋಲು ಕೋಲನ್ನ ಕೋಲೆ ||ಮು||
ಒಂದೊಂದು ಕಟ್ಟಿಗೆ ಹೊಂದಿಸ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ಡಬ್ಬಿ ಸುಮಣಿ ಎಣ್ಣೆ ಸುರಿವ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಡಬ್ಬಿ ಸುಮಣಿ ಎಣ್ಣೆ ಸುರಿವ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಬೆಂಕಿ ಇಟ್ಟಾರೆ ಬೊಬ್ಬಲಿಗೆ ಕೋಲು ಕೋಲನ್ನ ಕೋಲೆ ||ಮು||
ಬೆಂಕಿ ಇಟ್ಟಾರೆ ಬೊಬ್ಬಲಿಗೆ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಬೋರಾಡಿ ಅಳುತ್ತಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಬೋರಾಡಿ ಅಳುತ್ತಾಳೆ ಕೋಲು ಕೋಲನ್ನ ಕೋಲೆ ||ಹಿ||

ಎಲ್ಲರೂ ಬೋರಾಡಿ ಅಳುತ್ತಾರೆ ಕೋಲು ಕೋಲನ್ನ ಕೋಲೆ ||ಮು||
ಎಲ್ಲರೂ ಬೋರಾಡಿ ಅಳುತ್ತಾರೆ ಕೋಲು ಕೋಲನ್ನ ಕೋಲೆ ||ಹಿ||

ಅಂತಮಗ ಹೋದಮ್ಯಾಲೆ
ನಾವ್ಯಾಕೆ ಇರಬೇಕೆಂದೇ ಕಿಚ್ಚಿನಾಕೆ ಹಾರ್ಯಾರಿ ಹೆಗರ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ನಾವ್ಯಾಕೆ ಇರಬೇಕೆಂದೇ ಕಿಚ್ಚಿನಾಕೆ ಹಾರ್ಯಾರಿ ಹೆಗರ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕಿಚ್ಚಿನಾಕೆ ಹಾರ್ಯಾರಿ ಹೆಗರ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಕಿಚ್ಚಿನಾಕೆ ಹಾರ್ಯಾರಿ ಹೆಗರ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರೂ ಎಲ್ಲರೂ ಹೆಗರ್ಯಾರೆ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರೂ ಎಲ್ಲರೂ ಹೆಗರ್ಯಾರೆ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರಾ ವಂಶ ಸುಟ್ಟು ಹೋಯಿತೋ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರಾ ವಂಶ ಸುಟ್ಟು ಹೋಯಿತೋ ಕೋಲು ಕೋಲನ್ನ ಕೋಲೆ ||ಹಿ||

ಅವ್ವಣೆವ್ವ ಒಬ್ಬಾಕೆ ಉಳಿದಾಳೆ ಕೋಲು ಕೋಲನ್ನ ಕೋಲೆ ||ಮು||
ಅವ್ವಣೆವ್ವ ಒಬ್ಬಾಕೆ ಉಳಿದಾಳೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮರ ಕುಲದಾಕೆ ಬಿದ್ದಾಳೆ ಕೋಲು ಕೋಲನ್ನ ಕೋಲೆ ||ಮು||
ಧರ್ಮರ ಕುಲದಾಕೆ ಬಿದ್ದಾಳೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮರ ವಂಶ ಉಳಿದೈತೆ ಕೋಲು ಕೋಲನ್ನ ಕೋಲೆ ||ಮು||
ಧರ್ಮರ ವಂಶ ಉಳಿದೈತೆ ಕೋಲು ಕೋಲನ್ನ ಕೋಲೆ ||ಹಿ||

ಇಲ್ಲಿಗೆ ಸಂದಮೂಗಿದಾವೆ ಕೋಲು ಕೋಲನ್ನ ಕೋಲೆ ||ಮು||
ಇಲ್ಲಿಗೆ ಸಂದಮೂಗಿದಾವೆ ಕೋಲು ಕೋಲನ್ನ ಕೋಲೆ ||ಹಿ||

## ೩. ಅವ್ವಣೆವ್ವ ಕಾವ್ಯ (೧೧)

ದ್ರೌಪತಿಗೆ ನಾಣ್ಯದ ಸೀರೆ ಉಡಿಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ದ್ರೌಪತಿಗೆ ನಾಣ್ಯದ ಸೀರೆ ಉಡಿಸ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ನಡುಮನಿಗೆ ತೊಟ್ಟಿಲ ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ನಡುಮನಿಗೆ ತೊಟ್ಟಿಲ ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ರೆಡ್ಡೇರ ಸೊಸ್ತಿರ ಬಂದರವ್ವಾ ಕೋಲು ಕೋಲನ್ನ ಕೋಲೆ ||ಮು||
ರೆಡ್ಡೇರ ಸೊಸ್ತಿರ ಬಂದರವ್ವಾ ಕೋಲು ಕೋಲನ್ನ ಕೋಲೆ ||ಹಿ||

ತೊಟ್ಟಿಲದಾಗ ಹಾಸಿಗಿ ಮಾಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ತೊಟ್ಟಿಲದಾಗ ಹಾಸಿಗಿ ಮಾಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹೊಸ ಸೀರೆ ಹೊಸ ಕುಬುಸ ಉಟ್ಟರವ್ವಾ ಕೋಲು ಕೋಲನ್ನ ಕೋಲೆ ||ಮು||
ಹೊಸ ಸೀರೆ ಹೊಸ ಕುಬುಸ ಉಟ್ಟರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಹೊಸ ಸೀರೆ ಹೊಸ ಕುಬುಸ ಉಟ್ಟರವ್ವಾ ಕೋಲು ಕೋಲನ್ನ ಕೋಲೆ ||ಮು||
ಹೊಸ ಸೀರೆ ಹೊಸ ಕುಬುಸ ಉಟ್ಟರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೈಯಾಗ ಕಂಕಣ ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಕೈಯಾಗ ಕಂಕಣ ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೈಯಾಗ ಕಂಕಣ ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಕೈಯಾಗ ಕಂಕಣ ಕಟ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ತೊಟ್ಟಿಲ ಪೂಜಿ ಮಾಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ತೊಟ್ಟಿಲ ಪೂಜಿ ಮಾಡ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಕೂಸೀನಾ ತೊಟ್ಲಾಕ ಹಾಕ್ಯಾರವ್ವಾ ಕೋಲು ಕೋಲನ್ನ ಕೋಲೆ ||ಮು||
ಕೂಸೀನಾ ತೊಟ್ಲಾಕ ಹಾಕ್ಯಾರವ್ವಾ ಕೋಲು ಕೋಲನ್ನ ಕೋಲೆ ||ಹಿ||

ಜೋ ಜೋ ಅಂದಾಳೆ ಗೋಪಿ ಜೋ ಜೋ
ಆ ನಾಡ ಬಿಳಿಜ್ವಾಳ, ಈ ನಾಡ ಬಿಳಿಜ್ವಾಳ
ದಾನ ಧರ್ಮರ ಬಿಳಿಜ್ವಾಳ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ದಾನ ಧರ್ಮರ ಬಿಳಿಜ್ವಾಳ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ದಾನ ಧರ್ಮರ ಬಿಳಿಜ್ವಾಳ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ದಾನ ಧರ್ಮರ ಬಿಳಿಜ್ವಾಳ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಜ್ವಾಳ ಗುಗ್ಗರಿಗೆ ಹಾಕ್ಯಾರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಜ್ವಾಳ ಗುಗ್ಗರಿಗೆ ಹಾಕ್ಯಾರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಪಟ್ಟಣಶಾಲ್ಯಾಗೆ ಸುರಿವ್ಯಾರೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಪಟ್ಟಣಶಾಲ್ಯಾಗೆ ಸುರಿವ್ಯಾರೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಆ ನಾಡ ಬಿಳ್ವಾಳ ಈ ನಾಡ ಬಿಳಿಜ್ವಾಳ
ಸತ್ಯಧರ್ಮರ ಬಿಳಿಜ್ವಾಳ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಸತ್ಯಧರ್ಮರ ಬಿಳಿಜ್ವಾಳ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಅಕ್ಕ ಗುಗ್ಗರಿ ಹಾಕ್ಯಾಳಲ್ಲಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಅಕ್ಕ ಗುಗ್ಗರಿ ಹಾಕ್ಯಾಳಲ್ಲಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಪಟ್ಟಣಶಾಲ್ಯಾಗೆ ಸುರಿವ್ಯಾರೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಪಟ್ಟಣಶಾಲ್ಯಾಗೆ ಸುರಿವ್ಯಾರೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಅವರು ಐದು ಮಂದಿಗೆ ಉಡಿಯಾ ತುಂಬಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಅವರು ಐದು ಮಂದಿಗೆ ಉಡಿಯಾ ತುಂಬಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಅವರು ಕರಿಸಿಪ್ಪಿನಾ ಕಾಯಿ ಒಡೆದಾರೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಅವರು ಕರಿಸಿಪ್ಪಿನಾ ಕಾಯಿ ಒಡೆದಾರೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಉದ್ದಿನ ಕಡ್ಡಿ ಹಚ್ಯಾರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಉದ್ದಿನ ಕಡ್ಡಿ ಹಚ್ಯಾರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ನಾಲಾರು ತೊಟ್ಲಾತೂಗಲು ನಿಂತರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ನಾಲಾರು ತೊಟ್ಲಾತೂಗಲು ನಿಂತರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಅವ್ವಣೆವ್ವ ಏನೊಂದೆ ನುಡಿದಾಳವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಅವ್ವಣೆವ್ವ ಏನೊಂದೆ ನುಡಿದಾಳವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಸತ್ಯನಮ್ಮ ಧರ್ಮರ ಸತ್ಯುಳ್ಳರಾದರೆ,
ಬಂಗಾರ ಸಾಮಾನ ಜಡಿಯಬಾರದೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಬಂಗಾರ ಸಾಮಾನ ಜಡಿಯಬಾರದೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಕೂಸೀನಾ ಮೈ ಮ್ಯಾಲೆ ಜಡಿದಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಕೂಸೀನಾ ಮೈ ಮ್ಯಾಲೆ ಜಡಿದಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಆ ನಾಡ ಸಿರಿಗಂಧ ಈ ನಾಡ ಸಿರಿಗಂಧ
ಸತ್ಯಧರ್ಮರ ಸಿರಿಗಂಧ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಸತ್ಯಧರ್ಮರ ಸಿರಿಗಂಧ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ತನುವಾದ ಅಡಿಗೆ ಮಾಡ್ಯಾರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ತನುವಾದ ಅಡಿಗೆ ಮಾಡ್ಯಾರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಆ ನಾಡ ಸಿರಿಗಂಧ ಈ ನಾಡ ಸಿರಿಗಂಧ
ದಾನ ಧರ್ಮರ ಸಿರಿಗಂಧ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ದಾನ ಧರ್ಮರ ಸಿರಿಗಂಧ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ವಾಲೀಯಾ ಕಿವಿಯಾಕಿ ಒಳಗೇನು ಮಾಡುತಿ
ಬಾಲನಾ ಹೆಸರ ಏನೆಂದು ಇಡುತಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಬಾಲನಾ ಹೆಸರ ಏನೆಂದು ಇಡುತಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಧರ್ಮಣ್ಣ ಬಾಲನ ಹೆಸರು ಏನೆಂದು ಇಡುತಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಧರ್ಮಣ್ಣ ಬಾಲನ ಹೆಸರು ಏನೆಂದು ಇಡುತಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಕಪ್ಪಿನ ಕಿವಿಯಾಕಿ ಮತ್ತೇನು ಮಾಡುತಿ
ಪುತ್ರನಾ ಹೆಸರು ಏನೆಂದು ಇಡುತಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಪುತ್ರನಾ ಹೆಸರು ಏನೆಂದು ಇಡುತಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಪುತ್ರನಾ ಹೆಸರು ಏನೆಂದು ಇಡುತಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಪುತ್ರನಾ ಹೆಸರು ಏನೆಂದು ಇಡುತಿ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಕೊಂತೆವ್ವನ ಕೇಳಿ ಹೆಸರಿಡರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಕೊಂತೆವ್ವನ ಕೇಳಿ ಹೆಸರಿಡರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಕೊಂತೆವ್ವನ ಕೇಳಿ ಹೆಸರಿಡರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಕೊಂತೆವ್ವನ ಕೇಳಿ ಹೆಸರಿಡರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಕೊಂತೆವ್ವ ಕೂಸೀನ ಹೆಸರು ಏನಿಡಬೇಕೇ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಕೊಂತೆವ್ವ ಕೂಸೀನ ಹೆಸರು ಏನಿಡಬೇಕೇ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಹಾದ್ಯಾಗ ಹುಟ್ಟಿದೋನು ಬೀದ್ಯಾಗ ಬೆಳೆದೋನು
ಬೊಬ್ಬಲಿ ಎಂದು ಕರೆಯಿರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಬೊಬ್ಬಲಿ ಎಂದು ಕರೆಯಿರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

'ಬೊಬ್ಬಲಿ' ಎಂದು ಕರೆಯಿರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
'ಬೊಬ್ಬಲಿ' ಎಂದು ಕರೆಯಿರವ್ವಾ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಅವರು ಬೊಬ್ಬಲಿ ಎಂದು ಕರೆದರೆ ಜೋ ಜೋ..... ಅಂದಾಳೆ ಗೋಪಿ ಜೋ ಜೋ ||ಮು||
ಅವರು ಬೊಬ್ಬಲಿ ಎಂದು ಕರೆದರೆ ಜೋ ಜೋ.....ಅಂದಾಳೆ ಗೋಪಿ ಜೋ ಜೋ ||ಹಿ||

ಅವರು ತೊಟ್ಲನ ಕೈಬಿಟ್ಟು ನಿಂತಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಅವರು ತೊಟ್ಲನ ಕೈಬಿಟ್ಟು ನಿಂತಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಕೂಸೀನಾ ಮಾರಿ ನೋಡ್ಯಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಕೂಸೀನಾ ಮಾರಿ ನೋಡ್ಯಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ರೆಡ್ಡೇರಾ ಸೊಸ್ತಿರ ಏನ ನುಡಿದೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ರೆಡ್ಡೇರಾ ಸೊಸ್ತಿರ ಏನ ನುಡಿದೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಕಣ್ಣು ಕೊಂತೆವ್ವನಂಗಾ ಬೆನ್ನು ಭೀಮನಂಗೆ
ಮುಖ ನೋಡಿದರೆ ಅವ್ವಣೆವ್ವನಂಗೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಮುಖ ನೋಡಿದರೆ ಅವ್ವಣೆವ್ವನಂಗೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಮುಖ ನೋಡಿದರೆ ಅವ್ವಣೆವ್ವನಂಗೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಮುಖ ನೋಡಿದರೆ ಅವ್ವಣೆವ್ವನಂಗೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಧರ್ಮಣ್ಣಗೆ ಸಿಟ್ಟು ಬಂದಾನವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಧರ್ಮಣ್ಣಗೆ ಸಿಟ್ಟು ಬಂದಾನವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಅವರು ಹೊಸ ಸೀರೆ ಕುಬುಸ ಕಸಕೊಂಡೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಅವರು ಹೊಸ ಸೀರೆ ಕುಬುಸ ಕಸಕೊಂಡೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಉಡಿಯಾಳ ಉಡಿಯಕ್ಕಿ ಕಸಕೊಂಡೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಉಡಿಯಾಳ ಉಡಿಯಕ್ಕಿ ಕಸಕೊಂಡೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಕೈಯಾಗಳ ಕಂಕಣ ಬಿಚ್ಚಿಕೊಂಡೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಕೈಯಾಗಳ ಕಂಕಣ ಬಿಚ್ಚಿಕೊಂಡೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಅವರು ಅತಗಂತ ಕರಕಂತ ಹೋಗ್ಯಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಅವರು ಅತಗಂತ ಕರಕಂತ ಹೋಗ್ಯಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಅವ್ವಣೆವ್ವನ ಮುಂದೆ ಹೇಳ್ಯಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಅವ್ವಣೆವ್ವನ ಮುಂದೆ ಹೇಳ್ಯಾರವ್ವ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಸಮ್ಮನೆ ಹೋಗಿ ಬರಬೇಕಿತ್ತೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಸಮ್ಮನೆ ಹೋಗಿ ಬರಬೇಕಿತ್ತೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ಮನ್ಯಾಗ ಹೇಳಿ ಕಳವಿದ್ದೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ಮನ್ಯಾಗ ಹೇಳಿ ಕಳವಿದ್ದೆ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ನಿಮ್ಮ ಗಂಡರ ಹೇಸರೇಳಿರಮ್ಮ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಮು||
ನಿಮ್ಮ ಗಂಡರ ಹೇಸರೇಳಿರಮ್ಮ ಜೋ ಜೋ ಅಂದಾಳೆ ಗೋಪಿ ಜೋ ಜೋ ||ಹಿ||

ದರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ದರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ದರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ದರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಒಂದೆ ದಿನ ಅಂಬೋದೆ ಒಂದು ತಿಂಗಳಾಗಿ
ಎರಡೆ ದಿನ ಅಂಬೋದೆ ಎರಡೇ ತಿಂಗಳಾ ಕೋಲು ಕೋಲನ್ನ ಕೋಲೆ ||ಮು||

ಎರಡೆ ದಿನ ಅಂಬೋದು ಎರಡೇ ತಿಂಗಳಾ ಕೋಲು ಕೋಲನ್ನ ಕೋಲೆ ||ಮು||
ಎರಡೆ ದಿನ ಅಂಬೋದು ಎರಡೇ ತಿಂಗಳಾ ಕೋಲು ಕೋಲನ್ನ ಕೋಲೆ ||ಹಿ||

ಮೂರು ದಿನ ಅಂಬೋದು ಮೂರು ತಿಂಗಳಾ ಕೋಲು ಕೋಲನ್ನ ಕೋಲೆ ||ಮು||
ಮೂರು ದಿನ ಅಂಬೋದು ಮೂರು ತಿಂಗಳಾ ಕೋಲು ಕೋಲನ್ನ ಕೋಲೆ ||ಹಿ||

ನಾಕು ದಿನ ಅಂಬೋದು ನಾಕು ತಿಂಗಳಾ ಕೋಲು ಕೋಲನ್ನ ಕೋಲೆ ||ಮು||
ನಾಕು ದಿನ ಅಂಬೋದು ನಾಕು ತಿಂಗಳಾ ಕೋಲು ಕೋಲನ್ನ ಕೋಲೆ ||ಹಿ||

ಒಂಬತ್ತು ವರುಷಾದ ಬೊಬ್ಬಲಿ ಕೋಲು ಕೋಲನ್ನ ಕೋಲೆ ||ಮು||
ಒಂಬತ್ತು ವರುಷಾದ ಬೊಬ್ಬಲಿ ಕೋಲು ಕೋಲನ್ನ ಕೋಲೆ ||ಹಿ||

ಊರೋಟು ಹೆಜ್ಜೆ ಮಾಡತಾನೆ ಕೋಲು ಕೋಲನ್ನ ಕೋಲೆ ||ಮು||
ಊರೋಟು ಹೆಜ್ಜೆ ಮಾಡತಾನೆ ಕೋಲು ಕೋಲನ್ನ ಕೋಲೆ ||ಹಿ||

ತಪ್ಪು ಹೆಜ್ಜೆ ಬೊಬ್ಬಲಿ ಇಡತಾನೆ ಕೋಲು ಕೋಲನ್ನ ಕೋಲೆ ||ಮು||
ತಪ್ಪು ಹೆಜ್ಜೆ ಬೊಬ್ಬಲಿ ಇಡತಾನೆ ಕೋಲು ಕೋಲನ್ನ ಕೋಲೆ ||ಹಿ||

ತಪ್ಪು ಹೆಜ್ಜೆ ಬೊಬ್ಬಲಿ ಇಡತಾನೆ ಕೋಲು ಕೋಲನ್ನ ಕೋಲೆ ||ಮು||
ತಪ್ಪು ಹೆಜ್ಜೆ ಬೊಬ್ಬಲಿ ಇಡತಾನೆ ಕೋಲು ಕೋಲನ್ನ ಕೋಲೆ ||ಹಿ||

ತಾಯಿಗೆ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ತಾಯಿಗೆ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಬಿಲ್ಲು ಕೊಡವ್ವ ಹಡದವ್ವ ಕೋಲು ಕೋಲನ್ನ ಕೋಲೆ ||ಮು||
ಬಿಲ್ಲು ಕೊಡವ್ವ ಹಡದವ್ವ ಕೋಲು ಕೋಲನ್ನ ಕೋಲೆ ||ಹಿ||

ಬ್ಯಾಟ್ಯಾಡಿs..... ನಾನು ಬರತೀನಿ ಕೋಲು ಕೋಲನ್ನ ಕೋಲೆ ||ಮು||
ಬ್ಯಾಟ್ಯಾಡಿs..... ನಾನು ಬರತೀನಿ ಕೋಲು ಕೋಲನ್ನ ಕೋಲೆ ||ಹಿ||

ಬಿಲ್ಲು ಕೊಟ್ಟಾಳೆ ದ್ರೌಪತಿ ಕೋಲು ಕೋಲನ್ನ ಕೋಲೆ ||ಮು||
ಬಿಲ್ಲು ಕೊಟ್ಟಾಳೆ ದ್ರೌಪತಿ ಕೋಲು ಕೋಲನ್ನ ಕೋಲೆ ||ಹಿ||

ಕಳ್ಳಿಸಾಲ್ಯಾಕ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಕಳ್ಳಿಸಾಲ್ಯಾಕ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ದೊನ್ನಿಯಾಕಾಟ ಹೊಡೆದಾನೆ ಕೋಲು ಕೋಲನ್ನ ಕೋಲೆ ||ಮು||
ದೊನ್ನಿಯಾಕಾಟ ಹೊಡೆದಾನೆ ಕೋಲು ಕೋಲನ್ನ ಕೋಲೆ ||ಹಿ||

ಆಡಿ ಬಂದೀನಿ ಹಡದವ್ವ ಕೋಲು ಕೋಲನ್ನ ಕೋಲೆ ||ಮು||
ಆಡಿ ಬಂದೀನಿ ಹಡದವ್ವ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ಧರ್ಮಣ್ಣ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಶಾಲಿಗೆ ನಾವೇ ಕಳಿಸಬೇಕೇ ಕೋಲು ಕೋಲನ್ನ ಕೋಲೆ ||ಮು||
ಶಾಲಿಗೆ ನಾವೇ ಕಳಿಸಬೇಕೇ ಕೋಲು ಕೋಲನ್ನ ಕೋಲೆ ||ಹಿ||

ಶಾಲಿಗೆ ನಾವೇ ಕಳಿಸಬೇಕೇ ಕೋಲು ಕೋಲನ್ನ ಕೋಲೆ ||ಮು||
ಶಾಲಿಗೆ ನಾವೇ ಕಳಿಸಬೇಕೇ ಕೋಲು ಕೋಲನ್ನ ಕೋಲೆ ||ಹಿ||

ಶಾಲಿಗೆ ಧರ್ಮಣ್ಣ ಕಳಿವ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಶಾಲಿಗೆ ಧರ್ಮಣ್ಣ ಕಳಿವ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಒಂದು ಬರೆ ಅಂದ್ರೆ ಎರಡು ಬರೆದ ಕೋಲು ಕೋಲನ್ನ ಕೋಲೆ ||ಮು||
ಒಂದು ಬರೆ ಅಂದ್ರೆ ಎರಡು ಬರೆದ ಕೋಲು ಕೋಲನ್ನ ಕೋಲೆ ||ಹಿ||

ಶಾಲಿ ಅಯ್ಯಗೆ ಕಲಿಸ್ತಾನೆ ಕೋಲು ಕೋಲನ್ನ ಕೋಲೆ ||ಮು||
ಶಾಲಿ ಅಯ್ಯಗೆ ಕಲಿಸ್ತಾನೆ ಕೋಲು ಕೋಲನ್ನ ಕೋಲೆ ||ಹಿ||

ಯಾರ ಮಗನಪ್ಪ ಮೊಮ್ಮಗನೆ ಕೋಲು ಕೋಲನ್ನ ಕೋಲೆ ||ಮು||
ಯಾರ ಮಗನಪ್ಪ ಮೊಮ್ಮಗನೆ ಕೋಲು ಕೋಲನ್ನ ಕೋಲೆ ||ಹಿ||

ಧರ್ಮರ ಮಗನೆ ನಾನೇನಾ ಕೋಲು ಕೋಲನ್ನ ಕೋಲೆ ||ಮು||
ಧರ್ಮರ ಮಗನೆ ನಾನೇನಾ ಕೋಲು ಕೋಲನ್ನ ಕೋಲೆ ||ಹಿ||

ನಮ್ಮಿಗೆ ಓದು ಕಲಿಸ್ತೀಯಾ ಕೋಲು ಕೋಲನ್ನ ಕೋಲೆ ||ಮು||
ನಮ್ಮಿಗೆ ಓದು ಕಲಿಸ್ತೀಯಾ ಕೋಲು ಕೋಲನ್ನ ಕೋಲೆ ||ಹಿ||

ಶಾಲೀಗೆ ನೀನೆ ಬರಬ್ಯಾಡ ಕೋಲು ಕೋಲನ್ನ ಕೋಲೆ ||ಮು||
ಶಾಲೀಗೆ ನೀನೆ ಬರಬ್ಯಾಡ ಕೋಲು ಕೋಲನ್ನ ಕೋಲೆ ||ಹಿ||

ತನ್ನ ಅರಮನಿಗೆ ಬಂದಾನೆ ಕೋಲು ಕೋಲನ್ನ ಕೋಲೆ ||ಮು||
ತನ್ನ ಅರಮನಿಗೆ ಬಂದಾನೆ ಕೋಲು ಕೋಲನ್ನ ಕೋಲೆ ||ಹಿ||

ಜಳಕ ಮಾಡ್ಯಾನೆ ಬೊಬ್ಬಲಿ ಕೋಲು ಕೋಲನ್ನ ಕೋಲೆ ||ಮು||
ಜಳಕ ಮಾಡ್ಯಾನೆ ಬೊಬ್ಬಲಿ ಕೋಲು ಕೋಲನ್ನ ಕೋಲೆ ||ಹಿ||

ಊಟ ಮಾಡ್ಯಾನೆ ಬೊಬ್ಬಲಿ ಕೋಲು ಕೋಲನ್ನ ಕೋಲೆ ||ಮು||
ಊಟ ಮಾಡ್ಯಾನೆ ಬೊಬ್ಬಲಿ ಕೋಲು ಕೋಲನ್ನ ಕೋಲೆ ||ಹಿ||

ತಾಯಿಗೆ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಮು||
ತಾಯಿಗೆ ಏನೊಂದೆ ನುಡಿದಾನೆ ಕೋಲು ಕೋಲನ್ನ ಕೋಲೆ ||ಹಿ||

ಸರ್ಪ ಬಾಣವಾ ಕೊಡಬೇಕೆ ಕೋಲು ಕೋಲನ್ನ ಕೋಲೆ ||ಮು||
ಸರ್ಪ ಬಾಣವಾ ಕೊಡಬೇಕೆ ಕೋಲು ಕೋಲನ್ನ ಕೋಲೆ ||ಹಿ||

ದೂರ ನೀನಾದರೆ ಹೋಗಬ್ಯಾಡ ಕೋಲು ಕೋಲನ್ನ ಕೋಲೆ ||ಮು||
ದೂರ ನೀನಾದರೆ ಹೋಗಬ್ಯಾಡ ಕೋಲು ಕೋಲನ್ನ ಕೋಲೆ ||ಹಿ||

ಮಗನಿಗೆ ಬಾಣ ಕೊಟ್ವಾಳೆ ಕೋಲು ಕೋಲನ್ನ ಕೋಲೆ ||ಮು||
ಮಗನಿಗೆ ಬಾಣ ಕೊಟ್ವಾಳೆ ಕೋಲು ಕೋಲನ್ನ ಕೋಲೆ ||ಹಿ||

ಹೆಗಲಮ್ಯಾಲೆ ಇಟಕಂದೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಹೆಗಲಮ್ಯಾಲೆ ಇಟಕಂದೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಊರ ಹೊರಗೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಮು||
ಊರ ಹೊರಗೆ ಹೋಗ್ಯಾನೆ ಕೋಲು ಕೋಲನ್ನ ಕೋಲೆ ||ಹಿ||

ಸ್ವಾದರ ಮಾವ ಶಕುನಿಯಾ ಕೋಲು ಕೋಲನ್ನ ಕೋಲೆ ||ಮು||
ಸ್ವಾದರ ಮಾವ ಶಕುನಿಯಾ ಕೋಲು ಕೋಲನ್ನ ಕೋಲೆ ||ಹಿ||

ಬೊಬ್ಬುಲಿಗೆ ಏನೊಂದೆ ಕೇಳ್ತಾನೆ ಕೋಲು ಕೋಲನ್ನ ಕೋಲೆ ||ಮು||
ಬೊಬ್ಬುಲಿಗೆ ಏನೊಂದೆ ಕೇಳ್ತಾನೆ ಕೋಲು ಕೋಲನ್ನ ಕೋಲೆ ||ಹಿ||

ಯಾರ ಮಗನಪ್ಪ ಮೊಮ್ಮಗಾ ಕೋಲು ಕೋಲನ್ನ ಕೋಲೆ ||ಮು||
ಯಾರ ಮಗನಪ್ಪ ಮೊಮ್ಮಗಾ ಕೋಲು ಕೋಲನ್ನ ಕೋಲೆ ||ಹಿ||

ಬೊಬ್ಬುಲಿ ಹೆಸರು ಹೇಳಲಿಲ್ಲ ಕೋಲು ಕೋಲನ್ನ ಕೋಲೆ ||ಮು||
ಬೊಬ್ಬುಲಿ ಹೆಸರು ಹೇಳಲಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಕೆರೆಯಂಗಳದಾಕ ಬರುತ್ತಿಯಾ ಏನೋ ಕೋಲು ಕೋಲನ್ನ ಕೋಲೆ ||ಮು||
ಕೆರೆಯಂಗಳದಾಕ ಬರುತ್ತಿಯಾ ಏನೋ ಕೋಲು ಕೋಲನ್ನ ಕೋಲೆ ||ಹಿ||

ನಿನ್ನಮ್ಯಾಲೆ ವೈರಿ ಬಂದಾನಪ್ಪ ಕೋಲು ಕೋಲನ್ನ ಕೋಲೆ ||ಮು||
ನಿನ್ನಮ್ಯಾಲೆ ವೈರಿ ಬಂದಾನಪ್ಪ ಕೋಲು ಕೋಲನ್ನ ಕೋಲೆ ||ಹಿ||

ಬರ್ತೀನಿ ನಡೆಯೆ ನಮ್ಮ ತಾತ ಕೋಲು ಕೋಲನ್ನ ಕೋಲೆ ||ಮು||
ಬರ್ತೀನಿ ನಡೆಯೆ ನಮ್ಮ ತಾತ ಕೋಲು ಕೋಲನ್ನ ಕೋಲೆ ||ಹಿ||

ಕೆರೆಯಂಗಳದಾಕ ಹೋಗ್ಯಾನವ್ವಾ ಕೋಲು ಕೋಲನ್ನ ಕೋಲೆ ||ಮು||
ಕೆರೆಯಂಗಳದಾಕ ಹೋಗ್ಯಾನವ್ವಾಕೋಲು ಕೋಲನ್ನ ಕೋಲೆ ||ಹಿ||

ಆಲುಮರದಡಿಯಲ್ಲಿ ಮಲಿಗ್ಯಾನವ್ವ ಕೋಲು ಕೋಲನ್ನ ಕೋಲೆ ||ಮು||
ಆಲುಮರದಡಿಯಲ್ಲಿ ಮಲಿಗ್ಯಾನವ್ವ ಕೋಲು ಕೋಲನ್ನ ಕೋಲೆ ||ಹಿ||

ಶಕುನಿ ಏನೊಂದೆ ನುಡಿದಾನವ್ವ ಕೋಲು ಕೋಲನ್ನ ಕೋಲೆ ||ಮು||
ಶಕುನಿ ಏನೊಂದೆ ನುಡಿದಾನವ್ವ ಕೋಲು ಕೋಲನ್ನ ಕೋಲೆ ||ಹಿ||

ಸೇದಿಯನ್ನ ಬಾಣ ಬಿಟ್ಟನವ್ವ ಕೋಲು ಕೋಲನ್ನ ಕೋಲೆ ||ಮು||
ಸೇದಿಯನ್ನ ಬಾಣ ಬಿಟ್ಟನವ್ವ ಕೋಲು ಕೋಲನ್ನ ಕೋಲೆ ||ಹಿ||

ಎಲೆಗಳೆಲ್ಲವು ಉದಿರ್ಯಾವವ್ವ ಕೋಲು ಕೋಲನ್ನ ಕೋಲೆ ||ಮು||
ಎಲೆಗಳೆಲ್ಲವು ಉದಿರ್ಯಾವವ್ವ ಕೋಲು ಕೋಲನ್ನ ಕೋಲೆ ||ಹಿ||

ಐದೇನೆ ಎಲೆಗಳು ಉಳಿದಾವವ್ವ ಕೋಲು ಕೋಲನ್ನ ಕೋಲೆ ||ಮು||
ಐದೇನೆ ಎಲೆಗಳು ಉಳಿದಾವವ್ವ ಕೋಲು ಕೋಲನ್ನ ಕೋಲೆ ||ಹಿ||

ಐದು$_{s.....}$ ಎಲೆಗಳಾ$_{s.....}$ ಉಳಿದಾವವ್ವ ಕೋಲು ಕೋಲನ್ನ ಕೋಲೆ ||ಮು||
ಐದು$_{s.....}$ ಎಲೆಗಳಾ$_{s.....}$ ಉಳಿದಾವವ್ವ ಕೋಲು ಕೋಲನ್ನ ಕೋಲೆ ||ಹಿ||

ಐದು ಎಲೆಗಳು ಯಾರವ್ವು$_{s.....}$ ಮೊಮ್ಮಗನೆ ಕೋಲು ಕೋಲನ್ನ ಕೋಲೆ ||ಮು||
ಐದು ಎಲೆಗಳು ಯಾರವ್ವು$_{s.....}$ ಮೊಮ್ಮಗನೆ ಕೋಲು ಕೋಲನ್ನ ಕೋಲೆ ||ಹಿ||

ನಮ್ಮಪ್ಪನೋರೆ ಧರ್ಮಾರೆ ಕೋಲು ಕೋಲನ್ನ ಕೋಲೆ ||ಮು||
ನಮ್ಮಪ್ಪನೋರೆ ಧರ್ಮಾರೆ ಕೋಲು ಕೋಲನ್ನ ಕೋಲೆ ||ಹಿ||

ಅವರಾ ಹೆಸರುಗಳಾ ಹೇಳೇನಪ್ಪಾ ಕೋಲು ಕೋಲನ್ನ ಕೋಲೆ ||ಮು||
ಅವರಾ ಹೆಸರುಗಳಾ ಹೇಳೇನಪ್ಪಾ ಕೋಲು ಕೋಲನ್ನ ಕೋಲೆ ||ಹಿ||

ನಕುಲ ಸಹದೇವ ನೋಡೆತಾತ ಕೋಲು ಕೋಲನ್ನ ಕೋಲೆ ||ಮು||
ನಕುಲ ಸಹದೇವ ನೋಡೆತಾತ ಕೋಲು ಕೋಲನ್ನ ಕೋಲೆ ||ಹಿ||

ಭೀಮ ಅರ್ಜುನ ನೋಡೆ ತಾತ ಕೋಲು ಕೋಲನ್ನ ಕೋಲೆ ||ಮು||
ಭೀಮ ಅರ್ಜುನ ನೋಡೆ ತಾತ ಕೋಲು ಕೋಲನ್ನ ಕೋಲೆ ||ಹಿ||

ನಮ್ಮ ತಂದೆ ಆದ್ರೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಮು||
ನಮ್ಮ ತಂದೆ ಆದ್ರೆ ಧರ್ಮಣ್ಣ ಕೋಲು ಕೋಲನ್ನ ಕೋಲೆ ||ಹಿ||

ಮೋಸ ಮಾಡುತ್ತಾನೆ ಶಕುನಿಯಾ ಕೋಲು ಕೋಲನ್ನ ಕೋಲೆ ||ಮು||
ಮೋಸ ಮಾಡುತ್ತಾನೆ ಶಕುನಿಯಾ ಕೋಲು ಕೋಲನ್ನ ಕೋಲೆ ||ಹಿ||

ನಮ್ಮನ್ನು ಇವನು ಉಳಿಸಾದಿಲ್ಲ ಕೋಲು ಕೋಲನ್ನ ಕೋಲೆ ||ಮು||
ನಮ್ಮನ್ನು ಇವನು ಉಳಿಸಾದಿಲ್ಲ ಕೋಲು ಕೋಲನ್ನ ಕೋಲೆ ||ಹಿ||

ಗರುಡ ಗಂಭಕೆ ಒಯ್ಯಾಬೇಕೆ ಕೋಲು ಕೋಲನ್ನ ಕೋಲೆ ||ಮು||
ಗರುಡ ಗಂಭಕೆ ಒಯ್ಯಾಬೇಕೆ ಕೋಲು ಕೋಲನ್ನ ಕೋಲೆ ||ಹಿ||

ವೈರಿ ಬಂದಾವ್ಡೆ s..... ಮೊಮ್ಮಗನೆ ಕೋಲು ಕೋಲನ್ನ ಕೋಲೆ ||ಮು||
ವೈರಿ ಬಂದಾವ್ಡೆ s..... ಮೊಮ್ಮಗನೆ ಕೋಲು ಕೋಲನ್ನ ಕೋಲೆ ||ಹಿ||

## ೪. ಮಂಗಳಾರತಿ ಹಾಡು

ಭೀಮಾನ ಕುದುರೆಗೆ ಏನೇನೋ ಸಿಂಗಾರ ಬಂಗಾರದ ಜೂಲು ಹಾಕ್ಯಾರೆ ಹೇಳಮ್ಮಯೋ,
ಬಂಗಾರದ ಜೂಲು ಹಾಕ್ಯಾರೆ ಹೇಳಮ್ಮಯೋ ||ಮು||
ಬಂಗಾರದ ಜೂಲು ಹಾಕ್ಯಾರೆ ಹೇಳಮ್ಮಯೋ ||ಹಿ||

ಕಡ್ಲಿಯಾ ತಿಂಬೋದೆ ಹಿಪ್ಪಿ ಮಾಡಿ ಉಗುಳೋದೇ ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಮು||
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಹಿ||

ಅರ್ಜುನನ ಕುದುರೆಗೆ ಏನೇನೋ ಸಿಂಗಾರ ಅರಿಶಿನ ಜೂಲು ಹಾಕ್ಯಾರೇ ನೋಡು ಅಮ್ಮಯೋ
ಅರಿಶಿನ ಜೂಲು ಹಾಕ್ಯಾರೇ ನೋಡು ಅಮ್ಮಯೋ ||ಮು||
ಅರಿಶಿನ ಜೂಲು ಹಾಕ್ಯಾರೇ ನೋಡು ಅಮ್ಮಯೋ ||ಹಿ||

ಕಡ್ಲಿಯಾ ತಿಂಬೋದೆ ಹಿಪ್ಪಿ ಮಾಡಿ ಉಗುಳೋದೇ ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಮು||
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಹಿ||

ನಕುಲನಾ ಕುದುರೆಗೆ ಏನೇನೋ ಸಿಂಗಾರ ಬೆಳ್ಳಿಯ ಜೂಲು ಹಾಕ್ಯಾರೇ ನೋಡು ಅಮ್ಮಯೋ
ಬೆಳ್ಳಿಯ ಜೂಲು ಹಾಕ್ಯಾರೇ ನೋಡು ಅಮ್ಮಯೋ ||ಮು||
ಬೆಳ್ಳಿಯ ಜೂಲು ಹಾಕ್ಯಾರೇ ನೋಡು ಅಮ್ಮಯೋ ||ಹಿ||

ಕಡ್ಲಿಯಾ ತಿಂಬೋದೆ ಹಿಪ್ಪಿ ಮಾಡಿ ಉಗುಳೋದೇ ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಮು||
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಹಿ||

ಸಹದೇವನಾ ಕುದುರೆಗೆ ಏನೇನೋ ಸಿಂಗಾರ ಬೆಳ್ಳಿಯ ಜೂಲು ಹಾಕ್ಯಾರೇ ನೋಡು ಅಮ್ಮಯೋ
ಬೆಳ್ಳಿಯ ಜೂಲು ಹಾಕ್ಯಾರೇ ನೋಡು ಅಮ್ಮಯೋ ||ಮು||
ಬೆಳ್ಳಿಯ ಜೂಲು ಹಾಕ್ಯಾರೇ ನೋಡು ಅಮ್ಮಯೋ ||ಹಿ||

ಕಡ್ಲಿಯಾ ತಿಂಬೋದೆ ಹಿಪ್ಪಿ ಮಾಡಿ ಉಗುಳೋದೇ ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಮು||
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಹಿ||

ಧರ್ಮರಾಯನಾ ಕುದುರೆಗೆ ಏನೇನೋ ಸಿಂಗಾರ ಬೆಳ್ಳಿಯ ಜೂಲು ಹಾಕ್ಯಾರೇ ನೋಡು ಅಮ್ಮಯೋ
ಬೆಳ್ಳಿಯ ಜೂಲು ಹಾಕ್ಯಾರೇ ನೋಡು ಅಮ್ಮಯೋ ||ಮು||
ಬೆಳ್ಳಿಯ ಜೂಲು ಹಾಕ್ಯಾರೇ ನೋಡು ಅಮ್ಮಯೋ ||ಹಿ||

ಕಡ್ಲಿಯಾ ತಿಂಬೋದೆ ಹಿಪ್ಪಿ ಮಾಡಿ ಉಗುಳೋದೇ ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಮು||
ಗಗನಕ್ಕೆ ಕಾಲು ಕೆದರದೇ ನೋಡು ಅಮ್ಮಯೋ ||ಹಿ||

ಸತ್ಯಧರ್ಮರ ಛತ್ರಿ ಹಿಡಿದು ಬರುವಾಗ,
ಬಂಗಾರದ ಗಂಟೆ ನುಡಿದಾವೆ ನೋಡು ಅಮ್ಮಯೋ ||ಮು||
ಬಂಗಾರದ ಗಂಟೆ ನುಡಿದಾವೆ ನೋಡು ಅಮ್ಮಯೋ ||ಹಿ||

ಸಂದ ಮುಗಿದಾವೆಂದೇ ರಂಬೆಯ ಮಂಚವಿಳಿದೇ ||ಮು||
ಸಂದ ಮುಗಿದಾವೆಂದೇ ರಂಬೆಯ ಮಂಚವಿಳಿದೇ ||ಹಿ||

**ಹರಕೆಯ ಹಾಡು**

ಹುಲುಗಮ್ಮಗೆ ದಾನ ಧರ್ಮದ ದಯ್ಯೆ ಽ.... ವಿರಲಿ ಸೋಬಾನವೇ ಸೋ||
ಹುಲುಗಮ್ಮಗೆ ಕುಮಾರಾಮಾನಂಥ ಮಕ್ಕ ಽ.... ಳಿರಲಿ ಸೋಬಾನವೇ ಸೋ||
ಹುಲುಗಮ್ಮಗೆ ಕಂಪಲಿಯಂಥ ಮೊಮ್ಮಕ್ಕಳಿರಲಿ ಸೋಬಾನವೇ ಸೋ||

ಗಂಜಿಯ ಸೀರೆನುಟ್ಟೆ ಗಂಧದ ಬೊಟ್ಟೆನಿಟ್ಟೆ
ಅರಮಂದ್ಯಾಗೆ ನಡೆಸಾವೆ ಸೋಬಾನವೇ ಸೋ||

ಅಯ್ಯಮ್ಮಗೆ ದಾನ ಧರ್ಮದ ದಯ್ಯೆ ಽ..... ವಿರಲಿ ಸೋಬಾನವೇ ಸೋ||
ಅಯ್ಯಮ್ಮಗೆ ಮುತ್ತಿನ ತೊಲಬಾಗಿಲ ತಗ್ಯಾ ಽ..... ವಿರಲಿ ಸೋಬಾನವೇ ಸೋ||
ಅಯ್ಯಮ್ಮಗೆ ಲ್ಲಿದೊಳತ್ವದಯ್ಯೆ ಽ..... ವಿರಲಿ ಸೋಬಾನವೇ ಸೋ||

ಹಾದ್ಯಾಗೆ ಏ ನಿನ್ನದೇ ಬೀದ್ಯಾಗೆ ಏ ನಿನ್ನದೇ
ಹತ್ತುಮಂದ್ಯಾಗೆ ಈ ಹಾಡ ನಮಗೆ ಕಲಿ ಽ..... ಸ್ಯಾಳೆ ಕಣಿಮವ್ವ ಸೋಬಾನವೇ ಸೋ||

ಕಣಿಮವ್ವ ಈ ಹಾಡೆ ನಮಗೆ ಕಲಿ ಽ..... ಸ್ಯಾಳೆ ಸೋಬಾನವೇ ಸೋ||
ಗ್ಯಾನಿದ್ದವ್ವನವರೇ ಕಲಿ ಽ..... ಬರ್ರೇ ಸೋಬಾನವೇ ಸೋ||

ಕಟ್ಯಾಗೆ ಏ ನಿನ್ನದೇ ಬೀಟ್ಯಾಗ ಏ ನಿನ್ನದೇ
ಹತ್ತುಮಂದ್ಯಾಗೆ ನಿನ್ನs..... ಹಾಡೇ ಸೋಬಾನವೇ ಸೋ॥

ಕಣಿಮವ್ವ ಈ ಹಾಡೆ ನಮಗೆ ಕಲಿಸ್ಯಾಳೆ ಸೋಬಾನವೇ ಸೋ॥
ಇಚ್ಚಿದವ್ವನವರೇ ಕಲಿಬರ್ರೇ ಸೋಬಾನವೇ ಸೋ॥

ಹತ್ತಿಯ ಎಲೆಯಂಗೆ, ಜತ್ತೀಲಿ ಸೋ ಅಂಬಾಕೆ,
ಕಂಚಿನ ಸೀರೆ ಉಡಲವ್ವಾ ಸೋಬಾನವೇ ಸೋ॥

ಹುಲುಗಮ್ಮಗೆ ಹೂವಿನ ಸೀರೆ ಉಡ ಕೊಡಿರೆ ಸೋಬಾನವೇ ಸೋ॥
ಹುಲುಗಮ್ಮಗೆ ಮಗ್ಗಿಯ ಕುಬುಸ ತೊಡ ಕೊಡಿರೆ ಸೋಬಾನವೇ ಸೋ॥
ಹುಲುಗಮ್ಮಗೆ ಮುತ್ತು ರತ್ನದ ಉಡಿs..... ಯಕ್ಕಿ ಸೋಬಾನವೇ ಸೋ॥
ಹುಲುಗಮ್ಮಗೆ ಗಂಧದ ಇಳೇವು ನಡೆs..... ಸಿರಿ ಸೋಬಾನವೇ ಸೋ॥

ವಾಲಿಯ ಎಲಿಯಂಗೆ ಜೋಡಿಲಿ ಸೋ ಅಂಬಾಕೆ
ವಾಲಿಯ ಕಿವಿಯ ಹನುಮವ್ವ ಸೋಬಾನವೇ ಸೋ॥

ಹುನುಮವ್ವಗೆ ಹೂವಿನ ಸೀರೆ ಉಡ ಕೊಡಿರೆ ಸೋಬಾನವೇ ಸೋ॥
ಹುನುಮವ್ವಗೆ ಮಗ್ಗಿಯ ಕುಬುಸ ತೊಡ ಕೊಡಿರೆ ಸೋಬಾನವೇ ಸೋ॥
ಹುನುಮವ್ವಗೆ ಮುತ್ತು ರತ್ನದ ಉಡಿs..... ಯಕ್ಕಿ ಸೋಬಾನವೇ ಸೋ॥
ಹುನುಮವ್ವಗೆ ಗಂಧದ ಇಳೇವು ನಡೆs..... ಸಿರಿ ಸೋಬಾನವೇ ಸೋ॥

ಹಾರುವ ಗುಂಡಿನಲ್ಲಿ ಜಂಬಪ್ಪ ತೋರುವ ಬಾನದಲ್ಲಿ ಸೋ॥

ಕಡಿಯ ಕಡಿಯೆಂಬ ಕತ್ತಿ ಭರಮಪ್ಪ ಕಡೆಯಾಗಿ ಹೋಗಲೇಳೋ ಸೋ॥

ಹಿಡಿ ಹಿಡಿಯೆಂಬ ಕತ್ತಿ ಹುಲಗಪ್ಪ ಹಿಂಬಾಗಿ ಹೋಗಲೇಳೋ ಸೋ॥

ಸಾವಿರಳ್ಯಾಗ ನಾಗಪ್ಪ ಧೀರನಾಗಿ ಬಾರೋ ಸೋ॥

ಅವರಸ್ತ ಅಡಿಯಾಗಲೋ ಹನುಮಂತ ನಿಮ್ಮ ಹಸ್ತ ಮೇಲಾಗಲೋ ಸೋ॥

ಸತ್ಯನಮ್ಮಧರ್ಮರು ಕೊಟ್ಟಂತ ಹರಕೇಲಿ ಮುತ್ತೈದೆರಾಗಿರಯೋ ಸೋ॥
ಗ್ಯಾನನಮ್ಮ ಧರ್ಮರು ಕೊಟ್ಟಂತ ಹರಕೇಲಿ ಸಾವಂತಿರಾಗಿರೆಯೋ ಸೋ॥

ಸಾಧೀನ ಸೀರೆನುಟ್ಟೆ ಸಾಧೀನಾ ಬೊಟ್ಟೆನಿಟ್ಟೆ
ಆರು ಮಂದ್ಯಾಗ ಹಾಡ ನಡೆಸಾವೇ ಸೋಬಾನವೇ ಸೋ॥

ಸಂದ ಮುಗಿದಾವೆಂದೇ ರಂಬೆ ಮಂಚವಿಳದೇ
ತಂದಾಳ ಕಂಚಿನಾ ಬಲಗೈಯಾ ಸೋಬಾನವೇ ಸೋ॥

ಇಲ್ಲಿಗೆ ನಿಮ್ಮದನಿಯಾ ನಿಲ್ಲ ವಡೀಲಿ ಸೋಬಾನವೇ ಸೋ॥
ಇಲ್ಲಿಗೆ ನಿಮ್ಮದನಿಯಾ ನಿಲ್ಲ ವಡೀಲಿ ಸೋಬಾನವೇ ಸೋ।

## ೫. ಅನುಬಂಧಗಳು

**೧. ಗೌರಿ ಮಕ್ಕಳ ಹಬ್ಬ**

ಉತ್ತರ ಕರ್ನಾಟಕದಲ್ಲಿ ಜನಪದರು ಸೂರ್ಯ, ಚಂದ್ರ, ಆಕಾಶ, ಭೂಮಿಯನ್ನು ದೈವತ್ವಕ್ಕೆ ಹೋಲಿಸಿ ಪೂಜೆ ಸಲ್ಲಿಸಿ ಅನನ್ಯಭಾವವನ್ನು ತಳೆಯುತ್ತಾರೆ. ಅದೇ ರೀತಿ ಜೋಕುಮಾರ ಸ್ವಾಮಿ, ನಾಗರಪಂಚಮಿ, ಮಣ್ಣೆತ್ತಿನ ಪೂಜೆ-ಮುಂತಾದ ಹಬ್ಬಗಳನ್ನು ಮಾಡುವುದುಂಟು. ಅಮವಾಸ್ಯೆ, ಹುಣ್ಣಿಮೆ ದಿನಗಳು ಕೂಡ ಈ ಜನಪದರಿಗೆ ವಿಶೇಷವಾಗಿ ಕಾಣುವುದುಂಟು. ಏಕೆಂದರೆ ಹೆಣ್ಣು ದೇವತೆಗಳ ಪೂಜೆಗೆ ಈ ದಿನಗಳು ತುಂಬಾ ಮಹತ್ವವಾದವುಗಳು. ಅಂತೆಯೇ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿ ಗೌರಿ ಹುಣ್ಣಿಮೆಯ ದಿನ ಗೌರಿ ಮಕ್ಕಳ ಹಬ್ಬವನ್ನು ಜಾತಿ ಭೇದ ಮರೆತು ಎಲ್ಲ ವರ್ಗದ ಜನಪದ ಮಹಿಳೆಯರು ಸಡಗರ ಸಂಭ್ರಮದಿಂದ ವಿಶೇಷವಾಗಿ ಆಚರಿಸುವುದುಂಟು. ಇದಕ್ಕೆ 'ಹಟ್ಟಿ' ಹಬ್ಬವೆಂತಲೂ ಕರೆಯುತ್ತಾರೆ. ಹಿಂದೂಗಳಲ್ಲಿ ಈ ಹಬ್ಬದ ಆಚರಣೆ ಕಂಡು ಬರುತ್ತದಾದರೂ ಉತ್ತರ ಕರ್ನಾಟಕ ಭಾಗದಲ್ಲಿ ಈ ಹಬ್ಬದ ಆಚರಣೆ ಹೆಚ್ಚಾಗಿ ಕಂಡು ಬರುತ್ತದೆ. ಹೊಸಪೇಟೆ ತಾಲೂಕಿನಲ್ಲಿ ಕೆಲವರು ಮನೆಯ ಮೇಲೆ ಅಥವಾ ಮನೆಯ ಮುಂದಿರುವ ಅಂಗಳದಲ್ಲಿ, ಇನ್ನು ಕೆಲವರು ಊರ ಹೊರಗೆ ಇರುವ ಹೊಲಗಳಲ್ಲಿ ಗೌರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗೌರಿ ಹುಣ್ಣಿಮೆಯ ದಿನ ತಮ್ಮ ತಮ್ಮ ಮನೆಯಲ್ಲಿ ಎಲ್ಲಾ ಬಾಲಹೆಣ್ಣು ಮಕ್ಕಳು ತಲೆಸ್ನಾನ ಮಾಡಿಕೊಂಡು ಮಡಿವಂತಿಕೆಯಿಂದಲೇ ಗೌರಿ ಮಕ್ಕಳಾಗುತ್ತಾರೆ. ಅಂದು ಬಾಲ ಹೆಣ್ಣುಮಕ್ಕಳಿಗೆ ಸೀರೆ ಕುಬುಸಗಳನ್ನು ತೊಡಿಸಿ ಅಂದಚೆಂದವಾಗಿ ಗೌರಿಮಕ್ಕಳನ್ನು ಸಿಂಗರಿಸುತ್ತಾರೆ. ಮನೆಯ ಅಂಗಳದ ನೆಲವನ್ನು ಆಕಳ ಸೆಗಣಿಯಿಂದ ಸಾರಿಸಿ, ಮಣ್ಣಿನಿಂದ ಅಥವಾ ಆಕಳ ಸೆಗಣಿಯಿಂದ ಐದು ಗೊಂಬೆಗಳನ್ನು ಮಾಡಿ ಅಂಗಳದ ಮಧ್ಯಭಾಗದಲ್ಲಿ ಇಡುವರು. ಅದಕ್ಕೆ "ಪಂಚ ಪಾಂಡವರು" — ಎಂದು ಕರೆಯುವ ವಾಡಿಕೆ ಉತ್ತರ ಕರ್ನಾಟಕ ಭಾಗದಲ್ಲಿ ಇದೆ. ಪಂಚ ಪಾಂಡವರ ನಡುವೆ ಒಂದು ಗೊಂಬೆಯನ್ನಿಟ್ಟು ಅದಕ್ಕೆ "ಕುಂತಿ" ಎಂದು ಹೆಸರಿಟ್ಟು ಪೂಜಿಸುವ ಈ ಪದ್ಧತಿಗೆ "ಗೌರಮ್ಮ" ಎಂದು ಕರೆಯುವ ಸಂಪ್ರದಾಯ ಈ ಭಾಗದಲ್ಲಿ ಇದೆ.

ಗೌರಮ್ಮನಿಗೆ ಅರಿಶಿಣ-ಕುಂಕುಮವನ್ನು ಹಚ್ಚಿ ಮನೆಯ ಮೇಲುಗಡೆ ಗೋಡೆ ಸುತ್ತಲೂ ನೀರು ಹಾಕಿ, ಐದು ದಿನಸಿನ ಗುಗ್ಗರಿ, ಗೆಣಸು, ಸಕ್ಕರೆ ಆರತಿ, ಹೋಳಿಗೆ, ಕಡುಬು, ಸಿಹಿಬೇಳೆ ಹುಗ್ಗಿ, ಕಡ್ಲೆಬೇಳೆ ಹುಗ್ಗಿ, ಸಜ್ಜೆರೊಟ್ಟಿ ಇತ್ಯಾದಿಗಳನಿಟ್ಟು ಗೌರಮ್ಮನಿಗೆ ಎಡೆ ಹಾಕುವ ಪದ್ಧತಿ ಜಾರಿಯಲ್ಲಿದೆ. ಹೊಸಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕುರಿ, ಕೋಳಿಯ ಮಾಂಸವನ್ನು ತಂದು ಅಡಿಗೆ ಮಾಂಸಾಹಾರಿ ಆಹಾರವನ್ನು ಗೌರಮ್ಮನಿಗೆ ಎಡೆ ಹಾಕುವುದುಂಟು. ಗೌರಮ್ಮನಿಗೆ ಕಣಗಲಿ ಹೂವು, ಹೊನ್ನರಕೆ ಹೂವು, ಸೇವಂತಿಗೆ ಹೂವು ಮುಡಿಸಿ, ಅಂಗನೂಲು ದಾರವನ್ನು ಐದು ಎಳೆ ಹಾಕಿ ಪತ್ರಿ ಮುಡಿಸಿ ಗೌರಮ್ಮನನ್ನು ಸಿಂಗರಿಸುತ್ತಾರೆ. ನಂತರ ಬಾಲ ಹೆಣ್ಣು ಮಕ್ಕಳಿಂದ ದೀಪದಾರತಿ ಮಾಡಿಸುವ ಸಂಪ್ರದಾಯವಿದೆ. ಈ ರೀತಿಯ ಪೂಜೆಯ ಕಾರ್ಯಕ್ರಮವು ಹೆಂಗಸರಿಂದಲೇ ನಡೆಯುವುದೊಂದು ವಿಶೇಷ. "ಹಬ್ಬಗಳಿರುವುದು ಮಹಿಳೆಯರಿಗಾಗಿ". ಎಂಬ ಗಾದೆ ಮಾತು ಕೂಡ ಈ ಭಾಗದಲ್ಲಿ ಪ್ರಚಲಿತದಲ್ಲಿದೆ. ಈ ರೀತಿಯ ಗೌರಮ್ಮ, ಗೌರಿಮಕ್ಕಳು ಎಂಬ ಸಡಗರ ಸಂಭ್ರಮದ ಆಚರಣೆಯು ಮಹಿಳೆಯರ ವ್ಯಕ್ತಿತ್ವವನ್ನು ಇಮ್ಮಡಿಗೊಳಿಸುವುದರ ಜೊತೆಗೆ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಗುರುತಿಸಿಕೊಳ್ಳಲು ಕೇಂದ್ರಬಿಂದುವಾಗಿದೆ.

ಗೌರಮ್ಮನ ಹಬ್ಬಕ್ಕೆ ಹಿನ್ನೆಲೆಯಾದ ಸ್ವಾರಸ್ಯಕರವಾದ ಕಥೆಯೊಂದು ಉತ್ತರ ಕರ್ನಾಟಕ ಭಾಗದ ಜನಪದರದಲ್ಲಿದೆ. ಕಥೆಯ ಪ್ರಾರಂಭವೆಂದರೆ, ಗೌರಿ ಹುಣ್ಣಿಮೆಯ ದಿನದಂದು ಒಮ್ಮೆ ತಾಯಿ ಗಾಂಧಾರಿಯಾಗಿ ದುರ್ಯೋಧನ ಮಣ್ಣಿನಿಂದ ಐರಾವತವನ್ನು

ಮಾಡಿಸಿ ಕೂಡಿಸಿರುತ್ತಾನೆ. ಮುತ್ತೈದೆಯರೆನ್ನೆಲ್ಲ ಆಹ್ವಾನಿಸಿ ಅವರಿಗೆ ಸೀರೆ, ಕುಪ್ಪಸ ಬಳೆ, ಕುಂಕುಮ — ಇತ್ಯಾದಿ ಮುತ್ತೈದೆಯರ ಮಂಗಳ ದ್ರವ್ಯಗಳ ಬಾಗೀನ ಕೊಟ್ಟು ಕಳಿಸುತ್ತಾರೆ. ದುರ್ಯೋಧನ ವ್ಯವಸ್ಥೆ ಮಾಡಿರುವ ಐರಾವತ ಕಾರ್ಯಕ್ರಮಕ್ಕೆ ಪಾಂಡವರ ಮೇಲಿನ ದ್ವೇಷಕ್ಕಾಗಿ ಕುಂತಿಗೆ ಮಾತ್ರ ಆಹ್ವಾನವಿಲ್ಲ. ಎಲ್ಲಾ ಸುಮಂಗಲೆಯರು ಈ ಕಾರ್ಯಕ್ರಮಕ್ಕೆ ಬಂದು ಹೋಗುವರು. ಈ ರೀತಿ ಬಂದು ಹೋಗುವವರೆಲ್ಲ ಕುಂತಿಯನ್ನು ವಿಚಾರಿಸುವವರೆ, ನಿನ್ಯಾಕೆ ಬರಲಿಲ್ಲ? ತಂಡೋಪತಂಡವಾಗಿ ಬರುವ ಮಹಿಳೆಯರು ಕುಂತಿಯನ್ನು ವಿಚಾರಿಸುವುದರಿಂದ ಕುಂತಿ ಅಳಲು ಸುರು ಮಾಡುತ್ತಾಳೆ. ಕುಂತಿ ಅಳುವುದನ್ನು ಕಂಡ ಭೀಮ, ನೀನ್ಯಾಕೆ ಅಳುತ್ತೀಯಾ ಅಮ್ಮ ಎಂದು ವಿಚಾರಿಸಲು ಕುಂತಿ ಎಲ್ಲ ವಿವವರಗಳನ್ನು ಭೀಮನಿಗೆ ತಿಳಿಸುವಳು. ಕೋಪಗೊಂಡ ಭೀಮನು, ನಾವು ನಿಜವಾದ ಐರಾವತವನ್ನು ದೇವಲೋಕದಿಂದ ತರುವುದಾಗಿ ತಾಯಿಯ ಮುಂದೆ ಪ್ರತಿಜ್ಞೆಗೈಯುತ್ತಾನೆ. ಅರ್ಜುನ ತನ್ನ ಅಮೋಘವಾದ ಬಿಲ್ವಿದ್ಯೆಯ ಕೌಶಲ್ಯವನ್ನು ಮೆರೆದು ಆಕಾಶ ಭೂಮಿಗೆ ಏಕವಾಗಿ ಬಾಣವನ್ನು ಬಿಡುವನು. ಅದರಿಂದ ಆಕಾಶ ಭೂಮಿಗೆ ಏಣಿ ಸಿದ್ಧವಾಗುತ್ತದೆ. ಭೀಮ ಏಣಿ ಹತ್ತಿ ದೇವಲೋಕಕ್ಕೆ ಹೊರಡುವನು. ಮಗ ಜಾರಿ ಬಿದ್ದಾನು ಎಂದು ಆಸರೆಯಾಗಿ ಕುಂತಿ ಸೆರಗನ್ನು ಒಡ್ಡುತ್ತಾಳೆ. ದೇವಲೋಕದಲ್ಲಿ ಐರಾವತದಿಂದ ಭೀಮನಿಗೆ ತೊಂದರೆಯಾಗುತ್ತದೆ. ಐರಾವತದೊಡನೆ ಭೀಮ ಹೋರಾಡಿ ಐರಾವತವನ್ನು ದೇವಲೋಕದಿಂದ ಹೊತ್ತುಕೊಂಡು ಬರುವನು. ನಂತರ ತಾಯಿ ಕುಂತಿಯನ್ನು ಐರಾವತ ಮೇಲೆ ಕೂಡಿಸಿ, ಮೆರವಣಿಗೆ ಮಾಡಲಾಗುತ್ತದೆ. ಅದನ್ನೇ ಇಂದು ಮನೆಯ ಮೇಲುಗಡೆ ಅಥವಾ ಮನೆಯ ಮುಂದೆ ಮಣ್ಣು ಮತ್ತು ಅಕಳ ಸೆಗಣಿಯಿಂದ ಐದು ಗೊಂಬೆಗಳನ್ನು ಮಾಡಿ ಅದಕ್ಕೆ ಪಂಚ ಪಾಂಡವರೆಂದು ಕರೆದು ನಡುವೆ ಒಂದು ಗೊಂಬೆಯನಿಟ್ಟು ಅದಕ್ಕೆ ಕುಂತಿ ಎಂದು ಕರೆದು ಗೌರಿ ಹುಣ್ಣಿಮೆಯ ದಿನ ಗೌರಿ ಮಕ್ಕಳ ಹಬ್ಬದ ಆಚರಣೆಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಮಾಡಲಾಗುತ್ತದೆ. ಹಬ್ಬಗಳು ಮತ್ತು ಆಚರಣೆಗಳು ನಮ್ಮ ಜನಪದರಿಗೆ ಹೆಚ್ಚು ಹೆಚ್ಚು ವಿಶಾಲವಾದ ಮತ್ತು ಜೀವನಕ್ಕೆ ಪೂರಕವಾದ ಮನೋಭೂಮಿಕೆಯನ್ನು ಬೆಳೆಸುವುದರ ಜೊತೆಗೆ ಸಂತೋಷ ಮತ್ತು ನೆಮ್ಮದಿಯನ್ನುಂಟು ಮಾಡುತ್ತವೆ.

**ದೇವಸ್ಥಾನಗಳಲ್ಲಿ ಗೌರಿಪೂಜೆ**

ಗೌರಿಹುಣ್ಣಿಮೆಯ ದಿನದಂದು ಬಾಲ ಹೆಣ್ಣು ಮಕ್ಕಳು ಚೆಂದ ಚೆಂದವಾದ ಸೀರೆ ಕುಬುಸಗಳನ್ನುಟ್ಟು ಜಡೆಯ ತುಂಬಾ ಹೂ ಮುಡಿದು, ಇನ್ನೂ ಕೆಲವರು ಮಲ್ಲಿಗೆ ಜಡೆ, ಚೆಂಡುಹೂವಿನ ಜಡೆ, ಸೇವಂತಿಗೆ ಜಡೆ ಕಟ್ಟಿಕೊಂಡು ತಲೆಗೆ ಬಂಗಾರ ಮತ್ತು ಬೆಳ್ಳಿಯಿಂದ ಮಾಡಿಸಿದ ನಾಗರವನ್ನು ಜಡೆಯಲ್ಲಿ ಇಟ್ಟುಕೊಂಡು ಕೈತುಂಬಾ ಬಳೆತೊಟ್ಟು, ಕಾಲಲ್ಲಿ ಗೆಜ್ಜೆಯ ಧರಿಸಿ, ಮುಖವನ್ನೆಲ್ಲ ಶೃಂಗರಿಸಿಕೊಂಡು ಸುಂದರವಾಗಿ ಕಾಣುತ್ತಾರೆ. ಅವರಿಗೆ ಅಂದು ಎಲ್ಲಿಲ್ಲದ ಸಡಗರ ಸಂಭ್ರಮ. ಹೆಣ್ಣು ಹಡೆದವರು ಗೌರಮ್ಮನ ಹಬ್ಬವನ್ನು ಮಾಡಲೇಬೇಕೆಂಬ ಪರಂಪರೆ ರೂಢಿಯಲ್ಲಿದೆ. ಹಾಗಾಗಿ ಗೌರಿ ಮಕ್ಕಳು ಸಕ್ಕರೆ ಆರತಿಗಳನ್ನು ತಟ್ಟೆಯಲ್ಲಿಟ್ಟುಕೊಂಡು ಹೊನ್ನಾರಿಕೆ ಹೂವು, ಪಂಚಾರತಿ ದೀಪ ಹಚ್ಚಿಕೊಂಡು ಗುಂಪು ಗುಂಪಾಗಿ ಹತ್ತಿರವಿರುವ ದೇವಸ್ಥಾನಗಳಿಗೆ ತೆರಳಿ ಗೌರಮ್ಮ ಮತ್ತು ನಂದಿಯ ಮೇಲೆ ಕುಳಿತಿರುವ ಶಿವಾ ಪಾರ್ವತಿಯರಿಗೆ ದೀಪಾದಾರತಿಯನ್ನು ಬೆಳಗುತ್ತಾರೆ. ಈ ಸಂದರ್ಭದಲ್ಲಿ ಮುತ್ತೈದೆಯರು ಕೂಡ ಗೌರಮ್ಮನಿಗೆ ದೀಪಾದಾರತಿಯನ್ನು ಬೇಳಗುವುದುಂಟು. ಗೌರಿ ಮಕ್ಕಳು ಶಿವ ಪಾರ್ವತಿಯರಿಗೆ ಕಳಸ ಬೆಳಗಿದ ನಂತರ ಗುಂಪು ಗುಂಪಾಗಿ ದೀಪದ ಬೆಳಕಿನಲ್ಲಿ ಮಿಂಚುತ್ತಾ ತಮ್ಮ ತಮ್ಮ ಮನೆಗೆ ತೆರಳುವುದನ್ನು ನೋಡುವುದೇ ಒಂದು ಚೆಂದ. ಹಾಗೆಯೇ ಗೌರಿ ಮಕ್ಕಳು ತಮ್ಮ ತಮ್ಮ ಮನೆಯ ತಲಬಾಗಿಲು, ಹೊಸ್ತಿಲಿನ ಎರಡು ಬದಿಗೆ ಹೊನ್ನಾರಿಕೆ ಹೂ ಮುಡಿಸಿ, ಅಂಗಳದಲ್ಲಿ ನಿಂತು ಸೂರ್ಯ, ಚಂದ್ರ, ಆಕಾಶಕ್ಕೆ ಕಳಸ ಬೆಳಗಿದ ನಂತರ ಗಂಗೆ ಪೂಜೆಗೆ ತೆರಳುವರು.

**ಗಂಗೆ ಪೂಜೆ**

ಜನಪದರ ನಂಬಿಕೆ ಪ್ರಕಾರ ಗೌರಮ್ಮನ ತಂಗಿ ಗಂಗೆ. ಹಾಗಾಗಿ ಗೌರಿ ಮಕ್ಕಳು ಗೌರಮ್ಮನ ಪೂಜೆಯಾದ ನಂತರ ಗೌರಮ್ಮನ ತಂಗಿಯಾದ ಗಂಗೆಯನ್ನು ಪೂಜಿಸುವುದುಂಟು. ತಮ್ಮ ತಮ್ಮ ಮನೆಗಳಿಗೆ ಹತ್ತಿರವಿರುವ ಬಾವಿಕಟ್ಟೆಗಳಿಗೆ ಹಿರಿಯ ಮಹಿಳೆಯರೊಡನೆ ತೆರಳಿ ತುಂಬಿದ ಕೊಡದ ನೀರಿನಿಂದ ಬಾವಿಯನ್ನು ತೊಳೆದು ಕೆಸರು ಮಣ್ಣಿನಿಂದ ಐದು ಗುಂಪೆ ಮಾಡಿ ಅದಕ್ಕೆ “ಗಂಗಮ್ಮ” ಎಂದು ಕರೆಯುವರು. ಈ ಮರಳು ಗಂಗಮ್ಮನಿಗೆ ಅರಿಶಿಣ-ಕುಂಕುಮ, ವಿಭೂತಿ, ಹಚ್ಚಿ ಐದೆಳೆದಾರ ಹಾಕಿ ಹೊನ್ನಾರಿಕೆ ಹೂವು ಮುಡಿಸಿ

ಊದಿನಕಡ್ಡಿ ಬೆಳಗಿ ತೆಂಗಿನಕಾಯಿ ಹೊಡೆದು ಎಡೆ ಹಾಕುವುದುಂಟು. ನಂತರ ಮನೆ ದೇವರ ಗುಡಿಗಳಿಗೆ ತೆರಳಿ ತಮ್ಮ ತಮ್ಮ ಮನೆಗಳನ್ನು ಸೇರುವರು.

**ಬೀಸುವ ಕಲ್ಲು ಪೂಜೆ**

ಉತ್ತರ ಕರ್ನಾಟಕದ ಜನಪದರು ಬೀಸುವ ಕಲ್ಲು, ಒಳಕಲ್ಲು, ಕಸಪೊರಕೆ ಮತ್ತು ಬಿದಿರಿನ ಮರವನ್ನು ಕೂಡ ಗೌರಮ್ಮ ಎಂದು ಕರೆಯುವುದು ರೂಢಿಯಲ್ಲಿದೆ. ಗೌರಿ ಹುಣ್ಣಿಮೆಯ ದಿನ ಇವುಗಳಿಗೆ ವಿಶೇಷ ಪೂಜೆಯನ್ನು ಕೂಡ ಸಲ್ಲಿಸುವುದುಂಟು. ಅವುಗಳಿಗೆ ಹೊನ್ನಾರಿಕೆ ಹೂ ಮುಡಿಸಿ, ಎಡೆ ಹಾಕಿ ಪೂಜೆ ಮಾಡಲಾಗುತ್ತದೆ. ಈ ಎಡೆಯನ್ನು ಗೌರಿ ಮಕ್ಕಳೇ ಊಟ ಮಾಡಬೇಕೆಂಬ ಸಂಪ್ರದಾಯವಿದೆ, ಗೌರಮ್ಮನ ಬಗ್ಗೆ ಇರುವ ಭಕ್ತಿ, ಗೌರವ, ನಂಬಿಕೆಗಳು ಉತ್ತರ ಕರ್ನಾಟಕ ಭಾಗದಲ್ಲಿ ಇನ್ನೂ ಜೀವಂತವಾಗಿರುವುದು ಗಮನಾರ್ಹ.

ಗೌರಿಮಕ್ಕಳು ಗೌರಿ ಹುಣ್ಣಿಮೆ ಹಬ್ಬದ ನಿಮಿತ್ತ ಸಂಜೆ ತಮ್ಮ ತಂದೆ, ತಾಯಿ, ಅಣ್ಣ, ತಮ್ಮ ಮನೆಯ ಹಿರಿಯರಿಗೆ ಸಂಬಂಧಿಕರಿಗೆ ದೀಪಾದಾರತಿಯನ್ನು ಬೆಳಗಿ ನಮಸ್ಕರಿಸಿ ಆಶೀರ್ವಾದ ಪಡೆಯುವರು. ಅವರು ಅದಕ್ಕೆ ಪ್ರತಿಯಾಗಿ ಹಣವನ್ನು ಕೊಡುವರು. ಗೌರಿಮಕ್ಕಳು ಸಾರ್ವಜನಿಕರಲ್ಲಿ ಮತ್ತು ತಮ್ಮ ಬಂಧುಗಳಲ್ಲಿ ಕೋಲಾಟವಾಡಿ ಹಣವನ್ನು ಸಂಗ್ರಹಿಸುತ್ತಾರೆ. ಇನ್ನೂ ಬಡವರು, ಗೌರಿ ಮಕ್ಕಳನ್ನು ಸಿಂಗರಿಸಿಕೊಂಡು ಮೂರು ದಿನಗಳವರೆಗೆ ಕೋಲಾಟವಾಡುವ ಮೂಲಕ ಮನೆಮನೆಗಳಿಗೆ ತೆರಳಿ ಹಣ ಹಾಗೂ ಧಾನ್ಯವನ್ನು ಸಂಗ್ರಹಿಸುತ್ತಾರೆ. ಹಿರಿಯ ಸಂಪ್ರದಾಯ ಮಹಿಳೆಯರು ಕೋಲಾಟ ಪದಗಳನ್ನು ಹಾಡಿದಂತೆ ಗೌರಿಮಕ್ಕಳು ಕೋಲಾಟವಾಡುವವು. ಕೋಲಾಟ ಪದಗಳು ತುಂಬಾ ಸೊಗಸಾಗಿರುತ್ತವೆ.

**ಉದಾ :** ಹೆಸಳ ಕ್ಯಾದಿಯಾಂಗ, ಸಸಿಯನಾಂಗ
ಹಸುಮಗಳೆ ನನ್ನ ಪೂಜಾವ್ವ ಹೂವಿನ
ಕೋಲು ಕೋಲೇ, ಕೋಲೆನ್ನಾ ಕೋಲೆ

ಎಂದು ಕೋಲಾಟ ಪದಗಳನ್ನು ಹಾಡುವರು. ಈ ಕೋಲಾಟ ಪದಗಳು ಪ್ರಾದೇಶಿಕ ಭಿನ್ನತೆಯಿಂದ ಕೂಡಿರುತ್ತವೆ. ಹೆಣ್ಣು ಹಡೆಯದ ಕೆಲವರು ಹೆಣ್ಣು ಮಕ್ಕಳನ್ನು ಕರೆತಂದು ಗೌರಿಮಕ್ಕಳನ್ನು ಮಾಡುತ್ತಾರೆ. ಗೌರಿ ಮಕ್ಕಳನ್ನು ಗೌರಿ ಹಬ್ಬದಂದು ಗಂಗೆ ಗೌರಿಯರಿಗೆ ಸಮಾನರಂತೆ ಕಾಣುವರು. ಗೌರಿ ಮಕ್ಕಳು ಗೌರಿಹುಣ್ಣಿಮೆ ಹಬ್ಬದ ದಿನದಂದು ಕಸಬರಿಗೆ, ಊಟ ಮಾಡಿದ ಎಂಜಲು ತಟ್ಟೆ, ಮೈಲಿಗೆ ಬಟ್ಟೆ ,ಕಾಳು ಕಡ್ಡಿ ಹಸನ ಮಾಡುವ ಮರ, ಪುಟ್ಟಿಗಳು, ಕೊಡ, ಇತ್ಯಾದಿ ಯಾವುದನ್ನು ಮುಟ್ಟಬಾರದೆಂಬ ನಂಬಿಕೆ ಉತ್ತರ ಕರ್ನಾಟಕದ ಜನಪದರಲ್ಲಿದೆ. ಗೌರಿ ಹುಣ್ಣಿಮೆಯ ದಿನದಂದು ಬಾಲ ಹೆಣ್ಣು ಮಕ್ಕಳು ಸಂತೋಷ ಸಡಗರ ಸಂಭ್ರಮದಿಂದ ಅಂದ ಚೆಂದವಾದ ವಸ್ತ್ರಗಳಿಂದ ಶೃಂಗಾರಗೊಂಡಿರುತ್ತಾರೆ. ವರ್ಷದಲ್ಲಿ ಕನಿಷ್ಠ ಪಕ್ಷ ಒಂದು ದಿನವಾದರೂ ಗೌರಿಮಕ್ಕಳು ವಾಸ್ತವದಲ್ಲಿ ದೈವತ್ವವಾಗಿ ಕಾಣುತ್ತಾರೆ. ಗೌರಿ ಮಕ್ಕಳಿಗೆ ಸಂಬಂಧಿಸಿದಂತೆ ಗಾದೆ ಮಾತುಗಳು ಉತ್ತರ ಕರ್ನಾಟಕದಲ್ಲಿ ಇಂದಿಗೂ ಬಳಕೆಯಲ್ಲಿವೆ. ಉದಾ: "ಉಂಡು ಆಡಿ ಗಂಡನ ಮನೆಗೆ ಹೋಗಲಿ" — ಎಂದು "ರಾಜ್ಯಕ್ಕೆ ರಾಮನಾಗಿದ್ದರೂ ಕೂಡ ರಾಗಿ ಬಿಸೋದು ತಪ್ಪಲಿಲ್ಲ" — ಎಂಬಗಾದೆ ಮಾತು, "ಗೌರಿ ಹುಣ್ಣಿಮೆಯ ದಿನ ಕನ್ಯೆ ನೋಡಲು ಹೋಗಬಾರದು ಕಾರು ಹುಣ್ಣಿಮೆಯ ದಿನ ಎತ್ತುಗಳನ್ನು ಖರೀದಿಸಬಾರದೆಂಬ" — ಗಾದೆ ಮಾತುಗಳು ಇಂದಿಗೂ ಕೂಡ ಪ್ರಚಲಿತದಲ್ಲಿವೆ.

ಒಟ್ಟಾರೆಯಾಗಿ ಗೌರಿ ಮಕ್ಕಳು ನಮ್ಮ ಸಂಸ್ಕೃತಿ ಆಚಾರ ವಿಚಾರ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಎಲ್ಲಾ ರೀತಿಯಿಂದಲೂ ಮಹಿಳೆಯು ಮೌಲ್ಯದ ಖನಿಯಾಗಿದ್ದಾಳೆ ಎಂಬುವುದನ್ನು ಮರೆಯುವಂತಿಲ್ಲ.

**೨. ಅವ್ವಣೆವ್ವ ಕಾವ್ಯವನ್ನು ಹಾಡಿದ ಕಲಾವಿದರ ಮಾಹಿತಿ**

***೧. ದೊಡ್ಡ ನಿಂಗವ್ವ***

ತಾಯಿ ಹನುಮಂತವ್ವ ತಂದೆ ನಾರಂದಪ್ಪ,
ವಯಸ್ಸು ೭೦ ವರ್ಷ, ಜಾತಿ, ನಾಯಕ ಜನಾಂಗ, ಕೃಷಿ ಕೆಲಸ,
ಮ್ಯಾಸಕೇರಿ, ೩೩ನೇ ವಾರ್ಡ್, ಹೊಸಪೇಟೆ.

***೨. ಪರುಸವ್ವ***

ತಾಯಿ ಮರು ಹುಲುಗಮ್ಮ ತಂದೆ ತಳವಾರ ತಾಯಪ್ಪ
ವಯಸ್ಸು ೭೦ ವರ್ಷ, ಜಾತಿ, ನಾಯಕ, ಕೃಷಿ ಕೆಲಸ,
ಮ್ಯಾಸಕೇರಿ, ೩೩ನೇ ವಾರ್ಡ್, ಹೊಸಪೇಟೆ.

***೩. ಕಮಲವ್ವ***

ತಾಯಿ ದೊಡ್ಡ ಹನುಮಂತವ್ವ, ತಂದೆ ಕಿಷ್ಟಪ್ಪ
ವಯಸ್ಸು ೫೫ ವರ್ಷ, ಜಾತಿ, ನಾಯಕ, ಕೃಷಿ ಕೆಲಸ,
ಮ್ಯಾಸಕೇರಿ, ೩೩ನೇ ವಾರ್ಡ್, ಹೊಸಪೇಟೆ.

***೪. ಸಣ್ಣ ಹುಲುಗವ್ವ***

ತಾಯಿ ಅಂಬವ್ವ, ತಂದೆ ಮಳಿಗೇರು ನಿಂಗಪ್ಪ,
ವಯಸ್ಸು ೬೦ ವರ್ಷ, ಜಾತಿ, ನಾಯಕ, ಕೃಷಿ ಕೆಲಸ,
ಮ್ಯಾಸಕೇರಿ, ೩೩ನೇ ವಾರ್ಡ್, ಹೊಸಪೇಟೆ.

***೫. ದೊಡ್ಡ ಹುಲುಗಮ್ಮ***

ತಾಯಿ ಸಣ್ಣ ಹನುಮವ್ವ, ತಂದೆ ನಾಗಪ್ಪ
ವಯಸ್ಸು ೫೫ ವರ್ಷ, ಜಾತಿ, ನಾಯಕ, ಕೃಷಿ ಕೆಲಸ,
ಮ್ಯಾಸಕೇರಿ, ೩೩ನೇ ವಾರ್ಡ್, ಹೊಸಪೇಟೆ.

***೬. ಲಕ್ಷ್ಮೀ***

ತಾಯಿ ದೊಡ್ಡ ಹುಲುಗವ್ವ, ತಂದೆ ತಾರಾನಾಥ
ವಯಸ್ಸು ೩೫ ವರ್ಷ, ಜಾತಿ, ನಾಯಕ, ಕೃಷಿ ಕೆಲಸ,
ಮ್ಯಾಸಕೇರಿ, ೩೩ನೇ ವಾರ್ಡ್, ಹೊಸಪೇಟೆ.

***೭. ಹನುಮಂತವ್ವ***

ತಾಯಿ ದೊಡ್ಡ ಹುನುಮವ್ವ, ತಂದೆ ನಾಗಪ್ಪ
ವಯಸ್ಸು ೫೫ ವರ್ಷ, ಜಾತಿ, ನಾಯಕ, ಕೃಷಿ ಕೆಲಸ,
ಮ್ಯಾಸಕೇರಿ, ೩೩ನೇ ವಾರ್ಡ್, ಹೊಸಪೇಟೆ.

***೮. ಹನುಮಂತಪ್ಪ***

ತಾಯಿ ಕರಿ ಹುನುಮವ್ವ, ತಂದೆ ಉತ್ತಂಗಿ ಅಜ್ಜಪ್ಪ
ವಯಸ್ಸು ೫೦ ವರ್ಷ, ಜಾತಿ, ನಾಯಕ, ಕೃಷಿ ಕೆಲಸ,
ಮ್ಯಾಸಕೇರಿ, ೩೩ನೇ ವಾರ್ಡ್, ಹೊಸಪೇಟೆ.

**<u>೩. ಪದಕೋಶ</u>**

ಅರಿವ್ಯಾನ - ತಟ್ಟೆ
ಅನ್ನಬ್ಯಾಡ್ರೆ - ಹೇಳಬೇಡಿರಿ
ಆಕಿ - ಆಕೆ
ಆಡೆಂಬ - ಹಾಡು
ಇಡೋ - ಇಡು
ಇಡದಾಳ - ಹಿಡಿದುಕೊಂಡು
ಉದ್ದಿನಕಡ್ಡಿ - ಊದಿನಕಡ್ಡಿ
ಉರಿ - ಕರುಳ ಉರಿ
ಉಳಿಸಾದಿಲ್ಲ - ಉಳುಸುವುದಿಲ್ಲ
ಎತ್ತಿಗಂಡೆ - ಎತ್ತಿಕೊಂಡು
ಎಲ್ಡು - ಎರಡು
ಐತೆ - ಇದೆ
ಕೇರ್ಯಾ - ಕೇರಿ
ಕೊಳ್ಳಳಾ - ಕೊರಳು
ಕಿವ್ಯಾಕೆ - ಕಿವಿಯಾಕೆ
ಕರಿಸ್ಯಾನೆ - ಕರಿಸಿದ್ದಾನೆ
ಕಣ್ಣ - ಕಣ್ಣು
ಕೊಂಡಾಳ - ಖರೀದಿಸು
ಕರಿ - ಕರೆ
ಕೂದ್ಲು - ಕೂದಲು
ಕಿತ್ಯಾ - ಕಿತ್ತು
ಕಂದ - ಕೂಸು
ಕೊಣ್ಣು - ಕಣ್ಣು
ಕರಕಂತ - ಕರೆಯುತ್ತಾ
ಗ್ಯಾನಿದ್ದ - ಬುದ್ಧಿವಂತ
ಗೆಣಿಯಾ - ಗೆಳೆಯ
ಗೊಡ್ಡಿ - ಬಂಜೆ

ಅಂಬುತ್ತಾರೆ - ಅನ್ನುತ್ತಾರೆ
ಅತ್ತಗಂತ - ಅಳುತ್ತಾ
ಆಸೆಕಟ್ಟಿಗೆ ಮಳಮುಂಡೆ - ವಿಧವೆ
ಆಗ್ಯಾನೆ - ಆಗಿದ್ದಾನೆ
ಇಳಿವ್ಯಾನೆ - ಇಳಿದಿದ್ದಾನೆ
ಈಬುತ್ತಿ - ವಿಭೂತಿ
ಉಡಲಾಗೆ - ಉಡೆಯಲ್ಲಿ
ಊರಾ - ಊರು
ಉಟಾನೆ - ಉಟ್ಟುಕೊಂಡು
ಎತ್ಲುತ್ತ - ಮೊದಲಿಗೆ
ಎರಡೆ - ಎರಡು
ಕಲಿತು - ಜೊತೆಗೂಡಿ
ಕಾಸಿ - ಬಿಸಿಮಾಡಿ
ಕುಂತಾರೆ - ಕುಳಿತರು
ಕುಂಬವಳಕಾಯಿ - ಕುಂಬಳ ಕಾಯಿ
ಕೊಡೆ - ಕೊಡು
ಕಟ್ಯಾಳ - ಕಟ್ಟಿದಳು
ಕಟ್ಯಾ - ಕಟ್ಟು
ಕರೀತಾನೆ - ಕರೆಯುತ್ತಾನೆ
ಕೊಟ್ಯಾನೆ - ಕೊಡುತ್ತಾನೆ
ಕರಕಂಡೆ - ಕರೆದುಕೊಂಡು
ಕಳವೀಳೆ - ಕಳ್ಳತನದಿಂದ
ಕೊಣ್ಣೆ - ಕಣ್ಣು
ಕಸಕೊಂಡೆ - ಕಸಿದುಕೊಂಡು
ಗಣಮಗ - ಗಂಡುಮಗು
ಗೋಡ್ಯಾ - ಗೋಡೆ
ಗಣಮಕ್ಕಳು - ಗಂಡುಮಕ್ಕಳು

ಗದಗಟ್ಟಿ - ಹೆದರು
ಗದ್ಲಾ - ಗಲಾಟೆ
ಗೆಣೆತೇರಾ - ಗೆಳತಿಯರು
ಚಂದಿಲ್ಲ - ಚೆಂದವಿಲ್ಲ
ಚಂಬ - ಚರಿಗಿ
ಜಡದಾಳ - ಜಡಿದು
ಜಲ್ಮ - ಜೀವ
ತಾಕ - ಹತ್ತಿರ
ತಗಂದಾರೆ - ತೆಗೆದುಕೊಂಡಿದ್ದಾರೆ
ತಿವಿಕೊಂಡು - ತಿವಿದುಕೊಂಡು
ತಂಗಿನೋರೆ - ತಂಗಿಯರೆ
ತಂದಿ - ತಂದೆ
ತುಂಬ್ಯಾಳ - ತುಂಬಿದ್ದಾಳೆ
ತಗಂಡು - ತೆಗೆದುಕೊಂಡು
ತಿದ್ದ - ತಿದ್ದು
ತಿಂಬ - ತಿನ್ನು
ತಪಸಾ - ತಪಸ್ಸು
ತೊಟ್ಲಾ - ತೊಟ್ಟಿಲು
ತಗಿವಲ್ಲ - ತೆಗೆಯುತ್ತಿಲ್ಲ
ತಲಿ - ತಲೆ
ತೀಡ್ಯಾ - ತಿಕ್ಕು
ತಪ್ಲ - ತಪ್ಪಲು
ತಿಂಬೋದೆ - ತಿನ್ನುವುದು
ದಟ್ಟಿ - ಲಂಗ
ದಂಡಿ - ದಂಡೆ
ದಾರ್ಯಾಗ - ದಾರಿ
ನಮ್ಮಿಗೆ - ನಮಗೆ
ನೀಡೆ - ಕೊಡು
ನಾಕೆ - ನಾಲ್ಕು
ನೋಡ್ಯಾ - ನೋಡು
ನಾಲಾರು - ನಾಲ್ಕು
ನೀರೆ - ನೀರು
ನಕ್ಕಾ - ನಗು
ನೈಸ್ಯಾಳೆ - ನೇಯುವುದು
ನೋಗಿ - ಹೋಗಿ
ನೊಂದೆ - ನೊಂದು
ನೆರೆಬಂದು - ಮುಪ್ಪು
ನಗರೇನೆ - ನಗುವರು
ನೆನಸ - ನೆನಪು
ನೊಸಲಿಗೆ - ಉಡಿಯಲ್ಲಿ
ಪಂಚೇನಾ - ಐದುಜನರ
ಬ್ಯಾಟಿ - ಬೇಟೆ
ಬ್ಯಾಳಿ - ಬೇಳೆ
ಬರಬ್ಯಾಡ - ಬರಬೇಡ
ಬಣಿಮ್ಯಾಕ - ಬಣವಿಮೇಲೆ
ಬೀದ್ಯಾಗ - ಬೀದಿ
ಬರ್ರೆ - ಬನ್ನೀರಿ
ಬಂದಾರೆ - ಬಂದರು
ಬರುತೈತೆ - ಬರುತ್ತದೆ
ಬಗ್ಗಿ - ಬಾಗಿ
ಬಗಿಸ್ಯಾ - ಅಪೇಕ್ಷೆ
ಬಿಗಿಸ್ಯಾ - ಬಿಗಿಸು
ಬಗಲಾಗೆ - ಬಗಲಲ್ಲಿ
ಬಂದಾಳ - ಬಂದಳು
ಬೇಡತೀನಿ - ಬೇಡುತ್ತೇನೆ
ಬಲ್ಲೋರು - ಬುದ್ಧಿವಂತರು
ಬಾದಾಳ - ಗವಾಕ್ಷಿ
ಮ್ಯಾಲೆ - ಮೇಲೆ
ಮ್ಯಾಕ - ಮೇಲೆ
ಮಾರಿ - ಮುಖ
ಮುಸಿನಗು - ಮುಗುಳನಗು
ಮಲಿಗ್ಯಾನೆ - ಮಲಗಿದ್ದಾನೆ
ಮಂತ್ಯಾಕ - ಮನೆಯತನಕ
ಮನಿಸ್ಯಾಳ - ಮಲಗು
ಮದಲಗಿತ್ತಿ - ಮದುಮಗಳು
ಮನಿ - ಮನೆ
ಮಡ್ಯಾಳ - ಮಾಡಿದಳು
ಮರಕೇನಾ - ಮರಕ್ಕೆ
ಮುಚ್ಚಿವೀದಾ - ಮುಚ್ಚಿರುವ
ಮುಟ್ಟ - ಮುಟ್ಟುಗಳು
ಮನ್ಯಾಕ - ಮನೆ
ಮನ್ಯಾಗ - ಮನೆಯಲ್ಲಿ

ಮಾಡಂತಾ - ಮಾಡುವಂತ

ಯಾಕ - ಯಾಕೆ

ರಾಮರಕುತಾ - ರಕ್ತ

ವಾರೀಗಿ - ಸಮವಯಸ್ಕರ

ಶಾಲಿ - ಶಾಲೆ

ಸಾವರಳ್ಳ್ಯಾಗ - ಸಾವಿರ ಹಳ್ಳಿಯಾಗೆ

ಸಾಸಿಅಕ್ಕಿ - ಮದುವೆ ಶಾಸ್ತ್ರ

ಸಜ್ಜೇನೆ - ಸಜ್ಜೆ

ಸುತ್ತ್ಯಾರೆ - ಸುತ್ತು

ಸಲ್ಯ್ಯಾಳ - ಚೆಲ್ಲು

ಸವರೇನೆ - ಎಲ್ಲವನ್ನು

ಸುಳಿಮಳ್ಳೆ - ಕಾದನೀರು, ಬಿಸಿನೀರು

ಸ್ವಾದರ - ಸೋದರ

ಹಾರ್ಯಾರಿ - ಹಾರಿ

ಹಾಕ್ಯ - ಹಾಕು

ಹಾವ - ಹಾವು

ಹಟ್ಯಾಗ - ಹಟ್ಟಿ

ಹಚ್ಯಾಳ - ಹಚ್ಚಿದ್ದಾಳೆ

ಹಚ್ಯಾನ - ಇಟ್ಟಾನ

ಹೇಳಿಕೆಂತಾ - ಹೇಳುತ್ತಾ

ಹೋಗ್ಯಾ - ಹೋಗು

ಯಾರ - ಯಾರು

ರಂಡೆ - ವಿಧವೆ

ವಸ್ತಿಲಾ - ಬಾಗಿಲು

ವೈದು - ತೆಗೆದುಕೊಂಡು

ಸಲ್ಯಾ - ಚೆಲ್ಲು

ಸಾರಿ - ಹೇಳಿ

ಸಂಜೇಲಿ - ಸಂಜೆ

ಸಾಕಂಬಾ - ಸಾಕೆಂಬುದು

ಸಿದಿಗಿಯಾ - ಚಟ್ಟ

ಸಿಟ್ಟೇಲಿ - ಸಿಟ್ಟು

ಸೆಳ್ಳುಗರ - ಚುಕ್ಕಿ

ಸೊಲ್ಲ - ಸೊಲ್ಲು

ಹೇಳೆ - ಹೇಳು

ಹೊಡದಾನೆ - ಹೊಡೆದಾನೆ

ಹಾದ್ಯಾಗ - ದಾರಿಯಾಗ

ಹೋಗದ್ಲು - ಹೊಗೆದಳು

ಹಾಕ್ಯಾಳ - ಹಾಕುತ್ತಾಳೆ

ಹಾಕ್ಯಾರೆ - ಹಾಕಿದ್ದಾರೆ

ಹಸಿದಾ - ಹಸಿವೆ

ಹೋಗ್ಯಾರೆ - ಹೋದರು

***